
ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: 1 ಸಂಚಿಕೆ: 6 ದ್ವೈಮಾಸಿಕ ನವೆಂಬರ್–ಡಿಸೆಂಬರ್ 2022 ಪುಟಗಳು: 56

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



## ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

## ಸಂಪದದೊಳಗೆ...


ಸಂಪಾದಕೀಯ – ಡಾ ಸುರೇಶ ಸಗರದ ಪುಟ 3
ರಾಜ್ಯಾಧ್ಯಕ್ಷರ (21–22) ನುಡಿ – ಡಾ ಕಟೀಲ್ ಸುರೇಶಕುಡ್ವಾ ಪುಟ 4
ರಾಜ್ಯಾಧ್ಯಕ್ಷರ (22–23) ನುಡಿ – ಡಾ ಎಸ್ ಬಿ ಲಕ್ಕೋಳ್ ಪುಟ 5
ಸಮಿತಿಯ ಅಧ್ಯಕ್ಷರ ನುಡಿ – ಡಾ ಅರವಿಂದ ಪಟೇಲ ಪುಟ 6
ರಕ್ತದ ಗ್ಲೂಕೋಸ್ ನಿಯಂತ್ರಣಕ್ಕೆ ಬಯೋನಿಕ್ ಪ್ಯಾಂಕ್ರಿಯಾಸ್ (ಪ್ರಚಲಿತ) – ಡಾ ಎಚ್ ಎಸ್ ಮೋಹನ ಪುಟ 7
ಎಚ್ಚರ ! ಕೆಮ್ಮಿನ ಸಿರಪ್ ಕುಡಿದು ಕೈಲಾಸ ಕಂಡೀರಿ (ಪ್ರಚಲಿತ) – ಡಾ ಕರವೀರಪ್ರಭು ಪುಟ 9
ಬದಲಾವಣೆ ಜಗದ ನಿಯಮ (ಕಥೆ) – ಡಾ ಮೃದುಲ ಎ ಎಮ್ ಪುಟ 12
ದಿವ್ಯ – ಯು.ಆರ್ ಅನಂತ ಮೂರ್ತಿ (ಕೃತಿ ಪರಿಚಯ) – ಡಾ ಪ್ರಿಯಂವದ ಅರವಿಂದನ್ ಪುಟ 16
ಪ್ರಶಸ್ತಿ ವಿಜೇತ ಕೃತಿಗಳ ಪರಿಚಯ – ಡಾ ವಿನಯಾ ಶ್ರೀನಿವಾಸ ಪುಟ 18
ಕುಟುಂಬದ ಮೇಲೆ ಮದ್ಯವ್ಯಸನದ ಕಬಂಧ ಬಾಹುಗಳು (ಕಾಯಿಲೆ) – ಡಾ ಕೆ ಆರ್ ಶ್ರೀಧರ್ ಪುಟ 20
ಗರ್ಭಿಣಿ ಸ್ತ್ರೀಯರಲ್ಲಿ ಹೃದಯಾಘಾತ (ಕಾಯಿಲೆ) – ಶ್ರೀವತ್ಸ ಎಸ್ ನಾಡಿಗ ಪುಟ 22
ವೈದ್ಯರೂ ಮನುಷ್ಯರಲ್ಲವೇ? (ವೈದ್ಯೇತರ) – ಡಾ ಕವಿತಾ ಸದಾಶಿವ ಪುಟ 24
ಒಂದು ಚಷ್ಮಾ ಕಥೆ..(ವೈದ್ಯೇತರ) – ಡಾ ರಾಘವೇಂದ್ರ ಎಫ್ ಎನ್ ಪುಟ 26
ಡಾ ಸಿ ಆರ್ ಚಂದ್ರಶೇಖರ್ – (ವ್ಯಕ್ತಿ ವಿಷಯ) – ಡಾ. ದಿವ್ಯಾ ಕೆ ಎನ್ ಪುಟ 29
ಅಂಗರಚನ ವಿಜ್ಞಾನದ ಒಂದು ವಿಹಂಗಮ ನೋಟ (ವೈದ್ಯ ಲೋಕದ ವಿಸ್ಮಯ) – ಡಾ ನಾ ಸೋಮೇಶ್ವರ ಪುಟ 31
ಸುಮನದ ಶೋಧ (ವಿದ್ಯಾರ್ಥಿ ಲೋಕ) – ಡಾ ಶರಣ್ಯ ಶಶಿಧರ ಪುಟ 34
ಕಣ್ಣುಗಳು ಹೇಳಿದ ಕಥೆಗಳು (ಅನಿವಾಸಿ ಲೋಕ) – ಡಾ ಶ್ರೀವತ್ಸ ದೇಸಾಯಿ ಪುಟ 36
ಸಮಿತಿಯಿಂದ ಕನ್ನಡ ಕಾರ್ಯಕ್ರಮಗಳು – ಡಾ ವೀಣಾ ಎನ್ ಸುಳ್ಯ ಪುಟ 39
ಶಾಖೆಗಳಲ್ಲಿ ಕನ್ನಡ – ಡಾ ವೀಣಾ ಎಸ್ ಭಟ್ ಪುಟ 42
ಸ್ತನ ಕ್ಯಾನ್ಸರ್ ಅಳುಕು ಬೇಡ, ಅರಿವು ಇರಲಿ (ಆರೋಗ್ಯ ದಿನಾಚರಣೆ) – ಡಾ ಅಪರ್ಣಾ ಶ್ರೀವತ್ಸ ಪುಟ 44
ಮಧುಮೇಹ ಮತ್ತು ನಿಮ್ಮ ಕಣ್ಣುಗಳು (ಆರೋಗ್ಯ ದಿನಾಚರಣೆ)– ಡಾ ಮಂಜುನಾಥ ಬಿಎ ಪುಟ 46
ಕಾವ್ಯ ಸಂಪದ – ಡಾ ಸಂಜೀವ ಕುಲಕರ್ಣಿ ಪುಟ 49
ಕಾವ್ಯ ಸಂಪದ – ಡಾ ಗೋವಿಂದ ಹೆಗಡೆ / ಡಾ ತನುಶ್ರೀ ಹೆಗಡೆ / ಡಾ ಕವಿತಾ ಸದಾಶಿವ ಪುಟ 50
ಪದಬಂಧ – ಡಾ ರಮೇಶ ಬಾಬು ಕೆ ಪುಟ 51
ನಗೆಹನಿ / ಹನಿಗವನ – ಡಾ ಜ್ಯೋತಿ ಘೋಂಗಡೆಮಠ / ಡಾ ಅರುಣಾ ಯಡಿಯಾಳ್ ಪುಟ 52
ಚಿತ್ರ ಸಂಪದ ಪುಟ 53


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
ಲೇಖನಗಳನ್ನು ವರ್ಡ್ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
ಪ್ರಕಟಿಸಿದ ಲೇಖನಗಳಿಗೆ ಲೇಖಕರೇ ಹೊಣೆ

ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ :
ಡಾ. ಎಸ್. ಬಿ. ಲಕ್ಕೋಳ
9448560400
ನಿಯೋಜಿತ ಅಧ್ಯಕ್ಷರು:
ಡಾ. ಎಸ್. ಶ್ರೀನಿವಾಸ್
9341238129
ಗೌರವ ಕಾರ್ಯದರ್ಶಿ :
ಡಾ. ಬಿ.ಪಿ. ಕರುಣಾಕರ
9845263322
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ :
ಡಾ. ಅರವಿಂದ ಪಟೇಲ್
draravindpatel@gmail.com |9448918764
ಪ್ರಧಾನ ಸಂಪಾದಕರು :
ಡಾ. ಸುರೇಶ ಸಗರದ
vaidyasampadaeditor@gmail.com | 9448139339
ವಿಭಾಗೀಯ ಸಂಪಾದಕರು :
ಪ್ರಚಲಿತ ವಿದ್ಯಮಾನಗಳು :
ಡಾ. ಎಚ್. ಎಸ್ ಮೋಹನ್
prachalithavs@gmail.com | 9448173670
ಕಥಾ ವಿಭಾಗ:
ಡಾ. ಸಲೀಮ ನದಾಫ
kathevaidyasampada@gmail.com | 8073048415
ಕೃತಿ ಪರಿಚಯ:
ಡಾ. ವಿನಯ ಶ್ರೀನಿವಾಸ
kruthiparichayavs@gmail.com | 9844083284
ಕಾಯಿಲೆ / ಚಿಕಿತ್ಸೆ / ಸಂಶೋಧನೆ:
ಡಾ. ಶುಬ್ರತ ಕೆ. ಎಸ್.
ddinventionsvs@gmail.com | 9448149927
ವೈದ್ಯೇತರ ಲೇಖನಗಳು:
ಡಾ. ಶಿವಾನಂದ ಕುಬಸದ
nonmedicalvs@gmail.com | 9448012767
ವ್ಯಕ್ತಿ ವಿಷಯ / ಸಂದರ್ಶನ:
ಡಾ. ದಿವ್ಯಾ ಕೆ. ಎಸ್.
personalitiesvs@gmail.com | 9886157094
ವೈದ್ಯ ಲೋಕದ ವಿಸ್ಮಯ:
ಡಾ. ನಾ ಸೋಮೇಶ್ವರ
vismayavaidyasampada@gmail.com | 9880465661
ವಿದ್ಯಾರ್ಥಿ ಲೋಕ:
ಡಾ. ಉಮಾಮಹೇಶ್ವರಿ ಎಸ್.
vidyarthivaidyasampada@gmail.com | 8277070611
ಅನಿವಾಸಿ ಲೋಕ:
ಡಾ. ಕೇಶವ ಕುಲಕರ್ಣಿ
anivasivs@gmail.com | +447852416527
ಬಳಗದ ವರದಿ:
ಡಾ. ವೀಣಾ ಎನ್. ಸುಳ್ಯ
programreportsvs@gmail.com | 9448215940
ಶಾಖೆಗಳಲ್ಲಿ ಕನ್ನಡ:
ಡಾ. ವೀಣಾ ಭಟ್
branchreportsvs@gmail.com | 9480353878
ಪದಬಂಧ / ಪದ ಕೋಶ:
ಡಾ. ಜ್ಯೋತಿ ಎಸ್. ಘೊಂಗಡೆಮಠ
padabhandhavs@gmail.com | 9242139990
ಕವನಗಳು:
ಡಾ. ಗೋವಿಂದ ಹೆಗಡೆ
poemsvaidyasampada@gmail.com | 9353118024
ಆರೋಗ್ಯ ದಿನಾಚರಣೆ:
ಡಾ. ರಶ್ಮಿ ಕುಂದಾಪುರ
healthdaysvs@gmail.com | 9880496567
ಚಿತ್ರ ಸಂಪದ:
ಡಾ. ಅರವಿಂದ ಪಟೇಲ
parisaravs@gmail.com
ಸಂಘಟನೆ / ಕೇಂದ್ರೀಯ ಸಮಾಚಾರ:
ಡಾ. ಮಧುಸೂದನ ಕಾರಿಗನೂರು
imavaidyasampada@gmail.com | 9448237145
ವಿಳಾಸ:
ವೈದ್ಯ ಸಂಪದ
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ, ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018, ದೂರವಾಣಿ: 080 26703255,
vaidyasampadaeditor@gmail.com

# ಸಂಪಾದಕೀಯ...




**ಡಾ. ಸುರೇಶ ಸಗರದ**

ಆತ್ಮೀಯ ಓದುಗರೇ,

ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ವೈದ್ಯ ಸಂಪದ ಈ ವರುಷ ಜನವರಿಯಿಂದ ಆರಂಭವಾಗಿ ವರುಷಾಂತ್ಯವನ್ನು ತಲುಪಿದೆ. ಈ ಆರನೇಯ ಸಂಚಿಕೆಯ ಮೂಲಕ ಒಂದು ವರುಷವನ್ನು ಯಶಸ್ವಿಯಾಗಿ ಪೂರೈಸುವತ್ತ ಹೆಜ್ಜೆ ಹಾಕುತ್ತಿದೆ. ಸಂಪಾದಕ ಮಂಡಳಿ ಅತ್ಯಂತ ಮುತುವರ್ಜಿಯಿಂದ ಕಾರ್ಯ ನಿರ್ವಹಿಸಿ ವೈದ್ಯ ಸಂಪದ ಎಲ್ಲರ ಮನಗಳನ್ನು ಗೆಲ್ಲುವಂತೆ ಮಾಡಿದ್ದಾರೆ. ಓದುಗರ ಧನಾತ್ಮಕ ಅಭಿಪ್ರಾಯಗಳು ಪತ್ರಿಕೆಯ ಯಶೋಗಾಥೆಯ ಸಂಕೇತಗಳು. ವಿನ್ಯಾಸ ಮತ್ತು ವಿಷಯಗಳ ಕುರಿತು ಒಳ್ಳೆಯ ಅಭಿಪ್ರಾಯಗಳು ಬಂದಿವೆ. ಸದ್ಯ ಪಿಡಿಎಫ್ ಆವೃತ್ತಿಯಲ್ಲಿ ಉಚಿತವಾಗಿ ದೊರೆಯುತ್ತಿರುವುದರಿಂದ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕನ್ನಡ ಓದುಗರನ್ನು ತಲುಪಲು ಸಾಧ್ಯವಾಗಿದೆ. ಮುದ್ರಣ ಆವೃತ್ತಿಯನ್ನು ತರಲು ಚಿಂತನೆ ನಡೆದಿದೆ. ಎಲ್ಲರನ್ನೂ ತಲುಪುವ ದೃಷ್ಟಿಯಿಂದ ಪಿಡಿಎಫ್ ಉಚಿತ ಆವೃತ್ತಿಯನ್ನು ಮುಂದುವರೆಸುವುದು ಅವಶ್ಯಕ.




ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕವನ್ನು ಸೆಪ್ಟೆಂಬರ್ 21 ರಂದು ಕರ್ನಾಟಕ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಕನ್ನಡವನ್ನು ಅಧಿಕೃತ ಭಾಷೆಯಾಗಿ ಎಲ್ಲಾ ಹಂತಗಳಲ್ಲಿ ಅನುಷ್ಠಾನಗೊಳಿಸುವದಕ್ಕಾಗಿ ಅಗತ್ಯವಾದ ಶಾಸನಾತ್ಮಕ ಬಲವನ್ನು ಒಳಗೊಂಡಂತಹ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ, ಆಡಳಿತದಲ್ಲಿ ಕನ್ನಡ ಜಾರಿ, ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವುದು ಸೇರಿದಂತೆ ಶಿಸ್ತು ಕ್ರಮಗಳ ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಪ್ರಾಧಿಕಾರ ರಚನೆ ಮಾಡುವುದಕ್ಕೆ ಅವಕಾಶ ನೀಡಲಿದೆ. ಉನ್ನತ, ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣದಲ್ಲಿ ಕನ್ನಡವನ್ನು ಒಂದು

41ನೇ ಪುಟಕ್ಕೆ



# ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

**ಡಾ. ಕಟೀಲ್ ಸುರೇಶ ಕುಡ್ವಾ**
ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ, (2021–22)
ಕರ್ನಾಟಕ ರಾಜ್ಯ ಶಾಖೆ

**ಪ್ರೀತಿಯ ಸಹೃದಯಿ ವೈದ್ಯ ಸಂಪದ ಓದುಗ ಮಿತ್ರರೇ,**

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ವಾರ್ಷಿಕ ಸಮ್ಮೇಳನ ಕಳೆದ ಅಕ್ಟೋಬರ್ 28, 29, 30ರಂದು ಆಳ್ವಾಸ್ ಮೂಡುಬಿದಿರೆ ನುಡಿಸಿರಿ ಮಂಟಪದಲ್ಲಿ ಅತ್ಯಂತ ಅದ್ದೂರಿಯಾಗಿ ಮೂಡಿ ಬಂತು. ಕಳೆದ ನಲವತ್ತು ವರ್ಷಗಳಲ್ಲಿ ನಡೆದ ಅದ್ವಿತೀಯ ಈ ಸಮ್ಮೇಳನ ಎಲ್ಲರ ಮನಸೂರೆಗೈದಿದೆ ಎಂದರೆ ತಪ್ಪಾಗಲಾರದು.

ಕಾರ್ಕಳದಂಥ ಸಣ್ಣ ಘಟಕವು ಇಂಥ ಘನ ಕಾರ್ಯಮಾಡುವುದರಲ್ಲಿ ಘಟಕದ ಎಲ್ಲ ಸದಸ್ಯರ ಕಾರ್ಯತತ್ಪರತೆ ಮತ್ತು ಉಡುಪಿಯ ಜನಪ್ರಿಯ ಶಸ್ತ್ರಚಿಕಿತ್ಸಕ ವೈದ್ಯರಾದ ಡಾ. ಸುದರ್ಶನ್ ರಾವ್ ಹಾಗೂ ಮಂಗಳೂರಿನ ಕೆಎಂಸಿಯ ಮೂಳೆ ರೋಗ ತಜ್ಞರ ವಿಭಾಗದ ಮುಖ್ಯಸ್ಥ ಡಾ. ಕೆ. ರಾಮಚಂದ್ರ ಕಾಮತ್, ಡಾ. ಸದಾನಂದ ಪೂಜಾರಿ, ಡಾ. ಆನಂದ ಬಂಗೇರ ಹಾಗೂ ಡಾ. ಗೋಪಾಲಕೃಷ್ಣ ಭಟ್‌ರವರ ಸಹಕಾರ ಕಾರಣವಾಗಿತ್ತು.

ಡಾ. ಅಣ್ಣಯ್ಯ ಕುಲಾಲ್‌ರವರ ನೇತೃತ್ವದಲ್ಲಿ ಬಿಡುಗಡೆಗೊಂಡ 'ಸಿರಿಂಜ್ ಹಿಡಿಯುವ ಕೈ ಪೆನ್ನು ಹಿಡಿದಾಗ' ಎಂಬ ಅರವತ್ತೈದು ವೈದ್ಯ ಪ್ರಮುಖರ ಜೀವನದ ಸ್ವಾರಸ್ಯಕರ ಘಟನೆಗಳನ್ನು ಒಳಗೊಂಡ ಪುಸ್ತಕ ಬಿಡುಗಡೆ ಕಾರ್ಯಕ್ರಮ ಈ ಸಮ್ಮೇಳನಕ್ಕೆ ಮೆರುಗು ನೀಡಿತು.

ಉತ್ತಮ ವೈಜ್ಞಾನಿಕ ಭಾಷಣಗಳು ಕುಟುಂಬದ ವೈದ್ಯರಿಗೆ ಹೇಳಿ ಮಾಡಿಸಿದಂತಿತ್ತು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನಾ ಪ್ರಬಂಧ ಮತ್ತು ಪೋಸ್ಟರ್ ಮಂಡನೆ ಕಾರ್ಯಾಗಾರ ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯ ಇತಿಹಾಸದಲ್ಲಿ ಪ್ರಪ್ರಥಮವಾಗಿತ್ತು. ಎಲ್ಲರ ಮನಗೆದ್ದಿತ್ತು. ಆಳ್ವಾಸ್ ತಂಡದವರು ನೀಡಿದ ಮನರಂಜನೆ ಕಾರ್ಯಕ್ರಮವಂತೂ ಅಂತಾರಾಷ್ಟ್ರೀಯ ಮಟ್ಟದ್ದಾಗಿತ್ತು. ಎಲ್ಲರೂ ಭ್ರಮಾಲೋಕದಲ್ಲಿ ತೇಲುವಂತೆ ಮಾಡಿತ್ತು.

ಸಮ್ಮೇಳನದ ಮೂರು ದಿನವೂ ರುಚಿಕರ ಕರಾವಳಿ ಶೈಲಿಯ ಊಟೋಪಚಾರವಂತೂ ಎಲ್ಲರನ್ನು ಖುಷಿಪಡಿಸುವಂತಿತ್ತು. ಮಾತ್ರವಲ್ಲದೇ ಪ್ರಾಯೋಜಕರನ್ನು ಹಾಡಿ ಹೊಗಳುವಂತೆ ಮಾಡಿತ್ತು. ಕನ್ನಡ ವೈದ್ಯ ಬರಹಗಾರರ ಉಪಸಮಿತಿ ಆಯೋಜಿಸಿದ ಪತ್ರಿಕೋದ್ಯಮ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟ ಡಾ. ಸಿ.ಆರ್. ಚಂದ್ರಶೇಖರ್ ಎಲ್ಲರ ಮನ ಗೆದ್ದರು. ಇದಲ್ಲದೆ ಕವಿ ಗೋಷ್ಠಿ ಈ ಸಮಿತಿ ಮುಂದೆ ನಡೆಸಬೇಕಾದ ಕಾರ್ಯಕ್ರಮಗಳ ಕುರಿತು ಚರ್ಚೆ, ಕನ್ನಡ ಬರಹಗಾರರ ಉಪಸಮಿತಿಯ ಮುಂದಿನ ಬೆಳವಣಿಗೆಗೆ ಸಹಕಾರವಾಗಲಿದೆ. ಉತ್ತಮ ವೈದ್ಯಕೀಯ ಬರವಣಿಗೆಗಳು ಬಂದರೆ ಅದನ್ನು ಭಾರತೀಯ ವೈದ್ಯಕೀಯ ಸಂಘದ ವತಿಯಿಂದಲೇ ಪ್ರಕಟಿಸುವ ನಿರ್ಧಾರ ಕೈಗೊಳ್ಳಲಾಯಿತು. ಒಟ್ಟಿನಲ್ಲಿ ಡಾ. ಮೋಹನ್ ಆಳ್ವರವರ ಸಹಕಾರದಿಂದ ನಡೆದ ಈ ಸಮ್ಮೇಳನದ ಸವಿನೆನಪಿನೊಂದಿಗೆ ಪ್ರಾಯೋಜಕ ಕಾರ್ಕಳ ಘಟಕವನ್ನು ಈ ಯಶಸ್ವಿ ಸಮ್ಮೇಳನಕ್ಕಾಗಿ ಭಾಗವಹಿಸಿದ ಎಲ್ಲರೂ ಶ್ಲಾಘಿಸಿದ್ದಾರೆ. ಈ ವರ್ಷ ನವನೂತನ ಬೇರೆ ಬೇರೆ ಕಾರ್ಯಕ್ರಮ ಹಮ್ಮಿಕೊಂಡ ನಮಗೆ ಈ ಸಮ್ಮೇಳನದ ಯಶಸ್ಸು ಸುಖ ಪ್ರಸವವಾದ ನೆಮ್ಮದಿ ನೀಡಿದೆ. ಆತ್ಮ ತೃಪ್ತಿಯಿಂದ ಮುಂದಿನ ಅಧ್ಯಕ್ಷರಾದ ಡಾ. ಶಿವಕುಮಾರ್ ಲಕ್ಕೋಳವರಿಗೆ ಅಧಿಕಾರ ಹಸ್ತಾಂತರಿಸಲು ಸಂತಸವಾಗುತ್ತಿದೆ. ಪ್ರತಿ ಘಟಕಗಳು ಈ ವರ್ಷ ಉತ್ತಮ ಕಾರ್ಯಕ್ರಮಗಳನ್ನು ನೀಡಿ ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯನ್ನು ಎತ್ತರಕ್ಕೆ ಬೆಳೆಸಿದ್ದಾರೆ. ಕನ್ನಡ ಬರಹಗಾರರ ವೇದಿಕೆಯಂತೂ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಸಾಧಾರಣ ಕಾರ್ಯಕ್ರಮವನ್ನು ಮಾಡಿದೆ. ಮುಂದಿನ ವರ್ಷವೂ ಇದಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳು ಮೂಡಿಬರಲಿ ಎಂದು ಹಾರೈಸುತ್ತೇನೆ.

ಒಗ್ಗಟ್ಟಿನಲ್ಲಿ ಬಲವಿದೆ,

ಜೈ ಹಿಂದ್ ಜೈ ಕರ್ನಾಟಕ

ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ...

ಇತೀ ನಿಮ್ಮವ

**ಡಾ|ಸುರೇಶ್ ಕುಡ್ವಾ**



**ಡಾ॥ ಶಿವಕುಮಾರ ಬಿ. ಲಕ್ಕೋಳ**
ಅಧ್ಯಕ್ಷರು (2022–23)
ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು

# ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಹೊಸತನವೆ ಬಾಳು ಹಳಸಕೆಯಲ್ಲಿ ಸಾವು ಬಿಡು।
ರಸವು ನವನವತೆಯಿಂದನುದಿನವು ಹೊಮ್ಮಿ॥
ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲ್ಲಿ।
ಪಸರುತಿದೆ ಬಾಳ ಚೆಲುವು ಮಂಕುತಿಮ್ಮ॥

ಜೀವನ / ಸಾಹಿತ್ಯ ನಿಂತ ನೀರಾಗಬಾರದು ಹರಿಯುವ ನೀರಾಗಬೇಕು. ನಿಂತ ನೀರು ಚೈತನ್ಯ ಕಳೆದು ತನ್ನ ತನವನ್ನು ಕಳೆದುಕೊಳ್ಳುವುದು. ಅದರ ಬದಲಿಗೆ ಚೈತನ್ಯ ಪಡೆದು ಹೊಸ ಹೊಸದರ ಕಡೆಗೆ ಮುನ್ನಡೆಯಬೇಕು ಎಂಬುದು ಡಿ.ವಿ.ಜಿ.ಯವರ ಆಶಯ.

ಉತ್ತರ ಕರ್ನಾಟಕದ ವಿದ್ಯಾಕಾಶಿಯೆಂದು ಕರೆಸಿಕೊಂಡ ಧಾರವಾಡವು ಮೊದಲಿನಿಂದಲೂ ಜಾಗೃತವಾದ ಶೈಕ್ಷಣಿಕ ಸ್ಥಳ. ಭಾರತೀಯ ವೈದ್ಯಕೀಯ ಸಂಘ, ಕನ್ನಡ ವೈದ್ಯ ಬರಹಗಾರರ ಸಮಿತಿ ಹಾಗೂ ವಿದ್ಯಾವರ್ಧಕ ಸಂಘದ ಸಂಯುಕ್ತ ಆಶ್ರಯದಲ್ಲಿ ಇಲ್ಲಿ ನಡೆದ ತೃತೀಯ ವಾರ್ಷಿಕ ಸಮ್ಮೇಳನದಲ್ಲಿ ಅನೇಕ ಹೆಸರಾಂತ ವೈದ್ಯ ಬರಹಗಾರರು, ಅನೇಕ ವಿದ್ವಾಂಸರು ಪ್ರಗತಿಪರ ಚಿಂತಕರು, ಅನುಭವಿ ಹಿರಿಯರು ತಮ್ಮ ಮನದಾಳದ ಭಾವನೆಗಳನ್ನು ವ್ಯಕ್ತಪಡಿಸಿದ್ದು ಎಲ್ಲರೂ ಸ್ವಾಗತಿಸಬೇಕಾದ ಮುಖ್ಯ ಅಂಶ.

ಸಾಮಾನ್ಯವಾಗಿ ಪ್ರತಿಯೊಬ್ಬರು ವೈದ್ಯರೆಂದರೆ ಇಂಗ್ಲೀಷ್‌ನಲ್ಲಿ ಮಾತನಾಡಬೇಕು ಹಾಗೂ ಇಂಗ್ಲೀಷಲ್ಲಿಯೇ ವಿವರನೀಡಬೇಕೆಂಬ ಭಾವನೆ ಮೊದಲಿನಿಂದಲೂ ಬೆಳೆದುಬಂದುದು. ಆದರೆ ಪ್ರತಿಯೊಬ್ಬರು ಸಾಮಾನ್ಯರ ಜೊತೆ ಬೆರೆಯಬೇಕು ಹಾಗೂ ಸಾಮಾನ್ಯರಿಗೆ ಉಪಯುಕ್ತ ಮಾಹಿತಿ ನೀಡಬೇಕೆಂದರೆ ಮಾತೃಭಾಷೆ / ಕನ್ನಡ ಅತ್ಯವಶ್ಯಕ. ಅಂತೆಯೇ ತಿಳಿಗನ್ನಡದಲ್ಲಿ ತಿಳಿಸಿದರೆ ಅದು ಮನದಾಳದಲ್ಲಿ ಅಚ್ಚಳಿಯದೆ ಉಳಿಯುವುದು ಅಂತೆಯೇ ಕನ್ನಡ ಎಂದರೆ—

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಬರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ...
ಸುಲಭವಾಗುವುದೆಂದು ಮಹಾಲಿಂಗರಂಗರು ಹೇಳುತ್ತಾರೆ.

ಕನ್ನಡ ಎನೆ ಕುಣಿದಾಡುವುದೆನ್ನೆದೆ,
ಕನ್ನಡ ಎನೆ ಕಿವಿ ನಿಮಿರುವುದು...
ಎಂದು ರಾಷ್ಟ್ರಕವಿ ಕುವೆಂಪು
ಅವರು ತಮ್ಮ ಕನ್ನಡಾಭಿಮಾನ ವ್ಯಕ್ತ ಪಡಿಸುತ್ತಾರೆ.

ವೈದ್ಯ ಸಂಪದ ಪತ್ರಿಕೆಯ ಮೂಲ ಉದ್ದೇಶವು ಕೂಡಾ ಇದೆ ಆಗಿದೆ. ಪ್ರತಿಯೊಬ್ಬ ವೈದ್ಯರು ಹಾಗೂ ವೈದ್ಯ ಸಾಹಿತಿಗಳು ಕನ್ನಡದ ಕೈಂಕರ್ಯದಲ್ಲಿ ತೊಡಗಿದರೆ ನಮ್ಮ ಗುರಿ ಸಾರ್ಥಕವಾಗುತ್ತದೆ.

11ನೇ ಪುಟಕ್ಕೆ



## ವೈದ್ಯ ಸಂಪದ ಪತ್ರಿಕೆಯ ಓದುಗರಿಗೆಲ್ಲ ಶುಭಾಶಯಗಳು

**ಡಾ. ಅರವಿಂದ ಪಟೇಲ್**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ

**ಆತ್ಮೀಯರೇ**

ಕನ್ನಡ ವೈದ್ಯ ಬರಹಗಾರರ ಸಮಿತಿ, ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯ ಹೆಮ್ಮೆಯ ವೈದ್ಯಸಂಪದ 6ನೇ ಸಂಚಿಕೆ ತಮ್ಮೆದುರು ಬರುತ್ತಿದೆ.ಈಗಾಗಲೇ ತಿಳಿದಿರುವಂತೆ ವೈಶಿಷ್ಟತೆಯನ್ನು ಗುಣಮಟ್ಟವನ್ನು ಕಾಪಾಡುತ್ತ ಬರಲು ಡಾ ಸುರೇಶ ಸಗರದ ನೇತೃತ್ವದ ಸಂಪಾದಕೀಯ ಮಂಡಳಿಯ ಆಸಕ್ತಿ ಮತ್ತು ಶ್ರಮವಿದೆ.

ಇತ್ತೀಚೆಗೆ ಮುಕ್ತಾಯಗೊಂಡ ಮೂಡಬಿದರೆಯ ಸಮ್ಮೇಳನದಲ್ಲಿ ಡಾ ಶ್ಯಾಮಪ್ರಸಾದ ರ ಸ್ಮರಣಾರ್ಥ ವೈದ್ಯಕೀಯ ಕೃತಿ ಡಾ ಕೆ ಎಸ್ ಪವಿತ್ರ ರಚಿತ "ಚಿತ್ತ ಸಮುದ್ರ"ಕ್ಕೆ ನೀಡಲಾಯಿತು ಹಾಗೂ ಸಾಹಿತ್ಯ ಪ್ರಶಸ್ತಿ ಡಾ ಶಾಂತಲಾ ರಚಿತ "3019ಎ.ಡಿ" ಕೃತಿಗೆ ನೀಡಲಾಯಿತು. ಈ ಪ್ರಶಸ್ತಿಗಳ ಪ್ರಾಯೋಜಕರು ಡಾ ಇಂದಿರಾ ದೊಡ್ಡಬಳ್ಳಾಪುರ. ಇದೇ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

ಡಾ ಸುನಂದ ಕುಲಕರ್ಣಿಯವರ ಹೆಸರಲ್ಲಿ ನೀಡಲಾಗುವ ಹಸ್ತಪ್ರತಿ ಪ್ರಶಸ್ತಿ ಡಾ ನಾ ಸೋಮೇಶ್ವರ ರವರ ಪೂರ್ವ ಸೂರಿಯ ಹೆಗಲೇರಿ ಪಡೆಯಿತು. ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿಗೆ "ನಿನ್ನೆ ನಿನ್ನೆಗೆ ಇಂದು ಇಂದಿಗೆ" ಕೃತಿ ಕರ್ತೃ ಡಾ ವಿನಯ ಶ್ರೀನಿವಾಸ್ ಭಾಜನರಾದರು.

ಕುವೆಂಪು ಸಭಾಂಗಣದಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಸಂವಾದ ಕಾರ್ಯಕ್ರಮ ಹಿರಿಯ ಮನೋವೈದ್ಯರಾದ ಡಾ ಸಿ ಆರ್ ಚಂದ್ರಶೇಖರ್‌ರಿಂದ ನಡೆಯಿತು. ವಿದ್ಯಾರ್ಥಿಗಳಿಂದ ವಿಷಯಗಳು ಮಂಡಿಸಲ್ಪಟ್ಟದ್ದು ವಿಶೇಷ. ಡಾ ವೀಣಾ ರವರು ಕಾರ್ಯಕ್ರಮ ನಿರೂಪಿಸಿದರು.

ಮಧ್ಯಾಹ್ನ ಡಾ ಕೆ ಆರ್ ಶ್ರೀಧರ್, ಡಾ ಎಸ್.ಪಿ.ಯೋಗಣ್ಣ ಮತ್ತು ಡಾ ಸಿಆರ್ ಚಂದ್ರಶೇಖರ್ ಗಳೊಂದಿಗೆ ಬರಹಗಾರರು ಸಂವಾದ ನಡೆಸಿದರು. ಮುಂದಿನ ಕಾರ್ಯಯೋಜನೆಗಳತ್ತ ಬೆಳಕು ಚೆಲ್ಲಲು ಅನುಕೂಲವಾಯಿತು. ಡಾ ಶುಭ್ರತ ಕಾರ್ಯಕ್ರಮವನ್ನು ನಿರ್ವಹಿಸಿದರು.

ನಂತರ ನಡೆದ ಕವಿಗೋಷ್ಠಿಯಲ್ಲಿ ವೈದ್ಯರ ಕವಿತೆಗಳು ಗಮನ ಸೆಳೆದವು ಅಧ್ಯಕ್ಷತೆ ವಹಿಸಿದ್ದ ಡಾ ಶ್ರೀಶೈಲ ಮಾದಣ್ಣನವರು ಗ್ರಾಮೀಣ ಸೊಗಡಿನಲ್ಲಿ ತಮ್ಮ ಅನುಭವ ಹಂಚಿಕೊಂಡರು. ಡಾ ಅಣ್ಣಯ್ಯ ಕುಲಾಲರು ಕವಿಗೋಷ್ಠಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಡಾ ಕಟೀಲ್ ಸುರೇಶ ಕುಡ್ವ ರಾಜ್ಯಾಧ್ಯಕ್ಷರು ಮತ್ತು ಪದಾಧಿಕಾರಿಗಳು ಬರಹಗಾರರ ಸಮಿತಿಯ ಕಾರ್ಯವನ್ನು ಮೆಚ್ಚಿ ಸಮಿತಿಯನ್ನು ಅಭಿನಂದಿಸಲಾಯಿತು.

ವರುಷದುದ್ದಕ್ಕೂ ಪ್ರತಿ ಹಂತದಲ್ಲೂ ಸಹಕರಿಸಿದ ಉಪಸಮಿತಿಯ ಸದಸ್ಯರೆಲ್ಲರನ್ನೂ ನೆನೆಯುವೆ.

ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ


**ಡಾ. ಅರವಿಂದ ಪಟೇಲ್**
ಅಧ್ಯಕ್ಷರು
ಕನ್ನಡ ವೈದ್ಯಬರಹಗಾರರ ಸಮಿತಿ



ಪ್ರಚಲಿತ...

# ರಕ್ತದ ಗ್ಲೂಕೋಸ್ ನಿಯಂತ್ರಣಕ್ಕೆ ಬರಲಿದೆ ಬಯೋನಿಕ್ ಪ್ಯಾಂಕ್ರಿಯಾಸ್ !

**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ವಿಜಯ ಐ ಕ್ಲಿನಿಕ್, ಸಿಟಿ ಮುನಸಿಪಲ್ ಕಛೇರಿ ಎದುರು, ಸಾಗರ 577401




ತಮಗೆಲ್ಲಾ ಗೊತ್ತಿರುವಂತೆ ಜ್ಯುವಿನೈಲ್ ಡಯಾಬಿಟಿಸ್ ಅಥವಾ ಟೈಪ್ 1 ಡಯಾಬಿಟಿಸ್ ಇರುವವರಿಗೆ ರಕ್ತದಲ್ಲಿ ಗ್ಲುಕೋಸ್ ಮಟ್ಟ ಕಾಯ್ದುಕೊಳ್ಳಲು ಇನ್ಸುಲಿನ್ ಅವಶ್ಯಕವಾಗಿ ಬೇಕೇ ಬೇಕು. ಇತ್ತೀಚೆಗೆ "ಬಯೋನಿಕ್ ಪ್ಯಾಂಕ್ರಿಯಾಸ್" ಎಂಬ ಹೊಸ ರೀತಿಯ ಚಿಕಿತ್ಸೆಯನ್ನು ಕಂಡು ಹಿಡಿಯಲಾಗಿದೆ. ಇದು ಇತ್ತೀಚಿನ ತಾಂತ್ರಿಕತೆಯನ್ನು ಉಪಯೋಗಿಸಿ ರಕ್ತಕ್ಕೆ ಅಗತ್ಯವಿರುವ ಇನ್ಸುಲಿನ್ ಅನ್ನು ಆಟೋಮ್ಯಾಟಿಕ್ ಆಗಿ ಪೂರೈಸುತ್ತದೆ. ಇದು ನಿರಂತರವಾಗಿ ಮಾನಿಟರ್ ಮಾಡುವ ವ್ಯವಸ್ಥೆಯನ್ನು ಹೊಂದಿದ್ದು ಇನ್ಸುಲಿನ್ ಡೋಸ್ ಅನ್ನು ರೋಗಿಗೆ ಅಗತ್ಯವಿದ್ದಷ್ಟು ಮಾತ್ರ ನಿಯಂತ್ರಿಸಿ ಅಷ್ಟನ್ನೇ ಪೂರೈಸುವ ಸೌಲಭ್ಯ ಹೊಂದಿದೆ.

ಇತ್ತೀಚೆಗೆ ಅಮೆರಿಕದಲ್ಲಿ 16 ಸ್ಥಳಗಳಲ್ಲಿ ಇದರ ಕ್ಲಿನಿಕಲ್ ಟ್ರಯಲ್ ಮಾಡಲಾಯಿತು. ಈಗ ಇರುವ ಸ್ಟ್ಯಾಂಡರ್ಡ್ ವ್ಯವಸ್ಥೆ ಮತ್ತು ಬಯೋನಿಕ್ ಪ್ಯಾಂಕ್ರಿಯಾಸ್ ನ ಸತತ ಗ್ಲೂಕೋಸ್ ಮಾನಿಟರ್ ಅನ್ನು ಈ ಟ್ರಯಲ್ ನಲ್ಲಿ ತುಲನೆ ಮಾಡಲಾಯಿತು. ಈ ಅಧ್ಯಯನ ಇತ್ತೀಚಿನ "ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್" ನಲ್ಲಿ ಪ್ರಕಟವಾಗಿದೆ. ಈ ಅಧ್ಯಯನದಲ್ಲಿ 6 ರಿಂದ 79 ವರ್ಷದವರೆಗಿನ ಟೈಪ್ 1 ಡಯಾಬಿಟಿಸ್ ಇರುವ ಕನಿಷ್ಠ ಒಂದು ವರ್ಷವಾದರೂ ಇನ್ಸುಲಿನ್ ಉಪಯೋಗಿಸುತ್ತಿರುವ 326 ಜನರನ್ನು ನೋಂದಣಿ ಮಾಡಿಕೊಳ್ಳಲಾಯಿತು. ಇವರನ್ನು 2 ಗುಂಪುಗಳಾಗಿ ವಿಂಗಡಿಸಲಾಯಿತು. ಒಂದು ಗುಂಪಿನಲ್ಲಿ ಬಯೋನಿಕ್ ಪ್ಯಾಂಕ್ರಿಯಾಸ್ ಅಳವಡಿಸಲಾಯಿತು. ಮತ್ತೊಂದರಲ್ಲಿ ಗ್ಲೂಕೋಸ್ ಮಾನಿಟರ್ ಮಾಡಿ ಇನ್ಸುಲಿನ್ ಕೊಡುವ ಎಂದಿನ ಪದ್ಧತಿ ಮುಂದುವರಿಸಲಾಯಿತು. ಬಯೋನಿಕ್ ಪ್ಯಾಂಕ್ರಿಯಾಸ್ ಅಳವಡಿಸಿದ ಗುಂಪಿನ ರೋಗಿಗಳಲ್ಲಿ




ರಕ್ತದ ಸಕ್ಕರೆ ಅಂಶವನ್ನು ಕಂಡುಹಿಡಿಯುವ ಅವಶ್ಯಕತೆ ಬೀಳಲಿಲ್ಲ. ಹಾಗೆಯೇ ಪುನಃ ಇನ್ಸುಲಿನ್ ಚುಚ್ಚುವ ಅವಶ್ಯಕತೆಯೂ ಬೀಳಲಿಲ್ಲ. ಏಕೆಂದರೆ ಈ ಉಪಕರಣ ರಕ್ತದಲ್ಲಿನ ಗ್ಲೂಕೋಸ್ ಅಂಶವನ್ನು ಸರಿಯಾಗಿ ಲೆಕ್ಕ ಹಾಕಿ ಅಗತ್ಯ ಇರುವ ಇನ್ಸುಲಿನ್ ಅನ್ನು ರಕ್ತಕ್ಕೆ ಸೇರಿಸುವ ವ್ಯವಸ್ಥೆ ತನ್ನಿಂದ ತಾನೇ ಮಾಡುತ್ತದೆ. ಬಯೋನಿಕ್ ಪ್ಯಾಂಕ್ರಿಯಾಸ್ ಉಪಯೋಗಿಸಿದವರಲ್ಲಿ ಗ್ಲೈಕೇಟೆಡ್ ಹಿಮೋಗ್ಲೋಬಿನ್ ಮಟ್ಟ ಶೇಕಡಾ 7.9 ರಿಂದ 7.3 ಕ್ಕೆ ಉತ್ತಮಗೊಂಡಿತು. ಇನ್ನೊಂದು ಗುಂಪಿನಲ್ಲಿ ಈ ಮಟ್ಟದಲ್ಲಿ ಏನೂ ಬದಲಾವಣೆ ಕಂಡುಬರಲಿಲ್ಲ. HbA1C ಎಂದು ಕರೆಯುವ ಈ ಗ್ಲೈಕೇಟೆಡ್ ಹಿಮೋಗ್ಲೋಬಿನ್ ಮಟ್ಟ ರಕ್ತದಲ್ಲಿನ ದೀರ್ಘಕಾಲದ ಗ್ಲೂಕೋಸ್ ನಿಯಂತ್ರಣವನ್ನು (ಸಾಮಾನ್ಯವಾಗಿ ಮೂರು ತಿಂಗಳು) ಸೂಚಿಸುತ್ತದೆ.

**ರಕ್ತದಲ್ಲಿನ ಸಕ್ಕರೆಯ ಅಂಶದ ಏರು ಪೇರು :**

ಜ್ಯುವಿನೈಲ್ ಡಯಾಬಿಟಿಸ್ ಅಥವಾ ಟೈಪ್ 1 ಡಯಾಬಿಟಿಸ್ ನಲ್ಲಿ ಆರೋಗ್ಯಕ್ಕೆ ಸರಿಹೊಂದುವ ರೀತಿಯ ಆಹಾರ, ಸೂಕ್ತ ದೈಹಿಕ ಶ್ರಮ– ಇವುಗಳ ಜೊತೆಗೆ ರಕ್ತದಲ್ಲಿನ ಸಕ್ಕರೆಯ ಅಂಶವನ್ನು ಸೂಕ್ತವಾಗಿ ಮಾನಿಟರ್ ಮಾಡುವುದು, ಅಗತ್ಯಬಿದ್ದಾಗ ಇನ್ಸುಲಿನ್ ಇಂಜೆಕ್ಷನ್ ತೆಗೆದುಕೊಳ್ಳುವುದು – ಇವು ಮುಖ್ಯವಾದ ವಿಚಾರಗಳು. ರಕ್ತದಲ್ಲಿನ ಗ್ಲುಕೋಸ್ ನ ಮಟ್ಟವನ್ನು ಅಪೇಕ್ಷಿತ ಪರಿಧಿಯಲ್ಲಿ ಯಾವಾಗಲೂ ಇರುವಂತೆ ನೋಡಿಕೊಳ್ಳುವುದು ಬಹು ದೊಡ್ಡ ಸವಾಲು. ಇದನ್ನು ಸಮರ್ಥವಾಗಿ ನಿಭಾಯಿಸಲು ಈಗಿರುವ ವ್ಯವಸ್ಥೆಯ ಪ್ರಕಾರ ಆಗಾಗ ರಕ್ತದಲ್ಲಿನ ಗ್ಲುಕೋಸ್ ಮಟ್ಟವನ್ನು ಅಳೆಯಬೇಕು. ಅದರಂತೆ ಮತ್ತೆ ಮತ್ತೆ ಇನ್ಸುಲಿನ್ ಇಂಜಕ್ಷನ್ ಅನ್ನು ಚುಚ್ಚಿಕೊಳ್ಳುತ್ತಿರಬೇಕಾಗುತ್ತದೆ. ಇದು ಯಾವುದೇ ವ್ಯಕ್ತಿಗೆ ತನ್ನ ದೈನಂದಿನ ಜೀವನ, ಕೆಲಸದ ಜೊತೆ ಸಹ್ಯವಾಗುವ ವಿಚಾರ ಅಲ್ಲ. ಅದನ್ನು ನೀಗಿಸಲು ಈ ಬಯೋನಿಕ್ ಪ್ಯಾಂಕ್ರಿಯಾಸ್ ಬಹಳ ಸೂಕ್ತವಾದ ವ್ಯವಸ್ಥೆ ಎಂದು ವಿವಿಧ ತಜ್ಞರು ಅಭಿಪ್ರಾಯಪಡುತ್ತಾರೆ. ಅವರುಗಳಲ್ಲಿ ಮುಖ್ಯವಾದವರು : ಯು ಕೆ ಯ ನ್ಯಾಷನಲ್ ಹೆಲ್ತ್ ಸರ್ವಿಸಸ್ ನ ಎಂಡೋಕ್ರೈನಾಲಜಿಸ್ಟ್ ಪ್ರೊ. ಫ್ರಾಂಕ್ ಜೋಸೆಫ್ ಮತ್ತು ಅಮೆರಿಕದ ಮತ್ತೊಬ್ಬ ತಜ್ಞ ಡಾ. ನೋರಾ ಲಾನ್ಸೆನ್.

ಆಗಾಗ ಗ್ಲುಕೋಸ್ ಮಟ್ಟ ಲೆಕ್ಕ ಹಾಕುವುದನ್ನು ತಪ್ಪಿಸಿ ಆಟೋಮೇಟೆಡ್ ವ್ಯವಸ್ಥೆ ತರುವುದರಿಂದ ರಕ್ತದ ಗ್ಲುಕೋಸ್ ಮಟ್ಟವನ್ನು ತುಂಬಾ ನಿಖರತೆಯಿಂದ ದೇಹದಲ್ಲಿ ಇಟ್ಟುಕೊಳ್ಳಬಹುದು. ಹಾಗೆಯೇ ಹೈಪರ್ ಗ್ಲೈಸೀಮಿಯ ( ರಕ್ತದಲ್ಲಿ ಸಕ್ಕರೆಯ ಅಂಶ ಜಾಸ್ತಿಯಾಗುವುದು ) ಮತ್ತು ಹೈಪೋಗ್ಲೈಸಿಮಿಯಾ ( ಸಕ್ಕರೆಯ ಅಂಶ ಕಡಿಮೆಯಾಗುವುದು) – ಈ ಎರಡೂ ವಿರುದ್ಧ ರೀತಿಯ ವ್ಯವಸ್ಥೆ ದೇಹದಲ್ಲಿ ಆಗುವುದನ್ನು ತಪ್ಪಿಸಬಹುದು. ಡಯಾಬಿಟಿಸ್ ಅನ್ನು ಸರಿಯಾಗಿ ನಿಯಂತ್ರಣದಲ್ಲಿ ಇಡದಿದ್ದರೆ ಹಲವು ರೀತಿಯ ತೊಡಕುಗಳು ಉದಾ: ಡಯಾಬಿಟಿಕ್ ಕೀಟೋ ಅಸಿಡೋಸಿಸ್ ಕಾಣಿಸಿಕೊಳ್ಳಬಹುದು. ಇವು ಕೊನೆಯಲ್ಲಿ ರೋಗಿಯ ಮರಣದಲ್ಲಿ ಪರ್ಯವಸಾನ ಹೊಂದಬಹುದು.



ಮೇಲಿನ ಟ್ರಯಲ್ ಅಥವಾ ಅಧ್ಯಯನದಲ್ಲಿ ಬಯೋನಿಕ್ ಪ್ಯಾಂಕ್ರಿಯಾಸ್ ಉಪಕರಣ ರಕ್ತದಲ್ಲಿನ ಸಕ್ಕರೆಯ ಅಂಶವನ್ನು "ಟಾರ್ಗೆಟ್ ರೇಂಜ್ " ನಲ್ಲಿ ಬಹಳ ಹೊತ್ತು ಹಿಡಿದಿಟ್ಟಿತ್ತು ಎಂಬುದು ಬಹಳ ಗಮನಾರ್ಹ ಅಂಶ ಎಂದು ವಿವಿಧ ತಜ್ಞರ ಅಭಿಪ್ರಾಯ. ರಕ್ತದಲ್ಲಿ ಸಕ್ಕರೆಯು ಇರಬೇಕಾದ ಸರಿಯಾದ ಮಟ್ಟವೇ "ಟಾರ್ಗೆಟ್ ರೇಂಜ್ ". ಅಂದರೆ ಗ್ಲೂಕೋಸ್ ದೇಹಕ್ಕೆ ಬೇಕಾದ ಮಟ್ಟಕ್ಕಿಂತ ಜಾಸ್ತಿಯೂ ಆಗಬಾರದು, ಕಡಿಮೆಯೂಆಗಬಾರದು.

ಈ ತಾಂತ್ರಿಕತೆ ಇನ್ನೂ ಆರಂಭದ ಹಂತದಲ್ಲಿದೆ. ಇದರಲ್ಲಿ ಇನ್ನೂ ಹಲವಾರು ಉತ್ತಮಬೆಳವಣಿಗೆಗಳು ಆಗಿ ಈ ರೀತಿಯ ಡಯಾಬಿಟಿಸ್ ರೋಗಿಗಳಿಗೆ ಇದು ವರದಾನವಾಗಬಲ್ಲದು. ಹಾಗೂ ಭವಿಷ್ಯದಲ್ಲಿ ಈಗಿರುವ ವ್ಯವಸ್ಥೆಯನ್ನೇ ಬದಲಿಸಿ "ಬಯೋನಿಕ್ ಪ್ಯಾಂಕ್ರಿಯಾಸ್ " ವ್ಯವಸ್ಥೆಯೇ ಉಪಯೋಗದಲ್ಲಿ ಬರಬಹುದು ಎಂದು ತಜ್ಞರ ಆಶಯ, ನಿರೀಕ್ಷೆ.



ಪ್ರಚಲಿತ...

# ಎಚ್ಚರ ! ಕೆಮ್ಮಿನ ಸಿರಪ್ ಕುಡಿದು ಕೈಲಾಸ ಕಂಡೀರಿ....!!

**ಡಾ ಕರವೀರಪ್ರಭು ಕ್ಯಾಲಕೊಂಡ**
ವಿಶ್ರಾಂತ ಜಿಲ್ಲಾ ಶಸ್ತ್ರಚಿಕಿತ್ಸಕರು, ಕ್ಯಾಲಕೊಂಡ ಆಸ್ಪತ್ರೆ,
ಬಾದಾಮಿ. 587201. ಮೊ : 9448036207

ಕೆಮ್ಮನ್ನು ಗೌಪ್ಯವಾಗಿಡಲು ಸಾಧ್ಯವಿಲ್ಲ. ಕೆಮ್ಮಿಗೆ ಕಾರಣಗಳು ಹಲವು. ಹವಾಮಾನದಲ್ಲಿ ಬದಲಾವಣೆಯಾದಾಗ, ಪರಿಸರ ತೇವಾಂಶದ ಏರಿಕೆ ಮತ್ತು ಪರಿಸರ ಮಾಲಿನ್ಯದಿಂದಾಗಿ ನೆಗಡಿ, ಶೀತ ಬಂದು, ಕೆಮ್ಮುವುದು ಸಾಮಾನ್ಯ. ಕೆಮ್ಮು ಉಸಿರಾಟದ ವ್ಯವಸ್ಥೆಯನ್ನು ಉದ್ರೇಕಕಾರಿಗಳು ಮತ್ತು ಸ್ರವಿಕೆಗಳನ್ನು ತೆರವುಗೊಳಿಸುವ ಮೂಲಕ ರಕ್ಷಿಸುತ್ತದೆ. ಚಿಕಿತ್ಸೆಗೊಳಪಡಿಸಿದಾಗ ಗುಣವಾಗಲು ಒಂದು ವಾರ ಬೇಕು. ಚಿಕಿತ್ಸೆಗೊಳಪಡದಾಗ ಏಳು ದಿನಗಳು ಸಾಕು. ಅದರಿಂದಾಗಿಯೇ ‘ ನೆಗಡಿಯಂತಹ ಜಡ್ಡಿಲ್ಲ, ಬುಗಡಿಯಂತಹ ಒಡವೆ ‘ ಯಿಲ್ಲ ಅನ್ನುವುದು.

ನೆಗಡಿ ಅಪಾಯಕಾರಿ ಅಲ್ಲ. ನಿಜ. ಆದರೆ, ನಿರ್ಲಕ್ಷ ಬೇಡ. ನೆಗಡಿಯ ಕ್ರಿಮಿಗಳು ಗಂಟಲಿನಲ್ಲಿ ನೆಲೆನಿಂತು ಕೆರೆತ ಉಂಟು ಮಾಡುವವು. ಆಗ ಮಕ್ಕಳ ರೋಗಪ್ರತಿರೋಧಕ ಶಕ್ತಿ ಕುಗ್ಗುತ್ತದೆ. ಸ್ಟ್ರೆಪ್ಟೋಕಾಕಸ್, ಸ್ಟೆಫೈಲೋಕಾಕಸ್ ಕ್ರಿಮಿಗಳ ಗಂಟಲು, ಶ್ವಾಸನಾಳಗಳ ಸೋಂಕನ್ನು ಮೇಲಿನ ಉಸಿರುನಾಳದ ಸೋಂಕು (Upper Respiratory Tract Infection) ಎಂತಲೂ, ಶ್ವಾಸಕೋಶಗಳ ವರೆಗೆ ಹರಡಿದ ಸೋಂಕನ್ನು ಕೆಳಗಿನ ಉಸಿರುನಾಳದ ಸೋಂಕು (Lower Respiratory Tract Infection) ಎಂತಲೂ ಕರೆಯುವರು. ಇವೆರಡೂ ತೀವ್ರ ಸ್ವರೂಪದ ಕಾಯಿಲೆಗಳು. ಆದುದರಿಂದ ನೆಗಡಿಯಾದ ಮಕ್ಕಳಿಗೆ ದ್ವಿತೀಯ ಸೋಂಕು ತಗಲದಂತೆ ಜಾಗ್ರತೆ ವಹಿಸಬೇಕು.

ಸಾಮಾನ್ಯವಾಗಿ ವೈರಸ್ ರೋಗಾಣುಗಳು ನ್ಯುಮೋನಿಯಾ ಉಂಟು ಮಾಡುವವು. ಆದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಚಿತ್ರ ಭಿನ್ನವಾಗಿದೆ. ಇಲ್ಲಿ ಬ್ಯಾಕ್ಟೀರಿಯಾಗಳಿಂದ ಉಂಟಾಗುವ ನ್ಯುಮೋನಿಯಾ






ಜಾಗತಿಕ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿದ್ದು, ಅವುಗಳಲ್ಲಿ ರಸಾಯನಿಕಗಳು ಕಂಡು ಬಂದಿದ್ದು, ಅವು ವಿಷಕಾರಿ ಮತ್ತು ಮಾರಣಾಂತಿಕವಾಗಿವೆ ಎಂದು ತಿಳಿಸಿದೆ. ಅವು ಯಾವುವು ಅಂದರೆ : Promethazine oral solution, Cofaxamalin Baby cough syrup, Macoff Baby cough syrup ಮತ್ತು MagripN cold syrup. ಈ ಎಲ್ಲಾ ಸಿರಪ್ ಗಳು ಗಂಭೀರ ಅನಾರೋಗ್ಯ ಅಥವಾ ಸಾವಿಗೆ ಕಾರಣವಾಗಬಹುದು. ಪ್ರಯೋಗಾಲಯದ ವಿಶ್ಲೇಷಣೆಯಲ್ಲಿ ಅವುಗಳು ಸ್ವೀಕಾರಾರ್ಹವಲ್ಲದ ಪ್ರಮಾಣದ ಡೈಎಥಲಿನ್ ಗ್ಲೈಕೊಲ್ ಮತ್ತು ಎಥಲಿನ್ ಗ್ಲೈಕೊಲ್ ಒಳಗೊಂಡಿರುವುದನ್ನು ಖಚಿತಪಡಿಸಲಾಗಿದೆ ಎಂದು ಎಚ್ಚರಿಕೆಯಲ್ಲಿ ಜಾಗತಿಕ ಆರೋಗ್ಯ ಸಂಸ್ಥೆ ಉಲ್ಲೇಖಿಸಿದೆ.

ಈ ಕಲುಷಿತ ಉತ್ಪನ್ನಗಳು ಗ್ಯಾಂಬಿಯಾದಲ್ಲಿ ಪತ್ತೆ ಆಗಿವೆ. ಆದರೆ, ಅವುಗಳನ್ನು ಇತರ ದೇಶಗಳಿಗೆ ವಿತರಿಸಿರಬಹುದು ಎಂದು ಜಾಗತಿಕ ಆರೋಗ್ಯ

ಹೆಚ್ಚು. ಮಕ್ಕಳು ಕೆಮ್ಮುವಾಗ ಕಿರಿ ಕಿರಿ ಮಾಡುವವು. ನಿದ್ದೆ ಮಾಡುವುದಿಲ್ಲ. ಅವರಷ್ಟೇ ಅಲ್ಲ ಮನೆಯವರ ನಿದ್ದೆಗೂ ಸಂಚಕಾರ ತಪ್ಪಿದ್ದಲ್ಲ. ಹೀಗಾಗಿ ಪಾಲಕರು ಮಗು ಕೆಮ್ಮುವಾಗ ವೈದ್ಯರಲ್ಲಿ ಬಂದು ಚಿಕಿತ್ಸೆ ಕೊಡಿಸುವರು. ಕೆಮ್ಮಿಗೆ ಬಣ್ಣ ಬಣ್ಣದ ಔಷಧಿಗಳು, ಭಿನ್ನ ಭಿನ್ನ ರೂಪದಲ್ಲಿ ಮಾರುಕಟ್ಟೆಯಲ್ಲಿ ಲಭ್ಯ.

"When there is cough, it is tough to laugh" ಎಂದು ಖ್ಯಾತ ವೈದ್ಯರಾದ ಡಾ. ರತ್ನಾ ಹೇಳಿರುವ ಮಾತು ಮಕ್ಕಳ ವಿಷಯದಲ್ಲಂತೂ ನೂರಕ್ಕೆ ನೂರು ಸತ್ಯ. ಆದ್ದರಿಂದ ಕಂದಮ್ಮಗಳು ಕೆಮ್ಮಿದ ಕೂಡಲೇ ಕೆಮ್ಮಿನ ಸಿರಪ್ ಕೊಡಿಸಲು, ಕುಡಿಸಲು ತಂದೆ ತಾಯಿಯರು ಹಾತೊರೆಯುತ್ತಾರೆ. ಔಷಧಿಗಳಿಂದ ಮಗುವಿಗೆ ತೊಂದರೆಯಾಗಬಾರದು. ಇಲ್ಲದಿದ್ದರೆ, ಊದುವುದನ್ನು ಕೊಟ್ಟು ಒದರುವುದನ್ನು ತಗೆದುಕೊಂಡಂತೆ ಆಗುವುದು. ಈಗ ಗ್ಯಾಂಬಿಯಾದಲ್ಲಿ ಆಗಿರುವುದು ಇದೆ. 66 ಮಕ್ಕಳ ಸಾವಿಗೆ ಕಾರಣವಾಗಿದೆ – ಶೀತ ಮತ್ತು ಕೆಮ್ಮು ನಿಯಂತ್ರಕ ಸಿರಪ್. ಇದರ ಉತ್ಪಾದನಾ ಕಂಪನಿಯಿರುವುದು ಭಾರತದಲ್ಲಿ. ಹರಿಯಾಣ ಮೂಲದ್ದು. ಜಾಗತಿಕ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನಾಮ್ ಘೆಬ್ರಿಯೊಸಸ್ ತನಿಖೆ ನಡೆಸಿ, ಭಾರತಕ್ಕೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಭಾರತದ ಕಂಪನಿಯಾದ ಮೇಡನ್ ಫಾರ್ಮಾಸ್ಯುಟಿಕಲ್ಸ್ ಪ್ರೈವೇಟ್ ಲಿಮಿಟೆಡ್ ತಯಾರಿಸಿದ ನಾಲ್ಕು ಕೆಮ್ಮು ಮತ್ತು ಶೀತ ಸಿರಪ್ ಗಳ ವೈದ್ಯಕೀಯ ಉತ್ಪನ್ನಗಳ ಬಗ್ಗೆ



ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನಾಮ್ ಘೆಬ್ರಿಯೊಸಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿರುವರು. ರೋಗಿಗಳಿಗೆ ಮತ್ತಷ್ಟು ಹಾನಿಯಾಗದಂತೆ ತಡೆಯಲು ಎಲ್ಲ ದೇಶಗಳು ಈ ಉತ್ಪನ್ನಗಳನ್ನು ಪತ್ತೆ ಹಚ್ಚಲು ಮತ್ತು ಬಳಕೆಯನ್ನು ನಿಷೇಧಿಸಲು ಶಿಫಾರಸು ಮಾಡುತ್ತದೆಂದು ಹೇಳಿರುವರು.

ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (DCGI) ಮಾಹಿತಿ ಸಿಕ್ಕ ತಕ್ಷಣ ಕಾರ್ಯೋನ್ಮುಖರಾಗಿರುವುದಾಗಿ ಪ್ರೊ. ವಾಯ್. ಕೆ. ಗುಪ್ತಾ ಚೇರಮನ್ ರಾಷ್ಟ್ರೀಯ ಔಷಧಿಯ ಸ್ಥಾಯಿ ಸಮಿತಿ (Chairman National Committee onMedicine - SNCM) ತಿಳಿಸಿರುವರು. ಇಲ್ಲಿ DCGI ಹೊಸ ಔಷಧ ತಯಾರಿಕೆಗೆ ಒಪ್ಪಿಗೆ ನೀಡಿದೆ. ಆದರೆ ಉತ್ಪಾದನೆಗೆ ಮತ್ತು ಮಾರಾಟಕ್ಕೆ ಲೈಸೆನ್ಸ್ ನ್ನು ರಾಜ್ಯ ಸರಕಾರದ ಔಷಧ ನಿಯಂತ್ರಕರು ನೀಡಿರುವರು. ಅಷ್ಟೇ ಅಲ್ಲ ಈ ಔಷಧಿಗಳನ್ನು ಗ್ಯಾಂಬಿಯಾಕ್ಕೆ ಮಾತ್ರ ರಫ್ತು ಮಾಡಲು ಲೈಸೆನ್ಸ್ ನೀಡಿದೆ. ಬೇರೆ ಯಾವ ದೇಶಕ್ಕೂ ರಫ್ತು ಮಾಡಲು, ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡದಿರಲು ಲೈಸೆನ್ಸ್ ನಲ್ಲಿ ತಿಳಿಸಿರುವುದು ಅನುಮಾನಗಳಿಗೆ ಆಸ್ಪದ ನೀಡಿದೆ.

ಆಮದು ಮಾಡಿಕೊಂಡ ದೇಶ, ಆ ಔಷಧಿಗಳನ್ನು ಅಲ್ಲಿಯ ಮಾನದಂಡ, ಮಾರ್ಗಸೂಚಿಗಳ ಪ್ರಕಾರ ಇವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸದೇ, ಬಳಕೆಗೆ ಒಪ್ಪಿಗೆ ನೀಡಿರುವುದು ಅಚ್ಚರಿ ಮೂಡಿಸಿದೆ ಎಂದು ಗುಪ್ತಾ ಹೇಳಿದ್ದಾರೆ. ನಮ್ಮ ಊಟದ ತಟ್ಟೆಯಲ್ಲಿ ಕತ್ತೆ ಬಿದ್ದಿರುವಾಗ, ಬೇರೆಯವರ ತಟ್ಟೆಯಲ್ಲಿಯ ನೊಣದ ಬಗ್ಗೆ ಮಾತನಾಡುವುದು ಸರಿಯೂ ಅಲ್ಲ. ಸಮಂಜಸವೂ ಅಲ್ಲ.

ಮುಗಿಸುವ ಮುನ್ನ : ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಔಷಧ ತಯಾರಿಕೆಯ ಕುರಿತು ಅನುಮಾನ ಮೂಡಿಸಿದೆ. ಮಕ್ಕಳ ಜೀವದೊಡನೆ ಚೆಲ್ಲಾಟವಾಡುವುದು ಪೈಶಾಚಿಕ ಕೃತ್ಯ. ಇದು ಭಾರತೀಯ ಪರೀಕ್ಷಾ ಪ್ರಕ್ರಿಯೆಯ ಬಗ್ಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಹುಟ್ಟು ಹಾಕಿದೆ. ಭಾರತದ ಆರ್ಥಿಕ ಮತ್ತು ವಿದೇಶಿ ನೀತಿಗೆ ದೊಡ್ಡ ಹೊಡೆತವನ್ನು ಕೊಟ್ಟಿದೆ. ಔಷಧ ಉತ್ಪಾದನೆ ಮತ್ತು ಪೂರೈಕೆಯಲ್ಲಿ ಮುನ್ನಡೆ ಸಾಧಿಸಲು ಭಾರತದ ಎದುರಾಳಿ ದೇಶಗಳಿಗೆ 'ರೆಡ್ ಕಾರ್ಪೆಟ್' ಹಾಸಿದಂತಾಗಿದೆ. ಕೂಡಲೇ ರಾಜ್ಯ ಮತ್ತು ರಾಷ್ಟ್ರ ಸರಕಾರಗಳು ಅವಶ್ಯಕ ಕಾರ್ಯ ಯೋಜನೆ ರೂಪಿಸುವುದು ಮತ್ತು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯವಶ್ಯಕ.

5ನೇ ಪುಟದಿಂದ

ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.

ಕನ್ನಡಕ್ಕೆ ಕತ್ತೆತ್ತು ಪಾಂಚಜನ್ಯ ಮೂಡತ್ತದೆ ಎಂಬುದು ಕುವೆಂಪು ಅವರು ವ್ಯಕ್ತ ಪಡಿಸಿದ ಅನುಭವದ ನುಡಿ. ಅಂತೆಯೇ ನಮ್ಮ ನಮ್ಮ ಕ್ಷೇತ್ರದಲ್ಲಿ ಮನಸಾ ಕನ್ನಡ ಬಳಿಸಿದರೆ, ಸಾಮಾನ್ಯರ ಉದ್ದಾರವಾಗುದರಲ್ಲಿ ಯಾವ ಸಂಶಯವಿಲ್ಲ.

ಕೆ.ಎಸ್. ನರಸಿಂಹಸ್ವಾಮಿ ಹೇಳಿದಂತೆ:

ಕನ್ನಡ ಪದಗಳ ಹಾಡಬ್ಯಾಡ ಅಂತ ಬಾಯಿ ಮುಚ್ಚಿದರೆ

ಮೂಗಿನಿಂದ ಕನ್ನಡ ಪದಗಳ ಬಾಣ ಬಿಡತೀನಿ ಅನ್ನುವ ನುಡಿ ಪ್ರತಿಯೊಬ್ಬರಿಗೂ ಆದರ್ಶವಾಗಿರುವುದು. ಇದೇ ಜಾಡಿನಲ್ಲಿ ನಾವು ಸಾಗಿದರೆ ನಮ್ಮ ಗುರಿ ಕಟ್ಟಿಟ್ಟ ಬುತ್ತಿ.

ಈ ನಿಟ್ಟಿನಲ್ಲಿ ಕನ್ನಡ ವೈದ್ಯ ಬರಹಗಾರರ ಸಮಿತಿಯ ಅಧ್ಯಕ್ಷರಾರ ಡಾ॥ ಅರವಿಂದ ಪಟೇಲ್ ಇವರ ಕೊಡುಗೆ ಅಪಾರವಾದದ್ದು ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಡಾ॥ ಅಣ್ಣಯ್ಯ ಕುಲಾಲ ಉಳ್ತೂರ, ಸದಸ್ಯರಾದ ಡಾ. ನಾ. ಸೋಮೇಶ್ವರ, ಡಾ. ಶಿವಾನಂದ ಕುಬಸದ, ಡಾ. ಕರವೀರಪ್ರಭು ಕ್ಯಾಲಗೊಂಡ, ಡಾ. ಸುರೇಶ್ ಸಗರದ, ಡಾ. ಶುಭ್ರತ ಕೆ.ಎಸ್. ಡಾ. ವೀಣಾ ಎನ್. ಸುಳ್ಯ ರವರ ನಿರಂತರ ಪರಿಶ್ರಮ ಫಲನೀಡಿದೆ.

ವೈದ್ಯ ಸಂಪದದ ಪ್ರಧಾನ ಸಂಪಾದಕರಾದ ಡಾ॥ ಸುರೇಶ ಸಗರದರವರ ನೇತೃತ್ವದಲ್ಲಿ ವೈದ್ಯಸಂಪದ ಅತ್ಯುತ್ತಮವಾಗಿ ಮೂಡಿ ಬರುತ್ತಿದೆ, ವೈದ್ಯರ ವೃತ್ತಿ ಜೀವನದ ಕೆಲವು ಮರೆಯಲಾಗದ ಕ್ಷಣಗಳ ಕುರಿತು "ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ" ಪುಸ್ತಕ ಬಿಡುಗಡೆಯಾಗಿರುವುದು ಐತಿಹಾಸಿಕ.

ಹೀಗೆ ಹತ್ತು ಹಲವಾರು ವಿಶಿಷ್ಟ ರಂಗಗಳಲ್ಲಿ ಅತ್ಯುತ್ತಮವಾಗಿ ಸಾಹಿತ್ಯ ಸೇವೆ ಮಾಡುತ್ತಿರುವ ವೈದ್ಯ ವೃಂದವು ಇನ್ನೂ ಉತ್ತಮ ವೈದ್ಯಗಾರಿಕೆ, ವೈದ್ಯೇತರರಿಗೆ ಹಾಗೂ ರೋಗಿಗಳಿಗೆ ಅನೂಕೂಲವಾಗುವ, ಸಾಮಾನ್ಯ ರೋಗ ಲಕ್ಷಣ, ಸೂಕ್ತ ಮುನ್ನೆಚ್ಚರಿಕೆ, ರೋಗಿ ಮತ್ತು ವೈದ್ಯರ ಸಂಬಂಧ ಬಗ್ಗೆ ಹಾಗೂ ನಾವು ಉಪಯೋಗಿಸುತ್ತಿರುವ ಉಪಕರಣಗಳ ಬಗ್ಗೆ, ಪರಿಣಾಮ ಹಾಗೂ ಅಡ್ಡ ಪರಿಣಾಮದ ಬಗ್ಗೆ ಸಣ್ಣ ಸಣ್ಣ ಕೈಪಿಡಿಗಳನ್ನು ತಂದರೆ ತುಂಬಾ ಅನೂಕೂಲವಾಗಬಹುದು.

ಈಗಾಗಲೇ ಕನ್ನಡ ವೈದ್ಯ ಬರಹಗಾರರ ಕನ್ನಡದ ಕಂಪು ರಾಜ್ಯ ಹಾಗೂ ರಾಷ್ಟ್ರ, ಹೊರದೇಶಗಳಿಗೂ ಪಸರಿಸಿದೆ. ಇನ್ನು ನಮ್ಮ ಕನ್ನಡ ಭಾಷೆಯು ಉತ್ತುಂಗದಲ್ಲಿ ಹಾರಾಡಲಿ. ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಎಲ್ಲಾ ಹಿರಿಯ, ಕಿರಿಯ ಆತ್ಮೀಯ ವೈದ್ಯ ಸಾಹಿತಿಗಳಿಗೆ ನನ್ನ ಅನಂತಾನಂತ ವಂದನೆಗಳು.



**ಡಾ ಮೃದುಲಾ ಎ ಎಮ್**
ನವಜಾತ ಶಿಶು ತಜ್ಞರು
ಈ ಎಸ್ ಐ ಆಸ್ಪತ್ರೆ, ಬೆಂಗಳೂರು

ಕಥಾ ವಿಭಾಗ

# ಬದಲಾವಣೆ ಜಗದ ನಿಯಮ



**ಡಾ ಸಲೀಂ ನದಾಫ್**
ವಿಭಾಗೀಯ ಸಂಪಾದಕರು



ಮೊದಲ ದಿನ ಕಾವೇರಿಯನ್ನು ಕಂಡಾಗ ರಾಜೇಶ ಇರುಸು–ಮುರುಸುಗೊಂಡಿದ್ದ. “22 ನೇ ಶತಮಾನದಲ್ಲಿ ಯಾರು ಉದ್ದ ಜಡೆ ಹಾಕಿಯಾರು ? ಮಲ್ಲಿಗೆಯ ತೋಟವನ್ನೇ ತಲೆಮೇಲೆ ಮುಡಿದಾರು ? ನನ್ನ ಕನಸಿನ ರಾಣಿ, ನವಯುಗದ ಯುವತಿಯಲ್ಲವೇ?” ಎಂದು ಮನದಲ್ಲೇ ಮರುಗಿದ್ದನು.

ಆದರೆ ತಾಯಿ ಕಮಲಮ್ಮನಿಗೆ ಹುಡುಗಿ ತುಂಬಾ ಹಿಡಿಸಿದ್ದಳು.

“ಲಕ್ಷಣವಾದ ದುಂಡು ಮುಖ, ಹಣೆಯ ಮೇಲೊಂದು ಬಿಂದಿ, ಕಣ್ಣಲ್ಲಿ ನಾಚಿಕೆ. ಈಗಿನ ಕಾಲದ ಹುಡುಗಿಯರಲ್ಲಿ ಎಲ್ಲಿ ಈ ವಿನಯ ವಿಧೇಯತೆ ಕಂಡೀತು?” ಎಂದು ಮನದಲ್ಲೇ ಸಂಭ್ರಮಿಸಿದ್ದರು.

ಕಾವೇರಿ ಕೊನೆಗೆ ಕಾಲಿಗೆ ನಮಸ್ಕರಿಸಿದಾಗ, ಕಮಲಮ್ಮನ ಸಂತಸಕ್ಕೆ ಮೇರೆಯೇ ಇರಲಿಲ್ಲ. ಮನೆಗೆ ಹಿಂತಿರುಗಿದೊಡನೆಯೇ ಶ್ಯಾಮ ಭಟ್ಟರ ಬಳಿಯಲ್ಲಿ ಜಾತಕ ತೋರಿಸುವಂತೆ ರಾಜೇಶನ ತಂದೆಗೆ ಕೆಲಸವಹಿಸಿದ್ದರು.

ರಾಜೇಶನ ಮನೆಯಲ್ಲಿ ಕಮಲಮ್ಮನದೇ ದರ್ಬಾರು ನಡೆಯುತ್ತಿತ್ತು. ಬ್ಯಾಂಕ್ ಒಂದರಲ್ಲಿ ಮ್ಯಾನೇಜರ್ ಆದ ತಂದೆ ರಾಮಣ್ಣನವರು, ಮನೆಯ ಎಲ್ಲಾ ಉಸ್ತುವಾರಿಯನ್ನು ಹೆಂಡತಿಗೇ ಬಿಟ್ಟಿದ್ದರು. ಒಬ್ಬನೇ ಮಗನಾದ ರಾಜೇಶನಿಗೂ ತಾಯಿಯ ಮೇಲೆ ಅಪಾರವಾದ ಪ್ರೀತಿ, ಗೌರವ. ತಾಯಿ ಹಾಕಿದ್ದ ಗೆರೆಯನ್ನು ಎಂದೂ ದಾಟಿದವನಲ್ಲ. ಇಂಜಿನಿಯರಿಂಗ್ ಪದವಿ ಪಡೆದ ನಂತರ, ಬೆಂಗಳೂರಿನ ದೊಡ್ಡ ಕಂಪನಿಯಲ್ಲಿ ಕೆಲಸ ಸಿಕ್ಕಿದ್ದರೂ, ತಾಯಿಯನ್ನು ಅಗಲಲು ಇಚ್ಛಿಸದೆ ಧಾರವಾಡ ಕಾಲೇಜಿನಲ್ಲೇ ಪ್ರಾಧ್ಯಾಪಕನಾಗಿ ಸೇರಿಕೊಂಡಿದ್ದ. ಕೆಲಸ ಮಾಡುತ್ತಲೇ ಸ್ನಾತಕೋತ್ತರ ಪದವಿಯನ್ನು ಮುಗಿಸಿ ಈಗ ಪಿ ಎಚ್ ಡಿ ಮಾಡಲು ಹೊರಟಿದ್ದ.

28 ದಾಟಿದ ಮಗನಿಗೆ ಮದುವೆ ಮಾಡುವ ಹುರುಪಿನಲ್ಲಿದ್ದ ಕಮಲಮ್ಮನಿಗೆ ತನ್ನ ಮನಸ್ಸಿನ ದುಗುಡ ಹೇಳುವ ಧೈರ್ಯ ರಾಜೇಶನಿಗೆ ಬರಲೇ ಇಲ್ಲ.

ಜೀವನ ಸಂಗಾತಿಯೆಂದರೆ ಸದಾ ಕಣ್ಮುಂದೆ

ಬರುತ್ತಿದ್ದ ಮುಖ ಸರಳನದು. ಸರಳ, ಕಾಲೇಜಿನಲ್ಲಿ ಸಹಪಾಠಿಯಾಗಿದ್ದಳು. ಬೆಂಗಳೂರಿನಿಂದ ಬಂದಿದ್ದ ಸರಳ ಹೆಸರಿಗೆ ವಿರುದ್ಧವಾದ ಸ್ವಭಾವ ಹೊಂದಿದ್ದಳು. ಅವಳ ಉಡುಗೆ ತೊಡುಗೆಗಳು ಅತೀ ಮಾಡರ್ನ್ ಆಗಿರುತ್ತಿದ್ದವು. ಕೂದಲು ಹೊಸಹೊಸ ಶೈಲಿಗಳಲ್ಲಿ ಕತ್ತರಿಸಿ, ವಿಚಿತ್ರ ವಿನ್ಯಾಸಗಳನ್ನು ಮಾಡಿಕೊಳ್ಳುತ್ತಿದ್ದಳು. ಸದಾ ಹುರುಪು ಉಲ್ಲಾಸದಿಂದ ಇರುತ್ತಿದ್ದ ಅವಳು, ಕಾಲೇಜಿನಲ್ಲಿ ಎಲ್ಲರ ಮೆಚ್ಚಿನ ವಿದ್ಯಾರ್ಥಿನಿಯಾಗಿದ್ದಳು.



ಕಾಲೇಜ್ ವಾರ್ಷಿಕೋತ್ಸವಕ್ಕೊಮ್ಮೆ ಜೀನ್ಸ್ ಪ್ಯಾಂಟ್, ಕಪ್ಪು ಜ್ಯಾಕೆಟ್ ಧರಿಸಿ ಮಾಡಿದ ಬ್ರೇಕ್ ಡ್ಯಾನ್ಸ್‌ನೋಡಿ ಫಿದಾ ಆದವರಲ್ಲಿ ರಾಜೇಶ್ ಮೊದಲಿನವ.

ಎಲ್ಲರೊಡನೆ ಸಲಿಗೆಯಿಂದ ಮಾತನಾಡುತ್ತಿದ್ದ ಸರಳ ರಾಜೇಶನ ಜೊತೆಗೂ ಸ್ನೇಹದಿಂದಿರುತ್ತಿದ್ದಳು. ಕಾಲೇಜ್ ಗ್ರಂಥಾಲಯದಲ್ಲಿ ಒಟ್ಟಿಗೆ ಓದುವುದರೊಂದಿಗೆ ಮೂದಲಾದ ಸ್ನೇಹ, ಮನೆಯಲ್ಲಿ ಜಾಯಿಂಟ್ ಸ್ಟಡಿ ಮಾಡುವ ಮಟ್ಟಕ್ಕೆ ಯಾವಾಗ ತಲುಪಿತೋ ಇಬ್ಬರಿಗೂ ತಿಳಿಯಲೇ ಇಲ್ಲ. ಇತರ ಹುಡುಗಿಯರು ಹುಡುಗರನ್ನು ಹೆಚ್ಚು ಮಾತಾಡಿಸಲೂ ಹಿಂದೆ ಮುಂದೆ ನೋಡುವ ಕಾಲದಲ್ಲಿ, ಸರಳ ರಾಜೇಶನ ಬೈಕ್ ಮೇಲೆ ಕೂರಲೂ ಹಿಂಜರಿಯುತ್ತಿರಲಿಲ್ಲ. ಅವನ ಜೊತೆ ಸಿನಿಮಾ ನೋಡಲು ನಿರಾತಂಕವಾಗಿ ಹೋಗುತ್ತಿದ್ದಳು. “ಬದುಕಿದರೆ ಸ್ವಚ್ಛಂದವಾಗಿ ಬದುಕಬೇಕು ರಾಜೇಶ್” ಎಂದು ಸದಾ ಹೇಳುತ್ತಿದ್ದಳು.

“ಒಂದು ಟ್ಯಾಟು ಹಾಕಿಸಿಕೊಳ್ಳುವ ಆಸೆ, ಏನೆನ್ನುತ್ತೀಯ?” ಎಂದು ಒಂದು ದಿನ ಇದ್ದಕಿದ್ದಂತೆ ಕೇಳಿದ್ದಳು. ಆಶ್ಚರ್ಯಗೊಂಡ ರಾಜೇಶ್, ಅವಳ ಜೀವನೋತ್ಸಾಹವನ್ನು ಮೆಚ್ಚಿ ಅವಳ ಬೆನ್ನನ್ನು ಜೋರಾಗಿ ತಟ್ಟಿ,

“ನಡಿ ಹೋಗೋಣ” ಎಂದು ಕರೆದೊಯ್ದಿದ್ದ .

ಅವಳು ಹೇಳುವ ಎಲ್ಲಾ ವಿಚಿತ್ರ ಆಸೆಗಳನ್ನು ಪೂರೈಸುವುದರಲ್ಲಿ ಅವನಿಗೆ ಎಲ್ಲಿಲ್ಲದ ಖುಷಿ ಸಿಗುತ್ತಿತ್ತು.

ಮಳೆಬರುವಾಗ, “ಐಸ್ ಕ್ರೀಮ್ ಕೊಡಿಸು,” ಎಂದು,

“ಕೈ ಬಿಟ್ಟು ಬೈಕ್ ಓಡಿಸು.” ಎಂದು

ಹೊಸ ವರ್ಷಕ್ಕೆ “ಅರ್ಧರಾತ್ರಿ ಹಾಸ್ಟಲ್‌ಗೆ ಬಂದು ವಿಶ್ ಮಾಡು,” ಎಂದು, ಬಗೆಬಗೆಯ ಬಯಕೆಗಳನ್ನು ಮುಂದಿಡುತ್ತಿದ್ದಳು.

ಅವಳು ಕೇಳಿದ್ದನ್ನೆಲ್ಲಾ ಮರುಮಾತಾಡದೆ ರಾಜೇಶ್ ಪೂರೈಸುತ್ತಿದ್ದ.

“ನನ್ನನ್ನು ಒಮ್ಮೆ ಕಾಶ್ಮೀರಕ್ಕೆ ಕರೆದೊಯ್ಯುವೆಯಾ? ನನಗೆ ಹಿಮಪಾತ ನೋಡುವ ಆಸೆ!” ಎಂದಿದ್ದಕ್ಕೆ,

“ಅದಕ್ಕೇನಂತೆ” ಎಂದು, ಕಾಲೇಜಿನ ವಾರ್ಷಿಕ ಪ್ರವಾಸಕ್ಕೆ ಅಲ್ಲಿಗೇ ಹೋಗುವಂತೆ ಪ್ರಾಂಶುಪಾಲರೊಂದಿಗೆ ಮಾತಾಡಿ ಅಣಿ ಮಾಡಿದ್ದ.

ಕಾಶ್ಮೀರದಲ್ಲಿ ಹಿಮಪಾತ ಕಂಡಾಗ ಸರಳಳ ಕಣ್ಣಲ್ಲಿ ನೀರುಗಟ್ಟಿತ್ತು. ಅದನ್ನು ಕಂಡ ರಾಜೇಶನೂ ಸಂತೋಷದ ಕಣ್ಣೀರು ಸುರಿಸಿದ್ದ.

ಆದರೆ ಕಮಲಮ್ಮನಿಗೆ ಸರಳ ಎಂದರೆ ಅಷ್ಟಕಷ್ಟೇ.

ಗಣೇಶನ ಹಬ್ಬಕ್ಕೊಮ್ಮೆ ಮನೆಗೆ ಊಟಕ್ಕೆ ಕರೆದಾಗ, ಸರಳ ಫ್ರಾಕ್ ಧರಿಸಿ, ಕೂದಲು ಹಾರಾಡಿಸುತ್ತ, ಕುಂಕುಮವನ್ನೂ ಇಡದೆ ಬಂದದ್ದನ್ನು ಕಂಡು ಕಮಲಮ್ಮ ಸಿಟ್ಟಿಗೆದ್ದಿದ್ದರು.

“ಈ ಹುಡುಗಿಯನ್ನ ಕಟ್ಟಿಕೊಂಡವನ ಗತಿ ಏನಾದೀತೋ? ಶಿವನೇ” ಎಂದು ಮೂಗು ಮುರಿದಿದ್ದರು.

ಆದರೆ ರಾಜೇಶನಿಗೆ ಆಕೆಯ ಆ ರೂಪ ಎಷ್ಟು ಹಿಡಿಸಿತ್ತೆಂದರೆ, ಅವಳು ಗಣೇಶನಿಗೆ ಕಣ್ಣು ಮುಚ್ಚಿ ಕೈ ಮುಗಿಯುತ್ತಿದ್ದಾಗ ಯಾರಿಗೂ ತಿಳಿಯದಂತೆ ಆಕೆಯ ಭಾವಚಿತ್ರವನ್ನು ತನ್ನ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ.

ಸರಳ ಮನೆಯಿಂದ ಹೊರಟ ನಂತರ ಸಿಡಿದೆದ್ದ ಕಮಲಮ್ಮ,

“ಆಕೆಯನ್ನು ನೀನು ಇನ್ನೆಂದೂ ಮನೆಗೆ ಕರೆತರಬೇಡ. ಗಂಡುಬೀರಿಯಂತೆ ತಿರುಗುವ ಅವಳಿಂದ ದೂರವಿರು.” ಎಂದು ಒಂದೇ ಉಸಿರಿನಲ್ಲಿ ಹೇಳಿದ್ದರು.

ರಾಜೇಶ್ ಕಕ್ಕಾಬಿಕ್ಕಿಯಾಗಿ ನೋಡುತ್ತ ನಿಂತಾಗ, ಗಾಬರಿಗೊಂಡ ಕಮಲಮ್ಮ, ರಾಜೇಶನನ್ನು ಹಿಡಿದೆಳೆದು, ಗಣೇಶನ ವಿಗ್ರಹದ ಮುಂದೆ ನಿಲ್ಲಿಸಿ,

“ಗಣೇಶನ ಮೇಲೆ ಪ್ರಮಾಣ ಮಾಡಿ ಹೇಳು, ನೀನು ಅವಳನ್ನು ಪ್ರೀತಿ ಗೀತಿ ಮಾಡುತ್ತಿಲ್ಲ ತಾನೇ?” ಎಂದು ಕಣ್ಣೀರಿಡುತ್ತ ಕೇಳಿದ್ದರು.

“ಅಮ್ಮಾ. ಏನು ಹೇಳುತ್ತಿದ್ದೀಯ? ಅವಳು ನನ್ನ ಸ್ನೇಹಿತೆಯಷ್ಟೇ.” ಎಂದು ಕೂಗಿದ್ದ.

ಹಾಗೆಂದೊಡನೆಯೇ ರಾಜೇಶನಿಗೆ ಮನದಲ್ಲಿ ಏನೋ ಮುಳಕಿಸಿದಂತಾಗಿತ್ತು. ಎಂದೂ ಅರಿಯದ ನೋವೊಂದು ಅರೆಕ್ಷಣ ಹೃದಯವನ್ನು ನಾಟಿಹೋದಂತಾಗಿತ್ತು. ಅದೇನೆಂದು ತಿಳಿಯುವಷ್ಟರಲ್ಲಿ, ಕಮಲಮ್ಮ ಅವನ ಕೈಯನ್ನು ತನ್ನ ತಲೆಯ ಮೇಲಿರಿಸಿ,

“ಹಾಗಾದರೆ, ಈಗ ನನ್ನ ಮೇಲೆ ಆಣೆ ಮಾಡಿ ಹೇಳು. ನೀನೆಂದೂ ನನ್ನ ಇಚ್ಛೆಗೆ ವಿರುದ್ಧವಾಗಿ ಪ್ರೇಮವಿವಾಹವಾಗುವುದಿಲ್ಲ ಎಂದು.”

ಬಿಗಿಯಾಗಿ ಹಿಡಿದಿದ್ದ ಕೈಯನ್ನು ಅಮ್ಮನಿಂದ ಬಿಡಿಸಿಕೊಳ್ಳಲಾಗದೇ, ತಾಯಿಯ ರೋಧನ ಕೇಳಲಾಗದೆ. ರಾಜೇಶ್,

“ಸರಿ, ಸರಿ.” ಎಂದು ಹೇಳಿ, ಬೈಕಿನ ಕೀಲಿ ಕೈಗೆತ್ತಿಕೊಂಡು ಮನೆಯಿಂದ ಹೊರಹೋಗಿದ್ದ.

ಅಂದಿನಿಂದ ಸರಳಳನ್ನು ಮಾತನಾಡಿಸುವುದು ಕಡಿಮೆ ಮಾಡಿದ್ದ. ಅವಳನ್ನು ನೋಡಿದಾಗಲೆಲ್ಲ ಅದೇ ವಿಚಿತ್ರ ನೋವು ಮನಸ್ಸನ್ನು ಕಲಕುತ್ತಿತ್ತು. ಅದೇನೆಂದು ಕೊನೆಗೂ ತಿಳಿಯಲೇ ಇಲ್ಲ.

ಬಿ ಇ ಮುಗಿದ ಎರಡು ತಿಂಗಳ ನಂತರ ಇದ್ದಕ್ಕಿದ್ದಂತೆ ಒಂದು ದಿನ ಸರಳಳಿಂದ ಕರೆ ಬಂದಿತ್ತು.



“ನನ್ನ ಮದುವೆ ಗೊತ್ತಾಗಿದೆ. ಹುಡುಗ ಅಮೇರಿಕದಲ್ಲಿದ್ದಾನೆ. ಮುಂದೆ ನನಗೆ ಅಲ್ಲಿ ಎಮ್ .ಎಸ್ ಮಾಡುವ ಆಸೆ ಇದೆ.” ಎಂದಿದ್ದಳು.

ದಿಗ್ಭ್ರಾಂತನಾದ ರಾಜೇಶ್ ಏನು ಮಾತನಾಡದಿದ್ದಾಗ, ಸರಳ,

“ನಿಮ್ಮ ಅಮ್ಮನಿಗೆ ನಾನು ಹಿಡಿಸಿರಲಿಲ್ಲ ಬಿಡು. ನಿನಗೆ ನಿಮ್ಮಮ್ಮನನ್ನು ಎದುರಿಸುವ ಧೈರ್ಯವಿಲ್ಲ. ನನಗೆ ಜಡೆ ಹಾಕಿಕೊಳ್ಳುವ ಆಸಕ್ತಿ ಇಲ್ಲ. ನಾನು ಜೀವನ ಸ್ವಚ್ಛಂದವಾಗಿ ಬದುಕಬೇಕು ರಾಜೇಶ್.” ಎಂದು ಕರೆಯನ್ನು ಮುಗಿಸಿದ್ದಳು.

ಮತ್ತೆ ಆ ನೋವಿನ ದಾಳಿ ಹೃದಯದ ಮೇಲಾಗಿತ್ತು.

ಸರಳಳ ಮುಖ ಕಣ್ಮುಂದೆ ಬಂದಿತು. ಅಂದೂ ತನ್ನ ಭಾವನೆಗಳನ್ನು ಹೇಳುವ ಧೈರ್ಯವಿರಲಿಲ್ಲ , ಇಂದೂ ಹೇಳುವ ಸಾಹಸ ಅವನಿಗಿರಲಿಲ್ಲ. ಅಮ್ಮನ ಇಚ್ಛೆಯಂತೆ ಕಾವೇರಿಯನ್ನು ವರಿಸಿದ.

ಸುಂದರ, ಸುಶೀಲ ಹಾಗೂ ಒಳ್ಳೆಯ ಮನಸ್ಸಿನವಳಾದ

ಕಾವೇರಿ ರಾಜೇಶನ ಮನೆಗೆ ಒಳ್ಳೆ ಗೃಹಿಣಿಯಾದಳು. ಎರಡು ಮುದ್ದಾದ ಮಕ್ಕಳನ್ನೂ ಹೆತ್ತಳು. ಆದರೂ ರಾಜೇಶನ ಮನಸ್ಸನ್ನು ಮಾತ್ರ ಗೆಲ್ಲಲಾಗಲಿಲ್ಲ. ರಾಜೇಶನಲ್ಲಿ ಸದಾ ಕಾಲ ಉಳಿದ ಅಸಮಾಧಾನ, ಆಕೆ ಸರಳ ಅಲ್ಲ, ಅವಳಂತಿಲ್ಲ, ಎಂಬುದೇ ಆಗಿತ್ತು. ಸರಳಳನ್ನು ನೆನೆದಾಗಲೆಲ್ಲಾ ಅದೇ ನೋವಿನ ಧಾರೆ ಮನದಲ್ಲಿ ಹರಿದ್ಹೋಗುತ್ತಿತ್ತು.

ಸರಳಳ ಮದುವೆಯ ನಂತರ ರಾಜೇಶ್ ಅವಳೊಂದಿಗೆ ಯಾವ ಸಂಪರ್ಕವನ್ನೂ ಇಟ್ಟುಕೊಂಡಿರಲಿಲ್ಲ. ಫೇಸ್ ಬುಕ್‌ನಲ್ಲೂ ಫ್ರೆಂಡ್‌ಶಿಪ್ ಇರಲಿಲ್ಲ. ನೋವುಂಟು ಮಾಡುವ ನೆನಪುಗಳಿಂದ ದೂರವಿರುವುದೇ ಲೇಸು ಎಂದು, ಅವಳನ್ನು ದೂರವಿರಿಸಿದ್ದ.

ಆದರೆ ತನಗೆ ಅರಿಯದಂತೆಯೇ ಸರಳಳನ್ನು ಯಾವಾಗ ನೆನೆದರೂ, ಆಕೆ ಅಮೇರಿಕಾದಲ್ಲಿ ವಿದೇಶಿ ಉಡುಗೆಯಲ್ಲಿ, ಕಪ್ಪು ಕನ್ನಡಕ ಧರಿಸಿ, ಝುಮ್ಮೆಂದು, ಗೋಲ್ಡನ್ ಗೇಟ್ ಬ್ರಿಡ್ಜ್ ಮೇಲೆ, ಉದ್ದನೆಯ



ಕಾರೊಂದನ್ನು ಓಡಿಸುತ್ತಿರುವುದನ್ನು ಕಲ್ಪಿಸಿಕೊಳ್ಳುತ್ತಿದ್ದ. ಆಕೆಯ ಗಂಡನನ್ನು ಜೊತೆಯಲ್ಲಿ ಚಿತ್ರಿಸಿಕೊಳ್ಳುವ ಧೈರ್ಯ ಎಂದೂ ಬರುತ್ತಿರಲಿಲ್ಲ. ಆಕೆಯ ನಗು ಮುಖ, ಕೆನ್ನೆಯನ್ನು ಮುತ್ತಿಕ್ಕುವ ಆ ಕಿವಿವರೆಗೆ ಕತ್ತರಿಸಿದ ಕೂದಲು, ಕುತ್ತಿಗೆಯ ಮೇಲೆ ಹಾರಾಡುತ್ತಿರುವ ಹಕ್ಕಿಯ ಸಣ್ಣದೊಂದು ಟ್ಯಾಟು . ಆಕೆಯನ್ನು ನೆನೆದೊಡನೆಯೇ ಮನದಲ್ಲಿ ಉಲ್ಲಾಸ, ಅದರ ಹಿಂದೆಯೇ ಆ ನೋವೂ ಥಟ್ಟನೆ ಬಂದು ಮನ ಕಲಕುತ್ತಿತ್ತು. ಈ ಹಿಂಸೆಯಿಂದ ಬೇಸತ್ತು ಹೋದರೂ ರಾಜೇಶನಿಗೆ ಹೊರಬರಲು ಆಗುತ್ತಿರಲಿಲ್ಲ.

ಅಂದು ಗೌರಿ ಗಣೇಶನ ಹಬ್ಬ. ಕಾವೇರಿ ಮಕ್ಕಳೊಡನೆ ತವರುಮನೆಗೆ ಹೋಗಿದ್ದಳು. ಮನೆಯಲ್ಲಿ ಕಮಲಮ್ಮ ಮಾಡಿದ್ದ ಗಣೇಶನ ಪೂಜೆ ಮತ್ತು ಕಡುಬನ್ನು ಕಂಡು, ಮತ್ತೆ ಸರಳಳ ನೆನಪಾಯಿತು. ತಡೆಯಲಾಗದೆ ಕಂಪ್ಯೂಟರ್ ತೆಗೆದು ಫೇಸ್‌ಬುಕ್‌ನಲ್ಲಿ ಅವಳನ್ನು ಹುಡುಕತೊಡಗಿದ. ತನ್ನ ಇತರ ಗೆಳೆಯರ ಸಂಪರ್ಕದಲ್ಲಿದ್ದ ಅವಳ ಪ್ರೊಫೈಲ್ ಸುಲಭವಾಗಿ ದೊರೆಯಿತು. ಪುಟ ತೆರೆಯುತ್ತಿದ್ದಂತೆ, ರಾಜೇಶನ ಮುಖ ಮೆಲ್ಲಗೆ ಬಾಡಿತು.

ಸರಳಳ ಮನೆಯ ಗಣೇಶನ ಹಬ್ಬದ ಚಿತ್ರ ಅದರಲ್ಲಿತ್ತು. ಸರಳ ಗುರುತಿಗೆ ಸಿಗದಂತೆ ಹಸಿರು ರೇಷ್ಮೆಸೀರೆಯಲ್ಲಿ ಕಂಗೊಳಿಸುತ್ತಿದ್ದಳು. ಪಕ್ಕದಲ್ಲಿ ಕೆಂಪು ಜುಬ್ಬ ಧರಿಸಿ ಗಂಡ ನಿಂತಿದ್ದ. ಎರಡು ಗಂಡು ಮಕ್ಕಳು ಹತ್ತಿರದಲ್ಲಿಯೇ ಇದ್ದರು. ಗಂಡ ತನ್ನ ಕೈಯನ್ನು ಆಕೆಯ ಭುಜದಮೇಲಿರಿಸಿ, ಆಕೆಯನ್ನು ಪ್ರೀತಿಯಿಂದ ನೋಡುತ್ತಿದ್ದ. ಅವಳ ಮತ್ತೊಂದು ಭುಜದ ಮೇಲೆ, ಅವಳ ಹಕ್ಕಿಯ ಟ್ಯಾಟೂವನ್ನು ಅಡುಗಿಸುತ ಕೂತು, ಅವಳ ಸೊಂಟದ ವರೆಗೆ ಹರಿದು ನಿಂತಿತ್ತು, ಅವಳ ಉದ್ದನೆಯ ಜಡೆ .

ರಾಜೇಶ ಕಂಪ್ಯೂಟರನ್ನು ಥಟ್ಟೆಂದು ಮುಚ್ಚಿದ. ಅವನ ಹುಬ್ಬು ಗಂಟಿಕ್ಕಿತು. ಸರಳ, ಇನ್ನು ತನ್ನ ಸರಳಳಾಗಿರಲಿಲ್ಲ. ಅವಳ ಉಡುಪು,ರೀತಿ, ನೀತಿ, ನಂಬಿಕೆ ಎಲ್ಲಾ ಬದಲಾಗಿದ್ದಂತ್ತಿತ್ತು. ಅವಳ ಕಣ್ಣಲ್ಲಿ ಸಂತೃಪ್ತಿ ತುಂಬಿತ್ತು, ತುಟಿಯಲ್ಲಿ ಸಂತಸದ ನಗೆ ಚಿಮ್ಮುತ್ತಿತ್ತು. ಅವಳದೇ ಆದ ಒಂದು ಸುಂದರ ಪ್ರಪಂಚವಿತ್ತು. ಅವನ ಆ ನೋವಿನ ಅಲೆ ಈ ಬಾರಿ ಬರಲಿಲ್ಲ.

ರಾಜೇಶ್ ಕೆಲಕ್ಷಣ ಮಾತಾಡದಂತೆ ಕುಳಿತ. ನಂತರ ಮೆಲ್ಲಗೆ ನಕ್ಕ. ಅದು ಬುದ್ಧನ ಮೊಗದ ಶಾಂತ ನಗುವಿದ್ದಂತಿತ್ತು. ಏನೋ ಜ್ಞಾನೋದಯವಾದಂತಿತ್ತು.

ಕಮಲಮ್ಮ ಆರತಿಗೆ ತಯಾರಾಗುತ್ತಿದ್ದರು, ತಂದೆ ರಾಮಣ್ಣ, ಗಣೇಶನ ಪೂಜೆ ಮುಗಿಸಿ ಏಳುತ್ತಿದ್ದರು. ರಾಜೇಶ ಕೂಡಲೆ ಎದ್ದು ನಿಂತ. ಕಾರಿನ ಕೀಲಿ ಕೈಗೆತ್ತಿಕೊಂಡು ಹೊರಹೊರಟ. ಕಮಲಮ್ಮ ಎಲ್ಲಿಗೆ ಎಂದು ಕೂಗುವ ಮೊದಲೇ, ರಾಜೇಶ್ ದಾರಿಯಲ್ಲಿದ್ದ. ಕಾವೇರಿಯನ್ನು ಕರೆತರಲು ಅವಳ ತವರಿಗೆ ಹೊರಟಿದ್ದ.



**ಡಾ ಪ್ರಿಯಂವದ ಅರವಿಂದನ್**
ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು
ಯುನಿಟಿ ಆಸ್ಪತ್ರೆ, ಶಿವಮೊಗ್ಗ.

ಕೃತಿ ಪರಿಚಯ


# ದಿವ್ಯ
## ಯು.ಆರ್. ಅನಂತಮೂರ್ತಿ



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ದಿವ್ಯ ಒಂದು ಅಪರೂಪದ ಬಹುಕಾಲ ಮನದಲ್ಲಿ ನಿಲ್ಲಬಲ್ಲಂತಹ ಬದುಕಿನ ವಾಸ್ತವತೆಗೆ ತೀರಾ ಹತ್ತಿರವಾದ ಒಂದು ಕಾದಂಬರಿಯಾಗಿದೆ. ಲೇಖಕರೇ ಹೇಳುವಂತೆ ದಿವ್ಯ ಎಂದರೆ ದಿಭ್ಯ, ದಿಬ್ಬ ಅಂದರೆ ಬುದ್ಧಿವಂತಿಕೆ ಅದೂ ಅಲೌಕಿಕ ಮಟ್ಟದಲ್ಲಿನ ಅರಿವು, ಜ್ಞಾನ ಎಂಬರ್ಥಗಳನ್ನು ಪಡೆದುಕೊಂಡಿದೆ. ಇಲ್ಲಿ ಒಬ್ಬ ಹೆಣ್ಣು ಮಗಳನ್ನು ಆ ನೆಲೆಯಲ್ಲಿ ನಿಂತು ಚಿತ್ರಿಸುವ ಮೂಲಕ ತನ್ನ ದಿವ್ಯ ವ್ಯಕ್ತಿತ್ವದಿಂದ ಹೇಗೆ ಆದರಣೀಯಳಾಗಬಹುದು ಎಂಬುದನ್ನು ಇಲ್ಲಿ ಗಮನಿಸಬಹುದು.

ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಲೈಂಗಿಕ ಅಂಶಗಳಿಗೆ ಪ್ರಾಧಾನ್ಯತೆ ಇರುತ್ತದೆ. ಆದರೆ ದಿವ್ಯ ಒಂದು ಅಲೌಕಿಕ ವಾತಾವರಣ ಸೃಷ್ಟಿಸುವ ಮೂಲಕ ಸುಂದರ ಸಂಜೆ ತಂಗಾಳಿಯಲ್ಲಿ ಅಲೆದಾಡಿದ ಮುದ ನೀಡುತ್ತದೆ. ಇದು ಒಂದು ರೀತಿ ಓದುಗನನ್ನು ತನ್ನಲ್ಲಿ ವಶೀಕರಿಸಿಕೊಂಡು ಓದಿಸಿಕೊಂಡು ಹೋಗುವುದನ್ನು ನೋಡಿದಾಗ ಬಂಗಾಳಿ ಕಾದಂಬರಿಗಳ ನೆನಪಾಗುತ್ತದೆ. ಅಲ್ಲಿ ಸ್ತ್ರೀಯರಿಗೆ ಗೌರವ ಸ್ಥಾನಕೊಟ್ಟು ರಚಿತವಾದ ಅನೇಕ ಕಾದಂಬರಿಗಳಂತೆ ಇದೂ ಕೂಡ ಓದಲು ಕುಳಿತರೆ ಅದು ಮುಗಿದ ಅನಂತರವೇ ಮೇಲೇಳಬೇಕೆಂಬ ಉತ್ಕಟ ಬಯಕೆ ಉಂಟಾಗುವುದನ್ನು ಕಾಣಬಹುದು. ಎಷ್ಟೋ ವರ್ಷಗಳ ಅನಂತರ (ವಿದ್ಯಾರ್ಥಿ ದೆಸೆಯನ್ನು ಬಿಟ್ಟು) ಒಂದು ಪುಸ್ತಕ ಇಷ್ಟರ ಮಟ್ಟಿಗೆ ನಮ್ಮನ್ನು ಕಟ್ಟಿಹಾಕುವ ಶಕ್ತಿ ಪಡೆದಿದ್ದು, ಖುಷಿ ಕೊಟ್ಟಿದ್ದು ಈ ದಿವ್ಯವೇ. ಈ ಒಂದು ಆಕರ್ಷಣೆಗೆ ಈ ಕಾದಂಬರಿಯ ಬಗೆಗೆ ನನಗೆ ಬಂದಿರುವುದು ನಾನು ಹೆಣ್ಣೆಂಬ ಕಾರಣದಿಂದಲೋ ಅಥವಾ ನಮ್ಮಮ್ಮನಿಗೆ ನಾವು ಇಬ್ಬರು ಹೆಣ್ಣು ಮಕ್ಕಳು ಎಂಬ ಕಾರಣದಿಂದಲೇ ಎಂಬ ಭಾವನೆ ಒಂದು ಕ್ಷಣ ನನ್ನ ಮನದಲ್ಲಿ ಹರಿದಾಡಿದರೂ, ಮರುಕ್ಷಣ ನನ್ನ ಹುಟ್ಟಿದ ಪರಿಸರದ ವಾತಾವರಣ ಅದರ ಸುತ್ತಮುತ್ತಲೇ ತಿರುಗುತ್ತಿರುವುದರಿಂದಲೂ ಹಲವು ವರ್ಷಗಳ ಅನಂತರ ಹಳ್ಳಿಯ ಸೊಗಡಿನ ವಾಸನೆ ಅದರಲ್ಲಿ ತುಂಬಿರುವುದರಿಂದಲೇ ಅಷ್ಟು ಆತ್ಮೀಯವಾಯಿತೇ ಎಂಬ ಅನುಮಾನ ಒಂದು ಕ್ಷಣ ಹರಿದಾಡುತ್ತದೆ. ಕಾರಣ ಹತ್ತು-ಹದಿನೈದು ವರ್ಷ ಕಾದಂಬರಿ ಓದುವುದನ್ನೇ ಬಿಟ್ಟ ನನ್ನನ್ನು ನನ್ನಂಥವರನ್ನು ಅದು ಅಷ್ಟು ಹಿಡಿದಿಡಬೇಕಾದರೆ ಈ ಒಂದು ಕಾರಣವೂ ಇರಬಹುದು. ಆದರೆ ಲೇಖಕರು ಯಾವುದೇ ಪ್ರಾದೇಶಿಕ ಕಾದಂಬರಿಯ ಅನುಭವವನ್ನು ಮಾತ್ರ ಪ್ರತಿಬಿಂಬಿಸದೆ ರಾಷ್ಟ್ರಮಟ್ಟದ ಗೌರವಕ್ಕೆ



ಪಾತ್ರವಾಗಿರುವ ಕವಿಯಾದವರನ್ನು ನಮ್ಮ ಪ್ರಾದೇಶಿಕ ಚಿಪ್ಪಿನೊಳಗೆ ಸೇರಿಸುವುದು ಸೂಕ್ತವಾದುದಲ್ಲ.



ಇಲ್ಲಿ ಬರುವ ಅಕ್ಕು-ಕೇಶವ-ಗೌರಿ ನಿಸ್ವಾರ್ಥ ಚೇತನಗಳಾಗಿ ಕಾಣಿಸಿಕೊಳ್ಳುವ ಮೂಲಕ ಓದುಗರ ಆದರಕ್ಕೆ ಪಾತ್ರರಾಗುತ್ತಾರೆ. ಗಂಗೆ-ಗೌರಿಯರ ಬಾಲ್ಯದಾಟಗಳು ಪ್ರಕೃತಿಯ ವಿಸ್ಮಯಗಳ ಬಗೆಗಿನ ಕುತೂಹಲ ಓದುಗರನ್ನು ತಮ್ಮ ಎಳವೆಗೆ ಕರೆದುಕೊಂಡು ಹೋಗಿ ಮಲೆನಾಡಿನ ಸಮೃದ್ಧ ಹಸಿರಿನ ನಡುವೆ ನಿಲ್ಲಿಸುತ್ತವೆ. ಗಂಗೆಯ ಸಾವು, ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ಗೌರಿಯ ದುಃಖ ಗಂಗೆಯ ಮೇಲಿನ ಪ್ರೀತಿಯನ್ನು ಅವಳು ಪ್ರಕೃತಿಯ ಮಡಿಲಲ್ಲಿ ಕಾಣಲು ಬಯಸುವ ಅವಳ ಮನಸ್ಥಿತಿ, ಒಬ್ಬಳೆ ಗುಡ್ಡದ ಮೇಲೆ ಹೋಗಿ ಕುಳಿತುಕೊಳ್ಳುವ, ಪ್ರಕೃತಿಯ ಮಡಿಲಲ್ಲಿ ನೆಮ್ಮದಿ ಕಾಣಲೆತ್ನಿಸುವ ಅವಳ ಸ್ವಭಾವದಲ್ಲಿ ಕಾಣಬಹುದು. ಗೌರಿಯ ವ್ಯಕ್ತಿತ್ವ ರಾಷ್ಟ್ರಕವಿ ಕುವೆಂಪು ಅವರ 'ಕಾನೂರು ಹೆಗ್ಗಡತಿ'ಯ ಹೂವಯ್ಯನ ಪ್ರಕೃತಿ ಪ್ರೇಮವನ್ನೊಳಗೊಂಡ ವ್ಯಕ್ತಿತ್ವಕ್ಕೆ ಹತ್ತಿರವಾಗುವುದನ್ನು ಕಾಣಬಹುದು.

ಇಂದಿನ ಸಮಾಜದಲ್ಲಿ ಸಂಪ್ರದಾಯಸ್ಥ ಸಜ್ಜನ ಕುಟುಂಬಗಳು ಅಪರೂಪವಾಗುತ್ತಿರುವಾಗ ಗಂಡ-ಹೆಂಡಿರ ಸಂಬಂಧ ವ್ಯಾವಹಾರಿಕವಾಗಿ ತನ್ನ ಬದ್ಧತೆಯನ್ನು ಕಳೆದುಕೊಳ್ಳುತ್ತಿರುವಾಗ ಒಂದು ಸತ್ಸಂಪ್ರದಾಯದ ಪರಿಚಯ ಈ ಪುಸ್ತಕದ ಮೊದಲ ಪುಟದಲ್ಲಿಯೇ ನಮಗೆ ಎದುರಾಗುತ್ತದೆ. ಮುಂದಿನ ಮಕ್ಕಳಿಗೆ ಕೆಲವು ಗ್ರಾಮ್ಯ ತಿನಿಸುಗಳನ್ನು ಪುಸ್ತಕದಲ್ಲಿ ಮಾತ್ರ ನೋಡಲು ಓದಲು ಸಾಧ್ಯವಾಗಿ ನಿಜ ಜೀವನದಲ್ಲಿ ಕಾಣಸಿಗದ ವಾತಾವರಣ ನಿರ್ಮಾಣವಾಗಿರುವಂತೆ ಗಂಡ ಎಂತವನಾದರೂ ಸತಿ ಧರ್ಮ ಪಾಲಿಸುವ ಸ್ತ್ರೀಯ ಸುಂದರ ನಿಷ್ಕಲ್ಮಶ ಬದುಕಿನ ಚಿತ್ರ ಗಂಗೆ-ಗೌರಿಯರ ಅಮ್ಮನ ವರ್ಣನೆಯಿಂದ ಅರಿವಾಗುತ್ತದೆ. ಸವತಿಯ ಮಕ್ಕಳು ಮಲ ಮಕ್ಕಳು ಮಲತಾಯಿ ಈ ಪದ ಉತ್ಪ್ರೇಕ್ಷೆ ಮತ್ತು ಕೆಲವೊಮ್ಮೆ ಅನಿವಾರ್ಯವಾಗಿ ಎರಡನೇ ಮದುವೆಗೆ ಸತಿಯಾಗಿ ಬಂದ ಹೆಣ್ಣುಮಗಳ ಮಾನಸಿಕ ಹೊಯ್ದಾಟ ಅತೃಪ್ತಿಯ ಕಾರಣದಿಂದ ಸಂಬಂಧಗಳು ಹಳಸಾಗಿ ಪರಸ್ಪರ ದ್ವೇಷಾಸೂಯೆಗೆ ಆಸ್ಪದವಾಗಿ ಪ್ರೀತಿ ಆದರಣೆ ಅಲ್ಲಿ ಕನಸಾಗಿ ಮಲತಾಯಿ ಎಂದಾಕ್ಷಣ ಭೂತಕಲ್ಪನೆಗೆ ಅವಕಾಶ ಒದಗುವಂತಹ ಘಟನೆಗಳನ್ನೇ ನೋಡಿದ/ಕೇಳಿದ ನಮಗೆ ಇಲ್ಲಿ ಬರುವ ಮಲತಾಯಿ ಅಕ್ಕು ಕೇವಲ ವಿಶೇಷ ವ್ಯಕ್ತಿತ್ವದಿಂದ ಕಂಗೊಳಿಸುತ್ತಾಳೆ. ಅಕ್ಕು ಕೇವಲ ತನ್ನ ಗಂಡನ ಮಕ್ಕಳಿಗೆ ಮಾತ್ರ ತಾಯಿಯಾಗುವುದಿಲ್ಲ ಜೊತೆಗೆ ಮನೆ ಹಿತ್ತಲಲ್ಲಿ ಯಾರೋ ಬಿಟ್ಟು ಹೋದ ಮಗುವನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡು ಸಾಕುತ್ತಾಳೆ. ಮಗುವಿನ ಕುಲಗೋತ್ರ ತಿಳಿಯದ ಮಡಿ ಹೆಂಗಸು ಆ ಮಗುವನ್ನು ನಿಸ್ವಾರ್ಥವಾಗಿ ಸಲಹಿದ್ದಲ್ಲದೆ ಅದರ ತಂದೆ ತಾಯಿ ಯಾರೆಂದು ತಿಳಿದಾಗ ಕೂಡ ವಿಚಲಿತವಾಗದೆ ತನ್ನ ಕರ್ತವ್ಯವೆಂಬಂತೆ ಒಪ್ಪಿಸುವುದು ಅವರಲ್ಲೂ ಅಸಾಧಾರಣ ವ್ಯಕ್ತಿತ್ವವನ್ನು ತಿಳಿಸುತ್ತದೆ.

ಗಂಗೆ ಗೌರಿ ಒಟ್ಟೊಟ್ಟಿಗೆ ಆಡಿ ಬೆಳೆದವರು, ಇಲ್ಲಿ ಕಾಡಲ್ಲಿ ಆಡುವಾಗ ಒಂದು ಜಿಂಕೆಮರಿ ಸಿಕ್ಕಿ ಅದನ್ನು ಪ್ರೀತಿಯಿಂದ ಮುದ್ದಿಟ್ಟು ಸಾಕಿ ಅದೊಂದು ದಿನ ಇದ್ದಕ್ಕಿದ್ದಂತೆ ಮನೆಬಿಟ್ಟು ಕಾಡಿಗೆ ಓಡಿದಾಗ ಗಂಗೆ ಅದನ್ನು ಅಗಲಲಾರದವಳಂತೆ ಅತ್ತು ಗೋಳಾಡಿ ಅಗಲಿಕೆಯ ತಾಪಕ್ಕೆ ಜ್ವರ ಬಂದು ಅದೇ ಜ್ವರದಲ್ಲಿ ಪ್ರಾಣ ಬಿಡುತ್ತಾಳೆ. ಮನೆಯಿಂದ ಮಾಯವಾದ ದಿವ್ಯ ಮೃಗದ ಜೊತೆಗೆ ಗಂಗೆ ಪ್ರಾಣ ಹೋದಾಗ ಲೇಖಕರು ಆ ಮುಗ್ಧ ಮಗುವಿನ ಸಾವಿನಲ್ಲೂ ದಿವ್ಯತ್ವವನ್ನು ಕಾಣುತ್ತಾರೆ. ಅನಂತರ ಮೌನಿಯಾದ ಗೌರಿ ಪ್ರತಿದಿನ ಗುಡ್ಡ ಬೆಟ್ಟಗಳಲ್ಲಿ ಅಲೆಯತೊಡಗುತ್ತಾಳೆ. ಆ ಅಲೆಯುವಿಕೆಯಲ್ಲೂ ಗೌರಿಯ ಸಾನಿಧ್ಯ ಸುಖವನ್ನು ಅನುಭವಿಸುತ್ತಾಳೆ, ಅದಕ್ಕೂ ಉದಾಹರಣೆ ಕೊಡುತ್ತಾರೆ ಕವಿ, ವೇದವ್ಯಾಸರ ಮಗ ಶುಕನ ಕಥೆಯದು. ಯಾವ ಕರ್ಮಕಾಷ್ಠ ವ್ಯಸನಗಳು ತಟ್ಟದ ಬಾಲಕ ಎಲ್ಲವನ್ನೂ ಮೀರಿ ಪರ್ಣಕುಟಿಯಿಂದ ಹೊರ ಹೊರಟಾಗ ವ್ಯಾಸಮುನಿ ಎಲ್ಲ ತಂದೆಯಂತೆ ಪುತ್ರಾ-ಪುತ್ರಾ ಎಂದು ಹಿಂಬಾಲಿಸುತ್ತಾರೆ. ಆ ಧ್ವನಿ ಎಲ್ಲ ದಿಕ್ಕುಗಳಲ್ಲಿ ಪ್ರತಿಧ್ವನಿಸುತ್ತದೆ. ಆಗ ವ್ಯಾಸರಿಗೆ ಆ ಪ್ರತಿಧ್ವನಿ ದಿಕ್ಕು ದಿಕ್ಕುಗಳಲ್ಲಿ ಬೆಳೆದು ನಿಂತ ಮರಗಳು ದೂರದ ಗುಡ್ಡ ಬೆಟ್ಟಗಳು ಪ್ರತಿಧ್ವನಿಸುವಂತೆ ಕೇಳಿಸಿ ಹೀಗೆ ಸರ್ವ ಭೂತ ಹೃದಯಗಳಲ್ಲಿ ಶುಕ ಒಂದಾಗಿರುವುದನ್ನು ತಂದೆಯಾದ ವೇದವ್ಯಾಸರು ಅರಿಯುತ್ತಾರೆ. ಹಾಗೆ ಪಂಚಭೂತಗಳಲ್ಲಿ ಒಂದಾಗಿ ಮರಗಿಡಗಳಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡುದನ್ನು ಕೇಶವರ ಪ್ರಕೃತಿ ಮಡಿಲಲ್ಲಿ ಗೌರಿ ಪಡೆಯುತ್ತಿದ್ದ ಶಾಂತಿ, ನೆಮ್ಮದಿಗೆ ಕಾರಣ ಕಂಡುಕೊಂಡು ಅದನ್ನು ಅಕ್ಕುಗೆ ಹೇಳುವ ಸಂದರ್ಭದಲ್ಲಿ ಗೌರಿಯ ಭಾವಜೀವಿತ್ವ, ಕೇಶವ ಅಕ್ಕುವಿನ ದೃಷ್ಠಿಯಲ್ಲಿ ದಿವ್ಯತೆಯನ್ನು ಪಡೆದು ಅವಳು ಅಲೌಕಿಕ ನೆಲೆಯನ್ನು ಮುಟ್ಟುವುದನ್ನು ಸೂಚಿಸುತ್ತದೆ.

ಕೃತಿ ಪರಿಚಯ



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ


# ಪ್ರಶಸ್ತಿ ಕೃತಿಗಳು ಮತ್ತು ಲೇಖಕರ ಪರಿಚಯ

**ಡಾ. ಕೆ.ಎಸ್. ಶ್ಯಾಮಪ್ರಸಾದ್ ಸ್ಮರಣಾರ್ಥ ಶ್ರೇಷ್ಠ ಸಾಹಿತ್ಯ ಕೃತಿ ಪ್ರಶಸ್ತಿ**

'3019 AD' ಒಂದು ವೈಜ್ಞಾನಿಕ ಕಥೆ. ಕಥೆಯ ಕಾಲಘಟ್ಟ ಸಾವಿರ ವರ್ಷಗಳ ಆಚೆ. ಆಗ ಭೂಮಿಯು ಇಡೀ ಬ್ರಹ್ಮಾಂಡದಲ್ಲಿ ತನ್ನ ಹಿರಿಮೆ ಪ್ರದರ್ಶಿಸಲು, ಮೇಲುಗೈ ಸಾಧಿಸಲು ಸದಾ ಹವಣಿಸುತ್ತಿರುತ್ತದೆ. ಭೂಮಿಯ ನಿವಾಸಿಗರೆಲ್ಲರೂ ಅತೀ ಸಾಮರ್ಥ್ಯ ಉಳ್ಳವರಾಗಿಯೇ ಇರಬೇಕು ಎಂಬುದೇ ಭೂಸರ್ಕಾರದ ಪರಿಕಲ್ಪನೆ. ಇದಕ್ಕೆ ಪೂರಕವಾಗಿ ಭೂಮಿಯ ಮೇಲೆ ಅನೇಕ ವಿಧವಾಗಿ ತಮ್ಮ ಸಾಮರ್ಥ್ಯಗಳನ್ನು ವರ್ಧಿಸಿಕೊಳ್ಳುವ ವಿಶಿಷ್ಟ ಜಾತಿಗಳ ಜನರು 'ಸೃಷ್ಟಿಯಾಗಿರುತ್ತಾರೆ'. ಮತ್ತೆ ಇನ್ನೊಂದು ಕಡೆ ತಮ್ಮ ತನವನ್ನು ಕಾಪಾಡಿಕೊಂಡು, ಸೃಷ್ಟಿ ನಿಷ್ಠೆ ಇರಿಸಿಕೊಂಡು, ಕೃತಕವಾಗಿ ತಮ್ಮ ಸಾಮರ್ಥ್ಯಗಳನ್ನು ವೃದ್ಧಿಪಡಿಸಿಕೊಳ್ಳಲು ನಿರಾಕರಿಸುವ 'ಗಾಂಪರು". ವಿಜ್ಞಾನಿಗಳು ಸಾವನ್ನು ನಿವಾರಿಸುವ ತಂತ್ರಜ್ಞಾನವನ್ನು ಕಂಡುಹಿಡಿದಿದ್ದಾರೆ. ಅಮರತ್ವವದ ಹೊಸತಿಲಲ್ಲಿ ನಿಂತ ಮನುಕುಲ... ಮುಂದೇನಾಗುತ್ತದೆ?

ಈ ಕಥೆಯನ್ನು ಮೂರು ಆವೃತ್ತಿಗಳಲ್ಲಿ Paper back ,e- Book ಹಾಗೂ Audio book- ಪ್ರಕಟಿಸಿರುವುದು MyLang Books

ಡಾ.ಶಾಂತಲ ಬೆಂಗಳೂರಿನಲ್ಲಿ ಪ್ರಸೂತಿ ಹಾಗೂ ಸ್ತ್ರೀ ರೋಗ ತಜ್ಞೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ದ್ವಿ ಭಾಷಾ ಬರಹಗಾರ್ತಿಯಾಗಿದ್ದು, ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಅನೇಕ ಬರಹಗಳನ್ನು ಬರೆದಿದ್ದಾರೆ. ಕನ್ನಡದ ಬಹುತೇಕ ವಾರ ಹಾಗೂ ಮಾಸ ಪತ್ರಿಕೆಗಳಲ್ಲಿ, ದಿನ ಪತ್ರಿಕೆಗಳಲ್ಲಿ ಇವರ ಕಥೆ ಹಾಗೂ ಕಾದಂಬರಿಗಳು ಪ್ರಕಟವಾಗಿವೆ. ಆಂಗ್ಲ ಕಥೆಗಳು ರಾಷ್ಟ್ರ ಹಾಗೂ ಅಂತಾರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದಿವೆ. ಹಲವು ಕಲಾ ಪ್ರದರ್ಶನ ಮಾಡಿರುವ ಇವರು ಕಲಾವಿದರಾಗಿಯೂ ಗುರುತಿಸಿಕೊಂಡಿದ್ದಾರೆ.







**ಡಾ. ಕೆ.ಎಸ್. ಶ್ಯಾಮಪ್ರಸಾದ್ ಶ್ರೇಷ್ಠ ವೈದ್ಯಕೀಯ ಸಾಹಿತ್ಯ ಕೃತಿ**


**ಚಿತ್ತ ಸಮುದ್ರ**

ಆಧುನಿಕತೆಯ ಉತ್ತುಂಗದಲ್ಲಿರುವ 21ನೇ ಶತಮಾನದಲ್ಲಿಯೂ ಮಾನಸಿಕ ಆರೋಗ್ಯದ ಕುರಿತಾದ ಅಜ್ಞಾನ ಮತ್ತು ಅದಕ್ಕೆ ಅಂಟಿಕೊಂಡಿರುವ ಕಳಂಕಗಳು ನಮ್ಮ ಸಮಾಜದಲ್ಲಿನ್ನೂ ಜೀವಂತವಾಗಿವೆ. ಮಾನಸಿಕ ಆರೋಗ್ಯವನ್ನು ನಿರ್ಲಕ್ಷಿಸುವುದೂ, ಮಾನಸಿಕ ಸಮಸ್ಯೆ ಹೊಂದಿರುವವರು ಚಿಕಿತ್ಸೆ ಪಡೆಯಲು ಹಿಂದೇಟು ಹಾಕುವುದೂ, ಇಂದಿಗೂ ಜ್ವಲಂತ ಸಮಸ್ಯೆಯಾಗಿ ನಮ್ಮ ಮುಂದಿವೆ. ಮಾನಸಿಕ ಆರೋಗ್ಯದ ಕುರಿತು ಜನಜಾಗ್ರತೆ ಮೂಡಿಸುವ ಸಲುವಾಗಿಯೇ ಡಾ|. ಕೆ.ಎಸ್. ಪವಿತ್ರ ಅವರು ಚಿತ್ತ ಸಮುದ್ರ ಪುಸ್ತಕವನ್ನು ಹೊರತಂದಿದ್ದಾರೆ. ಮನಸ್ಸು ಎಂಬುದು ನಮ್ಮ ದೇಹದ ಒಂದು ಅಂಗ ಎಂದು ಒತ್ತಿ ಹೇಳುತ್ತಲೇ, ಮನಸ್ಸಿನ ಸ್ವಚ್ಛತಾ ಅಭಿಯಾನಕ್ಕಾಗಿ ಕೈಗೊಳ್ಳಬೇಕಾದ ಚಿಕಿತ್ಸೋಪಾಯಗಳನ್ನು ತಿಳಿಸಿ ಹೇಳಿದ್ದಾರೆ. ಭಾರತದಲ್ಲಿ ಸಾಮಾನ್ಯವಾಗಿ ಕಾಣುವ ಹತ್ತು ಮಾನಸಿಕ ಕಾಯಿಲೆಗಳ ಬಗೆಗೆ ಮಾಹಿತಿಯನ್ನು ನೀಡಿದ್ದಾರೆ. ಕಲಿಕೆಯ ಸಮಸ್ಯೆಗಳ ಬಗೆಗೆ, ಹದಿಹರೆಯದವರ ಸಂಘರ್ಷಗಳ ಬಗೆಗೆ ಬೆಳಕನ್ನು ಚೆಲ್ಲಿದ್ದಾರೆ. ಖಿನ್ನತೆ, ಆತ್ಮಹತ್ಯೆಗಳ ಕುರಿತು ವಿವರಗಳನ್ನು ತಿಳಿಸಿದ್ದಾರೆ. ವೈದ್ಯಕೀಯ ವಿಷಯಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ಹೇಳಿದ್ದಾರೆ. ಪ್ರತಿ ಮಾನಸಿಕ ಸಮಸ್ಯೆಗೂ ಎಲ್ಲರೂ ಅಳವಡಿಸಿಕೊಳ್ಳಬಹುದಾದ ಸುಲಭ ತಂತ್ರಗಳನ್ನು ಸೂಚಿಸುತ್ತಾ, ಅವುಗಳ ಬಗೆಗಿನ ಭಯ, ಮೌಢ್ಯಗಳನ್ನು ತೊಳೆದು ಹಾಕುವ ಪ್ರಯತ್ನವನ್ನು ಮಾಡಿದ್ದಾರೆ. ಪುಸ್ತಕ ಓದಿ ಕೆಳಗಿಡುವ ಮುನ್ನ, ಮಾನಸಿಕ ಸಮಸ್ಯೆಗಳೂ ದೈಹಿಕ ಅನಾರೋಗ್ಯದಷ್ಟೇ ಸರ್ವೇ ಸಾಮಾನ್ಯ ಮತ್ತು ಮಾನಸಿಕ ಆರೋಗ್ಯದ ಬಗೆಗಿನ ಸಲಹೆ ಮತ್ತು ಮಾಹಿತಿಗಳನ್ನು ಎಲ್ಲರೂ ತಿಳಿದು ಪಾಲಿಸಬೇಕು ಎಂಬ ಸತ್ಯ ಮನದಟ್ಟಾಗುತ್ತದೆ.

ಡಾ.ಕೆ.ಎಸ್.ಪವಿತ್ರ ಈವರೆಗೆ 52 ಕೃತಿಗಳನ್ನು ಬರೆದ ವೈದ್ಯೆ–ಲೇಖಕಿ–ನೃತ್ಯಕಲಾವಿದೆ.ಅವರ ಎರಡು ವೃತ್ತಿಗಳ ಅವಿಭಾಜ್ಯ ಸಂವಹನವಾಗಿ ಸಾಹಿತ್ಯವನ್ನು ಪರಿಭಾವಿಸಿದ್ದಾರೆ .ನಿಮ್ಹಾನ್ಸ್ ನಿಂದ ಮನೋವೈದ್ಯಕೀಯ ಎಂ.ಡಿ ಪಡೆದಿರುವ ಡಾ.ಪವಿತ್ರ ತಮ್ಮ ಸಾಹಿತ್ಯ ರಚನೆಯನ್ನು ಗಂಭೀರವಾಗಿ ಪರಿಗಣಿಸಿ ಕನ್ನಡ ಎಂ.ಎ ಮತ್ತು ಪತ್ರಿಕೋದ್ಯಮ ಎಂ.ಎ.ಪಡೆದಿದ್ದಾರೆ. ಅಕಾಡೆಮಿ ಪ್ರಶಸ್ತಿಯನ್ನೂ ಒಳಗೊಂಡಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಅವರ ಸಾಹಿತ್ಯ ಸೇವೆಗೆ ಮನ್ನಣೆಯಾಗಿ ಸಂದಿವೆ. ಶಿವಮೊಗ್ಗೆಯಲ್ಲಿದ್ದುಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ವೇದಿಕೆ–ಸಂಸ್ಥೆಗಳಲ್ಲಿ ಅವರು ಕ್ರಿಯಾಶೀಲರು.





**ಡಾ, ಸುನಂದಾ ಆರ್. ಕುಲಕರ್ಣಿ ವಾರ್ಷಿಕ ವೈದ್ಯಕೀಯ ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿ**

**ಪೂರ್ವಸೂರಿಗಳ ಹೆಗಲೇರಿ...!**

ಆಧುನಿಕ ವೈದ್ಯಕೀಯದ ಸಾಧನೆಗಳು ಅಪಾರ! ರೋಮ್ ಸಾಮ್ರಾಜ್ಯದ ಪರ್ವಕಾಲದಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ 25 ವರ್ಷಗಳು ಮಾತ್ರ. ಈಗ ಅದು 73 ವರ್ಷಗಳಾಗಿವೆ. ಈ ಜೀವಿತಾವಧಿಯ ಏರಿಕೆಗೆ ವೈದ್ಯಕೀಯ ವಿಜ್ಞಾನದಲ್ಲಿ ಆದ ಸಂಶೋಧನೆಗಳು ಹಾಗೂ ಸುಧಾರಣೆಗಳೂ ಒಂದು ಮುಖ್ಯ ಕಾರಣವಾಗಿವೆ. ಇಂದಿಗೆ ಕ್ರಿ.ಪೂ.60,000 ವರ್ಷಗಳಿಂದ ಹಿಡಿದು, ಇಂದಿನವರೆಗೆ ಮನುಕುಲದ ವೈದ್ಯಕೀಯ ಇತಿಹಾಸ ಬೆಳೆದು ಬಂದ ದಾರಿ ಅತ್ಯಂತ ರೋಚಕ! ನಮ್ಮ ಎಲ್ಲ ಮಹಾನ್ ವೈದ್ಯರ ಹೆಗಲನ್ನೇರಿ, ವೈದ್ಯಕೀಯವು ಬೆಳೆದುಬಂದ ಮುಖ್ಯ ಮೈಲಿಗಲ್ಲುಗಳನ್ನು ತಿಳಿಯುವ ಪ್ರಯತ್ನವನ್ನು ಈ ಹಸ್ತಪ್ರತಿಯಲ್ಲಿ ಮಾಡಲಾಗಿದೆ. ಪ್ರಸ್ತುತ ಕೃತಿಯಲ್ಲಿ 50 ಪ್ರಮುಖ ಮೈಲಿಗಲ್ಲುಗಲ್ಲುಗಳನ್ನು ನೋಡಬಹುದು.

ಡಾ| ನಾ.ಸೋಮೇಶ್ವರ ಅವರು ವೃತ್ತಿಯಿಂದ ಔದ್ಯೋಗಿಕ ವೈದ್ಯಕೀಯ ತಜ್ಞರು. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವವರು. ಅವರ 60 ವೈದ್ಯಕೀಯ ಹಾಗೂ ಸಾಹಿತ್ಯಕ ಕೃತಿಗಳು ಪ್ರಕಟವಾಗಿವೆ. ಬೆಂಗಳೂರು ದೂರದರ್ಶನ, ಚಂದನ ವಾಹಿನಿಯಲ್ಲಿ ಕ್ವಿಜ್ ಮಾಸ್ಟರ್ ಆಗಿ 'ಥಟ್ ಅಂತ ಹೇಳಿ' ಕ್ವಿಜ್ ಕಾರ್ಯಕ್ರಮದ 4300ಕ್ಕೂ ಹೆಚ್ಚಿನ ಕಂತುಗಳನ್ನು ಕಳೆದ 20 ವರ್ಷಗಳಲ್ಲಿ ಪ್ರಸಾರ ಮಾಡಿರುವರು. ಇವರ ಐಎಂಎ ಸೇವೆಗಾಗಿ ಭಾರತೀಯ ವೈದ್ಯಕೀಯ ಸಂಘ, ಬೆಂಗಳೂರು ಶಾಖೆಯು ಇವರಿಗೆ 'ಬಿ.ಸಿ.ರಾಯ್ ಡಾಕ್ಟರ್ಸ್ ಡೇ ಅವಾರ್ಡ್'ನ್ನು 1997ರಲ್ಲಿ ನೀಡಿದೆ. ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆಯು 2001ರಲ್ಲಿ ಇವರನ್ನು ಗೌರವಿಸಿದೆ. ಕರ್ನಾಟಕ ರಾಜ್ಯ ಸರ್ಕಾರವು ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಪ್ರಸ್ತುತ ಅವರಿಗೆ ಡಾ| ಸುನಂದಾ ಆರ್ ಕುಲಕರ್ಣಿ ವೈದ್ಯ ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿಯು ದೊರೆತಿದೆ. ಅವರಿಗೆ ಅಭಿನಂದನೆಗಳು.

**ಡಾ. ಸುನಂದಾ ಆರ್ ಕುಲಕರ್ಣಿ ವಾರ್ಷಿಕ ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿ**


**ನಿನ್ನೆ ನಿನ್ನೆಗೆ..ಇಂದು ಇಂದಿಗೆ..**

ನಿತ್ಯದ ದಿನಚರಿಯಲ್ಲಿ ಸಿಗುವ ಅನುಭವಗಳು ಬದುಕಿನಲ್ಲಿಉತ್ಕೃಷ್ಟ ಪಾಠಗಳನ್ನು ಕಲಿಸಬಲ್ಲವು.ಒಂದೊಮ್ಮೆ ಆ ಅನುಭವಗಳು ವ್ಯಕ್ತಿಯಅಂತರಂಗವನ್ನು ಹಿತವಾಗಿ ಸ್ಪರ್ಶಿಸಿದಾಗ ಬರಹರೂಪಕ್ಕೂ ಇಳಿಯಬಲ್ಲವು. ವೃತ್ತಿ ಹಾಗೂ ಕುಟುಂಬದ ಬದುಕಿನಲ್ಲಿ ಹತ್ತಿರದಿಂದಕಂಡ ಸನ್ನಿವೇಶಗಳನ್ನು ಲೇಖನಿಗಿಳಿಸಿದಾಗ ರೂಪುಗೊಂಡ ಬರಹಗಳ ಸಂಗ್ರಹವೇ ಈ ಹಸ್ತಪ್ರತಿ.

ಇಲ್ಲಿಎಲ್ಲ ವಯಸ್ಸಿನವರೂ ಓದಿ ಅರ್ಥ ಮಾಡಿಕೊಳ್ಳಬಹುದಾದ ಪಾಠಗಳಷ್ಟೇ ಅಲ್ಲ, ಒಂದು ಸುಂದರ ವ್ಯಕ್ತಿತ್ವಕ್ಕೆ ಬೇಕಾದ ಮಾರ್ಗದರ್ಶಿ ಸೂತ್ರಗಳೂ ಇವೆ.

ಡಾ ವಿನಯ ಶ್ರೀನಿವಾಸ್.

ವೃತ್ತಿಯಲ್ಲಿರೋಗ ಲಕ್ಷಣ ಶಾಸ್ತ್ರಜ್ಞೆ ಹಾಗೂ ಪ್ರವೃತ್ತಿಯಲ್ಲಿ ಬರಹಗಾರ್ತಿ.ಶಿವಮೊಗ್ಗದ ಪ್ರತಿಷ್ಠಿತ ಸುಬ್ಬಯ್ಯ ಸಮೂಹ ಸಂಸ್ಥೆಗಳ ಕಾರ್ಯ ನಿರ್ವಾಹಕ ನಿರ್ದೇಶಕರಾಗಿರುವಇವರು ಕಳೆದ ಇಪ್ಪತ್ತೈದು ವರ್ಷಗಳಿಂದ ತಮ್ಮನ್ನು ಸಾಹಿತ್ಯಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದುವರೆಗೆಇನ್ನೂರಕ್ಕೂ ಹೆಚ್ಚು ಆರೋಗ್ಯಕ್ಕೆ ಸಂಬಂಧಿಸಿದ, ಮೂವತ್ತಕ್ಕೂ ಹೆಚ್ಚು ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಮತ್ತು ಹಲವಾರು ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ಇವರ ಲೇಖನಿಯಿಂದ ಮಕ್ಕಳ ಕತೆಗಳು, ಪ್ರಬಂಧಗಳು, ಹನಿಗವನಗಳು ಮತ್ತು ಹನಿಕತೆಗಳು ಮೂಡಿಬಂದಿವೆ. ರಂಗಭೂಮಿ, ಸಂಗೀತ ಮತ್ತುಚಾರಣಇವರಆಸಕ್ತಿಯಇತರ ವಿಷಯಗಳು.



**ಡಾ ಕೆ ಆರ್ ಶ್ರೀಧರ್**
ಹಿರಿಯ ಮನೋವೈದ್ಯರು ಮತ್ತು
ವೈದ್ಯ ಸಾಹಿತಿ, ಶಿವಮೊಗ್ಗ

ಕಾಯಿಲೆ–ಚಿಕಿತ್ಸೆ

# ಕುಟುಂಬದ ಮೇಲೆ ಮದ್ಯವ್ಯಸನದ ಕಬಂಧ ಬಾಹುಗಳು



**ಡಾ|| ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು

ಎರಡು ಸಾವಿರದ ಇಪ್ಪತ್ತರ ಕೊರೋನಾ ಪಿಡುಗಿನ ಅವಧಿಯಲ್ಲಿ ಇಡೀ ದೇಶವನ್ನು ಕೆಲವು ತಿಂಗಳುಗಳ ಕಾಲ ಲಾಕ್‌ಡೌನ್ ಮಾಡಲಾಯಿತು. ಎಲ್ಲ ಕಛೇರಿ, ಅಂಗಡಿ–ಮುಗ್ಗಟ್ಟುಗಳನ್ನು ಮುಚ್ಚಲಾಯಿತು. ಅವಶ್ಯವಾದ ಆಹಾರ ವಸ್ತುಗಳ ಅಂಗಡಿಗಳನ್ನು ನಿಗದಿತ ಅವಧಿಗೆ ಮಾತ್ರ ತೆಗೆಯಬೇಕೆಂಬ ಕಾನೂನನ್ನು ಸರ್ಕಾರ ಜಾರಿ ಮಾಡಿತು. ಇದಕ್ಕೆ ಯಾರೂ ಚಕಾರ ಎತ್ತಲಿಲ್ಲ. ಆದರೆ ಮದ್ಯದಂಗಡಿಗಳನ್ನು ತೆರೆಯಲೇಬೇಕೆಂದು ಹಲವು ಜನರು ಹಟ ಮಾಡಿದರು. ಅದರಂದ ಆಗುವ ಲಾಭ ನಷ್ಟಗಳನ್ನು ಲೆಕ್ಕ ಹಾಕಿದ ಸರಕಾರ ಮದ್ಯದಂಗಡಿಗಳನ್ನು ನಿಯಮಿತ ವೇಳೆಯಲ್ಲಿ ತೆರೆಯಲು ಅನುಮತಿ ನೀಡಿತು. ಇದರಿಂದ ಮದ್ಯವ್ಯಸನಿಗಳಿಗಾದ ಸಂತೋಷ ಅಷ್ಟಿಷ್ಟಲ್ಲ. ಮದ್ಯದಂಗಡಿಗಳ ಬಾಗಿಲು ತೆರೆಯುವ ಮೊದಲೇ, ಮದ್ಯ ವ್ಯಸನಿಗಳು ಕ್ಯೂ ನಿಂತ ದೃಶ್ಯವನ್ನು ಟಿ.ವಿ. ಮಾಧ್ಯಮಗಳಲ್ಲಿ ನೋಡಿದವರನ್ನು ದಂಗು ಬಡಿಸುವ ದೃಶ್ಯ ಅದಾಗಿತ್ತು.

ಮದ್ಯವು ವ್ಯಸನಿಗಳ ಶರೀರದ ಬೇರೆ ಅಂಗಾಗಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದರಲ್ಲಿಯೂ ಲಿವರ್ (ಯಕೃತ್) ಹೃದಯ ಮತ್ತು ಮಿದುಳಿನ ಮೇಲೆ ತೀವ್ರವಾದ ದುಷ್ಪರಿಣಾಮಗಳಾಗುತ್ತವೆ. ಮದ್ಯ ವ್ಯಸನಿಗಳು ಮಾನಸಿಕವಾಗಿಯೂ ಹಲವು ಸಂಕಷ್ಟಗಳನ್ನು ಅನುಭವಿಸುತ್ತಾರೆ. ಕೆಲವರು ಭಯ ಭೀತಿಯಿಂದ ಬಳಲಿದರೆ, ಕೆಲವರು ಸಂಶಯ ಭ್ರಮೆ ಎಂಬ ಮಾನಸಿಕ ಕಾಯಿಲೆಯಿಂದ ಬಳಲುತ್ತಾರೆ. ಮಿದುಳಿನ ನರಕೋಶಗಳು ದುರ್ಬಲಗೊಂಡು ಡೆಮೆನ್ಷಿಯಾ (Dementia) ಎಂಬ ಮರೆವು ಕಾಯಿಲೆಗೆ ತುತ್ತಾಗಬಹುದು.

ಕೆಲವು ವೇಳೆ ಮದ್ಯವ್ಯಸನಿಗಳು ಸಾಮಾಜಿಕ ಅಪರಾಧವೆಸಗಬಹುದು. ಕಳವು, ಹೊಡೆದಾಟ ಇವು ಮದ್ಯವ್ಯಸನಿಗಳಲ್ಲಿ ಸಾಮಾನ್ಯ. ಸುಪಾರಿ ಕೊಲೆ ಎಂದು ಹೇಳುತ್ತಾರಲ್ಲಾ ಅದು ಹೆಚ್ಚಾಗಿ ಮದ್ಯವ್ಯಸನಿಗಳು ಮದ್ಯದ ಅಮಲಿನಲ್ಲಿ ಮಾಡುವ ಕೆಲಸ.

ಮದ್ಯ ವ್ಯಸನವು ತನ್ನ ಕಬಂಧ ಬಾಹುಗಳನ್ನು ಕುಟುಂಬದ ಮೇಲೆ ಚಾಚಿದರೆ ಅದರಿಂದ ಆಗುವ ದುಷ್ಪರಿಣಾಮಗಳು ಕಲ್ಪನಾತೀತ. ಸುಮಾರು ನಲವತ್ತರ ಆಸುಪಾಸಿನ ಮಹಿಳೆಯೊಬ್ಬರು ಅಳುತ್ತಾ ನನ್ನ ಕ್ಲಿನಿಕ್‌ಗೆ ಬಂದರು. ಬಂದವರೇ "ಸಾರ್ ನಿಮ್ಮ ಕಾಲಿಗೆ ಬೀಳ್ತೇನೆ. ನನ್ನ ಸಂಸಾರ ಉಳಿಸಿಕೊಡಿ" ಎಂದು ಕಾಲಿಗೆ ಬಿದ್ದರು. ಅವರನ್ನು ಸಮಾಧಾನಿಸಿ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹೇಳಿದೆ. ವಿಷಯ ಏನೆಂದು ಕೇಳಿದೆ. ಅದಕ್ಕವರು "ಸಾರ್ ನನ್ನ ಗಂಡ ಕಂಠಮಟ್ಟ ಕುಡೀತಾರೆ. ಕುಡಿದು ಬಂದು ದಿನಾ ಗಲಾಟೆ ಮಾಡ್ತಾರೆ. ಈಗೀಗ ಇಡೀ ದಿನ ಕುಡ್ಕೊಂಡು ಬಿದ್ದಿರ್ತಾರೆ. ಕೆಲಸಕ್ಕೂ ಹೋಗೊಲ್ಲ. ಮನೇಲಿ ದಿನಾ ಜಗಳ. ಹೊಡೆದಾಟ. ನನಗೆ ಮೂರು ಮಕ್ಕಳಿದ್ದಾರೆ. ಅವರಿಗೆ ಓದೋದಕ್ಕೂ ಬಿಡೋಲ್ಲ. ನಾನು ತರಕಾರಿ ಮಾರಿ ನನ್ನ ಮಕ್ಕಳು ಮತ್ತು ಗಂಡನನ್ನು ಸಾಕಬೇಕು. ನಮ್ಮ ಮನೆ ದಿನಾಲು ಒಂದು ಕುರುಕ್ಷೇತ್ರ. ಕುಡ್ಕೊಂಡು ಬಂದು ನನ್ನ ಮೇಲೆ ಬೇರೆಯವರ ಸಂಬಂಧ ಇದೆ ಎಂದು ಸಂಶಯ ಪಡ್ತಾರೆ, ಹೊಡೀತಾರೆ. ಇದನ್ನೆಲ್ಲಾ ನೋಡಿ ನನ್ನ ಮಕ್ಕಳು ಈಗೀಗ ಹೆದರಿ, ಅವರು ಮನೆಗೆ ಬಂದ ಕೂಡ್ಲೇ ಮೂಲೇಲಿ ಅವಿತ್ಕೋತಾರೆ. ಅವರಿಗೆ ಓದೋದಕ್ಕೂ ಆಗ್ತಾ ಇಲ್ಲ. ಹೇಗಾದ್ರೂ ಮಾಡಿ ಅವರು ಕುಡಿಯೋದನ್ನ ನಿಲ್ಲಿಸಿಕೊಡಿ ಸಾರ್. ನಿಮಗೆ ಪುಣ್ಯ ಬರುತ್ತೆ" ಎಂದರು. ಪತಿಗೆ ಚಿಕಿತ್ಸೆ ನೀಡಿದ ನಂತರ ಪೂರ್ಣ ಗುಣಮುಖರಾದರು. ಅವರ ಕುಟುಂಬದಲ್ಲಿ ನೆಮ್ಮದಿ ನೆಲೆಸಿತು.

ಇದು ಮೇಲೆ ತಿಳಿಸಿದ ಮಹಿಳೆಯೊಬ್ಬರ ಕತೆಯಲ್ಲ. ಮದ್ಯವ್ಯಸನಿಗಳ ಹಲವಾರು ಕುಟುಂಬಗಳು ಈ ವಿಧದ ಸಂಕಷ್ಟದಲ್ಲಿ ತೊಳಲಾಡುತ್ತವೆ. ಅವಿವಾಹಿತ ಮದ್ಯ ವ್ಯಸನಿಗಳಿಂದ ಪೋಷಕರು ಮತ್ತು ಇವರ ಕುಟುಂಬದ ಸದಸ್ಯರೊಂದಿಗಿನ ಸಂಬಂಧಗಳು ಹಾಳಾಗುತ್ತವೆ. ಪ್ರೀತಿ, ಪ್ರೇಮ ಮರೆಯಾಗಿ ದ್ವೇಷ,

ಅಸೂಯೆಗಳು ಹೊಗೆಯಾಡುತ್ತವೆ. ವಿವಾಹಿತರಾದರೆ ದಾಂಪತ್ಯ ಜೀವನದಲ್ಲಿ ಬಿರುಕುಂಟಾಗುತ್ತದೆ. ಇದರಿಂದ ಭಾವನಾತ್ಮಕವಾಗಿ ದಾಂಪತ್ಯವಿರಸ ಉಂಟಾಗುತ್ತದೆ. ಕೆಲವು ವೇಳೆ ಲೈಂಗಿಕ ಸಂಪರ್ಕದಲ್ಲಿ ತೊಂದರೆಗಳು ಕಾಣಿಸಿಕೊಳ್ಳಬಹುದು. ಕುಡಿತದ ಅಮಲಿನಲ್ಲಿ ಹೆಂಡತಿಯ ಮೇಲೆ ಹಿಂಸೆ ಎಸಗಬಹುದು. ಅವಳ ಮೇಲೆ ಸಂಶಯ ಉಂಟಾಗಿ ಲೈಂಗಿಕ ಕಿರುಕುಳ ಕೊಡಬಹುದು. ಪತಿಯ ಹಿಂಸೆಯನ್ನು ತಾಳಲಾರದೇ ಪತ್ನಿಯು ತೌರೂರಿಗೆ ಹೋಗಬಹುದು. ಕೊನೆಯ ಹಂತದಲ್ಲಿ ವಿವಾಹ ವಿಚ್ಛೇದನವಾಗಬಹುದು. 'ಮದ್ಯ ವ್ಯಸನಕ್ಕೆ ಮದುವೆಯೇ ಮದ್ದು. ಮದುವೆ ಮಾಡಿದರೆ ಎಲ್ಲಾ ಸರಿ ಹೋಗುತ್ತಾನೆ' ಎಂಬ ತಪ್ಪು ಕಲ್ಪನೆ ಸಮಾಜದಲ್ಲಿ ವ್ಯಾಪಕವಾಗಿದೆ. ಮದ್ಯ ವ್ಯಸನದ ಅಂಶವನ್ನು ಮುಚ್ಚಿಟ್ಟು ಮದುವೆ ಮಾಡುತ್ತಾರೆ. ನಂತರ ಆ ವ್ಯಕ್ತಿಯು ಕುಡಿಯುವುದನ್ನು ಮುಂದುವರೆಸಿದರೆ ಅದಕ್ಕೆ ಪತ್ನಿಯೇ ಕಾರಣ ಎಂಬ ಅಪವಾದ ಬೇರೆ. ಹೀಗೆ ನಿರಂತರ ದಾಂಪತ್ಯ ವಿರಸದ ಜೊತೆಗೆ ಪೋಷಕರ ಅಪವಾದವನ್ನು ಆ ಮಹಿಳೆ ಸಹಿಸಿಕೊಳ್ಳಬೇಕು. ಮದ್ಯವ್ಯಸನಿಯ ಪೋಷಕರು ಮಗನ ಮದ್ಯ ವ್ಯಸನಕ್ಕೆ ಪತ್ನಿಯೇ ಕಾರಣ ಎಂಬ ಅಪವಾದವನ್ನು ಕೇಳಲಾಗದೇ ಪತ್ನಿಯು ಆತ್ಮಹತ್ಯೆಗೆ ಪ್ರಯತ್ನಿಸಿದ ಉದಾಹರಣೆಗಳೂ ಇವೆ.



ಮದ್ಯವ್ಯಸನಿಗಳಿಂದ ಆಗುವ ಕೌಟುಂಬಿಕ ಹಿಂಸಾಚಾರಗಳು ಎಂಥವರ ಮನವನ್ನೂ ಕರಗಿಸುತ್ತದೆ. ಒಂದು ಪ್ರಕರಣದಲ್ಲಿ, ಕುಡಿದ ಅಮಲಿನ ಮತ್ತಿನಲ್ಲಿ ಮನೆಗೆ ಬಂದ ತಂದೆ, ಮಗಳು ಒಬ್ಬಳೇ ಮನೆಯಲ್ಲಿರುವುದನ್ನು ಗಮನಿಸಿದ. ಅವಳಿಗೆ ಕಾಫಿ ಮಾಡಿಕೊಡಲು ಹೇಳಿದ. ಓದಲು ಕುಳಿತಿದ್ದ ಮಗಳು ಒಲ್ಲೆನೆಂದಳು ಆ ಕೂಡಲೇ ಕೋಪಗೊಂಡು ಮಗಳನ್ನು ನೇಣು ಹಾಕುತ್ತೇನೆಂದು ಒಂದು ವೇಲ್‌ಅನ್ನು ತೆಗೆದುಕೊಂಡ. ಅದನ್ನು ಮಗಳ ಕುತ್ತಿಗೆಗೆ ಸುತ್ತಿದ. ಇದರಿಂದ ಹೆದರಿದ ಮಗಳು ಕಿರುಚಾಡಲು ಪ್ರಾರಂಭಿಸಿದಳು. ಪಕ್ಕದ ಮನೆಗೆ ಹೋಗಿದ್ದ ತಾಯಿಗೆ ಮಗಳ ಕಿರುಚಾಟ ಕೇಳಿಸಿ, ಗಾಬರಿಯಿಂದ ಬಂದಾಗ ಪತಿಯು ಮಗಳನ್ನು ನೇಣುಹಾಕಿ ಸಾಯಿಸಲು ಪ್ರಯತ್ನಿಸುತ್ತಿದ್ದನ್ನು ನೋಡಿದಳು. ಆ ಕೂಡಲೇ ಮಗಳನ್ನು ಬಿಡಿಸಿ ಒಂದು ದೊಣ್ಣೆ ತೆಗೆದುಕೊಂಡು ಪತಿಯನ್ನು ಬೆದರಿಸಿ ಓಡಿಸಿದಳು. ಇನ್ನೊಂದು ಪ್ರಕರಣದಲ್ಲಿ ಮಧ್ಯರಾತ್ರಿ ಪಾನಮತ್ತನಾಗಿ ಬಂದ ಗಂಡನಿಗೆ ಪತ್ನಿ ಬಾಗಿಲು ತೆರೆದಳು. ಆ ಕೂಡಲೇ ಹೆಂಡತಿ ಮಕ್ಕಳನ್ನು ಹೊರಗೆತಳ್ಳಿ ರಾತ್ರಿಯಿಡಿ ಮಳೆಯಲ್ಲೇ ನೆನೆಯುವಂತೆ ಮಾಡಿದ ಆ ಕುಡುಕ ವ್ಯಕ್ತಿ. ಹೀಗೆ ಮದ್ಯವ್ಯಸನಿಗಳು ಮಾಡುವ ಕೌಟುಂಬಿಕ ಹಿಂಸೆಗಳು ಹಲವಾರು.

ಮದ್ಯ ವ್ಯಸನಿಗಳಿಂದ ಕುಟುಂಬದ ಸದಸ್ಯರು ಅನುಭವಿಸುವ ಸಂಕಟ ದೀರ್ಘಾವಧಿಯಾಗಿರುತ್ತದೆ. ಮದ್ಯ ವ್ಯಸನಿಗಳ ಕುಟುಂಬದಲ್ಲಿ ಬೆಳೆದ ಮಕ್ಕಳು ಭಾವನಾತ್ಮಕ ಸಮಸ್ಯೆಗಳಿಂದ ಬಳಲುತ್ತಾರೆ. ಪೋಷಕರಿಂದ ಭಾವನಾತ್ಮಕವಾಗಿ ದೂರವಾಗುತ್ತಾರೆ. ತಂದೆಯನ್ನು ನೋಡಿದರೆ ಕೋಪ, ತಿರಸ್ಕಾರ ಭಾವನೆಗಳುಂಟಾಗುತ್ತವೆ ತಮ್ಮ ಕೋಪ, ಅಸಹನೆಯನ್ನು ತಾಯಿಯೊಂದಿಗೋ ಅಥವಾ ಕುಟುಂಬದ ಇತರ ಸದಸ್ಯರೊಂದಿಗೋ ಪ್ರದರ್ಶಿಸುತ್ತಾರೆ. ಹರೆಯ ತಲುಪಿದ ಹಾಗೆ ತಾವೇ ಇದಕ್ಕೆ ಕಾರಣವಿರಬಹುದು ಎಂಬ ಅಪರಾಧೀ ಮನೋಭಾವ ಇವರಲ್ಲಿ ಉಂಟಾಗಬಹುದು. ಕೆಲವರು ತಾವು ಇಂತಹ ಕುಟುಂಬದಲ್ಲಿ ಯಾಕಾದರೂ ಹುಟ್ಟಿದೆವೋ ಎಂಬ ಅಪರಾಧೀ ಮನೋಭಾವದಿಂದ ಬಳಲುತ್ತಾರೆ. ಕುಟುಂಬದಲ್ಲಿ ದಿನನಿತ್ಯ ನಡೆಯುವ ಕಲಹಗಳನ್ನು ನೋಡಿ ಖಿನ್ನತೆಗೊಳಗಾಗಬಹುದು. ಸ್ನೇಹಿತರನ್ನು ಮನೆಗೆ ಕರೆದುಕೊಂಡು ಬಂದರೆ ಎಲ್ಲಿ ಅವರಿಗೆ ತಿಳಿಯುತ್ತದೋ ಎಂದು ಭಾವಿಸಿ ಒಂಟಿತನವನ್ನು ಬಯಸುತ್ತಾರೆ. ಕೆಲವು ಹರೆಯದ ಮಕ್ಕಳು ಇಂತಹ ಕುಟುಂಬದಲ್ಲಿರುವುದು ಅವಮಾನ ಎಂದು ಭಾವಿಸಿ ಮನೆಯನ್ನೇ ತೊರೆಯುತ್ತಾರೆ. ಸ್ವಾಭಿಮಾನದ ಕೊರತೆಯಿಂದ ಕೀಳರಿಮೆ ಬೆಳೆಯುತ್ತದೆ. ದಿನನಿತ್ಯದ ಕಲುಷಿತ ಕೌಟುಂಬಿಕ ವಾತಾವರಣದಿಂದ ಮಕ್ಕಳು ಸುಳ್ಳು ಹೇಳುವುದು, ಶಾಲೆ ತಪ್ಪಿಸುವುದು, ಕೆಲವು ವೇಳೆ ಸಮಾಜಬಾಹಿರ ಕೆಲಸಗಳನ್ನು ಮಾಡುವುದನ್ನು ನಾವು ಕಾಣಬಹುದು. ಹರೆಯಕ್ಕೆ ಬಂದ ಹಾಗೆ ತಂದೆಯ ಹಾಗೆ ತಾನೂ ಏಕೆ ಕುಡಿಯಬಾರದು ಎಂದು ಕುತೂಹಲದಿಂದ ಕದ್ದು ಮುಚ್ಚಿ ಕುಡಿಯಲು ಪ್ರಾರಂಭಿಸುತ್ತಾರೆ. ಅದು ಕ್ರಮೇಣ ವ್ಯಸನಕ್ಕೆ ತಿರುಗಬಹುದು.

ಹೀಗೆ ಮದ್ಯ ವ್ಯಸನವು ವ್ಯಸನಕ್ಕೊಳಗಾದ ವ್ಯಕ್ತಿಯನ್ನೊಂದೇ ಅಲ್ಲ, ಅವನ ಕುಟುಂಬವನ್ನು ತನ್ನ 'ಕಬಂಧ ಬಾಹುಗಳಲ್ಲಿ' ಆಹುತಿ ತೆಗೆದುಕೊಳ್ಳುತ್ತದೆ ಎಂಬುದು ಅತ್ಯಂತ ಖೇದದ ಸಂಗತಿ. ಮದ್ಯ ವ್ಯಸನಿಯನ್ನು ಚಿಕಿತ್ಸೆಗೊಳಪಡಿಸುವಾಗ ಅವನ ಕುಟುಂಬವನ್ನು ಗಣನೆಗೆ ತೆಗೆದುಕೊಂಡು ಮದ್ಯವ್ಯಸನಿಗೆ ಇದರ ಮನವರಿಕೆ ಮಾಡಿಕೊಟ್ಟಾಗ ಅದರಿಂದ ಹೆಚ್ಚಿನ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.



**ಡಾ॥ ಶ್ರೀವತ್ಸ ಎಸ್ ನಾಡಿಗ್**
ಹೃದ್ರೋಗ ತಜ್ಞರು
ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಶಿವಮೊಗ್ಗ

ಕಾಯಿಲೆ–ಚಿಕಿತ್ಸೆ

# ಗರ್ಭಿಣಿ ಸ್ತ್ರೀಯರಲ್ಲಿ ಹೃದಯಾಘಾತ

ದಿನ ಪೂರ್ತಿ ಮಾಡಿದ ಕ್ಯಾಥ್‌ಲ್ಯಾಬ್ ಕೆಲಸದಿಂದ ಬೇಸತ್ತು, ಕಾಲೆಲ್ಲ ಸೆಟೆದಂತಾಗಿದ್ದವು. ಯಾಕಾದರೂ ಈ ಕಾರ್ಡಿಯಾಲಜಿ ತೆಗೆದು ಕೊಂಡೆನಪ್ಪಾ? ಎಂದು ತಲೆ ಕೆರೆದುಕೊಳ್ಳುತ್ತಾ, ಆದರೂ ಸದ್ಯ ದಿನದ ಕೆಲಸ ಮುಗಿಯಿತಲ್ಲ! ಎಂದು ನಿಟ್ಟುಸಿರು ಬಿಟ್ಟು ಕಾರು ಹತ್ತಿ ಮನೆಗೆ ಹೊರಟೆ. ಯಾವಾಗ ಅನ್ನ ಕಂಡೆನೋ ಎನ್ನುವ ಆತಂಕ! ವಾಚ್ ನೋಡಿದೆ, ರಾತ್ರಿ 9:45. ಹಸಿವು, ಕಾಲುನೋವಿನಿಂದ ಮನೆಯ ಗೇಟು ತಲುಪಿರಕ್ಕಿಲ್ಲ, ಎಮರ್ಜನ್ಸಿ ರೂಮ್‌ನಿಂದ ಕರೆ.

"ಸರ್, 27 ವರ್ಷದ ಹೆಂಗಸಿಗೆ ಸಾಯಂಕಾಲದಿಂದ ಎದೆನೋವು, ECG ನಿಮಗೆ ವಾಟ್ಸಪ್ ಮಾಡಿದ್ದೇನೆ""" ಎಂದರು ನಮ್ಮ ಕರ್ತವ್ಯ ನಿರತ ವೈದ್ಯ ಲಲನಾಮಣಿ. ನನ್ನ ವಿಧಿಯನ್ನು ಶಪಿಸುತ್ತಾ ಇಸಿಜಿ ನೋಡುತ್ತೇನೆ"ಎಂದೆ. ಇಸಿಜಿಯಲ್ಲಿ Acute Anterior Wall MI ಅತ್ಯಂತ ಆಘಾತಕಾರಿ ಮತ್ತು ಅಪಾಯಕಾರಿ ಹಾರ್ಟ್‌ಅಟ್ಯಾಕ್, ನಾನು ನಿದ್ರೆಗಣ್ಣಿನಲ್ಲಿ ತಪ್ಪಾಗಿ ಹಿಸ್ಟರಿ ಕೇಳಿದೆನೆಂದು ತಿಳಿದು ಮತ್ತೆ ಕಾಲ್‌ಬ್ಯಾಕ್ ಮಾಡಿದೆ. ನನಗೆ ಯಾವುದರ ಭಯವಿತ್ತೋ ಹಾಗೆಯೇ ಆಯಿತು. ಆ 27 ವರ್ಷದ ಚಿಕ್ಕ ಯುವತಿ, 6 ತಿಂಗಳ ಗರ್ಭವತಿಯ ಇಸಿಜಿಯಲ್ಲಿ ಸೀರಿಯಸ್ ಹಾರ್ಟ್‌ಅಟ್ಯಾಕ್.

ನನ್ನ ಎದೆ ಝುಲ್ ಎಂದಿತು. ಸಾಮಾನ್ಯವಾಗಿ ಚಿಕ್ಕ ವಯಸ್ಸಿನ ಹೆಂಗಸರಲ್ಲಿ ಎದೆನೋವು Costochondritis (ಎಲುಬಿನ ಮೂಳೆಗಳಿಂದ ಬರುವ) ನೋವು ಆಗಿರುತ್ತದೆ ಅಥವಾ Mastalgia (ಸ್ತನದಿಂದ) ಬರುವ ನೋವಾಗಿರುತ್ತದೆ.

ಚಿಕ್ಕ ವಯಸ್ಸಿನಲ್ಲಿ ಅದರಲ್ಲೂ ಹೆಣ್ಣು ಮಕ್ಕಳಲ್ಲಿ ಹೃದಯಾಘಾತ ತೀರ ವಿರಳ. ಅದರಲ್ಲೂ ಬಸುರಿ ಹೆಂಗಸರಲ್ಲಿ ಈ ರೀತಿಯ ಸಂಭವ ಬಹಳ ಅಪರೂಪ. ಆದರೆ ವೈದ್ಯಕೀಯ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಹೃದಯಾಘಾತ ಆಗಬಹುದು ಎಂದು ನನ್ನ 10+ ವರ್ಷಗಳ ಅನುಭವದಿಂದ ತಿಳಿದಿದ್ದೇನೆ.


ಸಾಮಾನ್ಯವಾಗಿ ಈ ರೀತಿಯ ಮೇಜರ್ ಅಟ್ಯಾಕ್ ಎಂದ ಕೂಡಲೇ ನಾವು ನಮ್ಮ ಕ್ಯಾಥ್‌ಲ್ಯಾಬ್ ಟೀಮ್‌ಅನ್ನು (ನರ್ಸ್‌ಗಳು ಟೆಕ್ನೀಷಿಯನ್‌ಗಳು) ಅಲರ್ಟ್ ಮಾಡುತ್ತೇವೆ. ಏಕೆಂದರೆ ಇಂತಹ ಅಟ್ಯಾಕ್‌ಗಳಲ್ಲಿ ರೋಗಿಗಳಲ್ಲಿ ಕೇವಲ ಸೆಕೆಂಡು/ಮಿನಿಟ್‌ಗಳಲ್ಲಿ VT/VF (Ventricular Fibrillation) ಆಗಿ ಹೃದಯ ಸ್ಥಂಭನ ಆಗುವ ಸಾಧ್ಯತೆ ಇರುತ್ತದೆ. ಅದರಲ್ಲೂ ಈ ಚಿಕ್ಕ ಹುಡುಗಿ ಗರ್ಭವತಿ ಆದ್ದರಿಂದ ನನ್ನ ಜವಾಬ್ದಾರಿ ದುಪ್ಪಟ್ಟಾಗಿದೆ! ಈ ಕೇಸಿನಲ್ಲಿ ನನಗೆ ಎರಡು ಮುಖ್ಯವಾದ ಸವಾಲುಗಳಿದ್ದವು. (ಸಿರಿಯಸ್ ಅಟ್ಯಾಕ್ ಎನ್ನುವುದನ್ನು ಬಿಟ್ಟು!) ಮೊದಲನೇಯದಾಗಿ ಈಕೆ ಗರ್ಭವತಿಯಾಗಿದ್ದರಿಂದ ಬೇರೆ ರೋಗಿಗಳಿಗೆ ನೀಡುವ ಔಷಧಿಗಳಾದ Statins, ACE Inhibitors (ಕೊಲೆಸ್ಟ್ರಾಲ್ ಕಡಿಮೆ ಮಾಡುವ, ಹಾರ್ಟ್ ಪಂಪಿಂಗ್ ಹೆಚ್ಚಿಸುವ ಔಷಧಿಗಳು) ಇವುಗಳನ್ನು ಕೊಡಲಾಗುವುದಿಲ್ಲ. ಮಗುವಿಗೆ ತೊಂದರೆಯಾಗಿ ಬೆಳವಣಿಗೆ ಊನವಾಗಬಹುದು. ಅಥವಾ ಗರ್ಭಪಾತ ಕೂಡ ಆಗಬಹುದು! ಎರಡನೆಯದಾಗಿ ಹಾರ್ಟ್‌ಅಟ್ಯಾಕ್ ರೋಗಿಗಳಿಗೆ ಮಾಡುವ ಆಂಜಿಯೋಗ್ರಾಂ, ಪ್ರೈಮರಿ ಆಂಜಿಯೋಪ್ಲಾಸ್ಟಿ ಇವುಗಳಲ್ಲಿ ವಿಕಿರಣಗಳು (Radiation) ಹೊರ ಹೊಮ್ಮುವುದರಿಂದ ಇದರಲ್ಲೂ ಮಗುವಿಗೆ ದುಷ್ಪರಿಣಾಮಗಳು ಆಗಬಹುದು! ಆದರೆ ಬೇರೆ ದಾರಿಯಿಲ್ಲ! ತೀವ್ರವಾದ ಅಟ್ಯಾಕ್ ಆಗಿದೆ. ಏನೂ ಮಾಡದೆ ಬಿಟ್ಟರೆ ರೋಗಿ ಉಳಿಯುವ ಸಾಧ್ಯತೆಯೇ ಕಡಿಮೆ!

"ದೇವರೇ ಎಂಥಹ ಸಂಕಷ್ಟಕ್ಕೆ ಸಿಲುಕಿಸಿದೆಯಲ್ಲಪ್ಪಎಂದು ಕಾರನ್ನು ತಿರುಗಿಸಿ ಮತ್ತೆ ಆಸ್ಪತ್ರೆ ಕಡೆಗೆ ಹೊರಟೆ. ನಾನು ಹೋಗುವ ಹೊತ್ತಿಗೆ ಅಲ್ಲಿ ರೋಗಿಯ ಪತಿ ಮತ್ತು ತಮ್ಮ ಉದ್ವೇಗದಿಂದ ನನ್ನ ಬಳಿ ಬಂದು ಅಳಲು ಪ್ರಾರಂಭಿಸಿದರು.

"ನನ್ನ ಕೈಲಾದ ಪ್ರಯತ್ನ ಮಾಡುತ್ತೇನೆ, ದೇವರಿದ್ದಾನೆ!"ಎಂದು ಸಂತಾಪ ಹೇಳಿ, ಎಕೋ ಸ್ಕ್ಯಾನ್ ನೋಡಿದೆ. ಹಾರ್ಟ್ ಪಂಪಿಂಗ್ ಕೇವಲ 35% ಇತ್ತು (Normal 60%)

ಆದದ್ದಾಗಲಿ ನೋಡೋಣ ಎಂದು, ರೋಗಿಯನ್ನು ತಕ್ಷಣ ಕ್ಯಾಥ್‌ಲ್ಯಾಬ್‌ಗೆ ಶಿಫ್ಟ್ ಮಾಡಿದೆವು. ಮಗುವಿಗೆ

ವಿಕಿರಣ ತಾಗದಂತೆ ಹೊಟ್ಟೆ & ಬೆನ್ನು ಭಾಗವನ್ನು Lead Shieldನಿಂದ ಹೊದಿಸಿ ಹಸ್ತದ ರೇಡಿಯಲ್ ಆರ್ಟರಿಯ (ರಕ್ತನಾಳ) ಮುಖಾಂತರ ಆಂಜಿಯೋಗ್ರಾಂ ಶುರು ಮಾಡಿದೆ. ಹೃದಯದ ಮುಖ್ಯವಾದ ರಕ್ತನಾಳ (Left Anterior Descending Artery – LAD Widowmaker Artery) ಜಡದಿಂದಲೇ 100% ಬ್ಲಾಕ್ ಆಗಿತ್ತು! (Ostial Total Occlusion) ಇಂತಹ ಬ್ಲಾಕೇಜ್‌ಗಳು ಹಠಾತ್ ಸಾವು ಮಾಡುತ್ತವೆ.! ಆಂಜಿಯೋಪ್ಲಾಸ್ಟಿ ಮಾಡುವಂತೆ ಬ್ಲಾಕೇಜ್ ಮುಖಾಂತರ ವೈರ್ ಹಾಯಿಸಿ ಬಲೂನಿಂಗ್ ಮಾಡಿ, ಮತ್ತೆ ರಕ್ತದ ಮರುಸಂಚಾರ ಶುರು ಮಾಡುವುದಷ್ಟೇ ನನ್ನ ಉದ್ದೇಶವಾಗಿತ್ತು. ಗರ್ಭಿಣಿ ಸ್ತ್ರೀಯರಲ್ಲಿ ಸಾಧ್ಯವಾದಷ್ಟು ಸ್ಟಂಟ್ ಅಳವಡಿಸುವುದನ್ನು ತಡೆಗಟ್ಟಲು ನಾವು ಪ್ರಯತ್ನಿಸುತಿದ್ದೇವೆ.  ಏಕೆಂದರೆ ಈ ರೋಗಿಗಳಲ್ಲಿ ರಕ್ತ ತೆಳುವಾಗಿಸುವ ಕ್ಲೊಪಿಡೊಗ್ರಿಲ್ Statins (ಸ್ಟಂಟ್‌ಗೆ ಅತಿ ಅವಶ್ಯಕವಾದ ಔಷಧಿಗಳು)ಗಳನ್ನು ಕೊಡುವುದು ಬಹಳ ಕ್ಲಿಷ್ಟವಾಗುತ್ತದೆ.



ಈ ಎಲ್ಲಾ ಅಂಶಗಳನ್ನು ಮನಗಂಡು, ಕೇವಲ ಬಲೂನ್ ಆಂಜಿಯೋಪ್ಲಾಸ್ಟಿ ಮಾಡಿದೆ. ಸಾಮಾನ್ಯ ಆಂಜಿಯೋಪ್ಲಾಸ್ಟಿಗಿಂತ 1/3 ರಷ್ಟು ವಿಕಿರಣ ಪ್ರಮಾಣದಲ್ಲಿ ಕೆಲಸ ಮುಗಿಸಿದೆ. ನನ್ನ ಉದ್ವೇಗ, ಎದೆಬಡಿತ ನಿಧಾನವಾಗಿ ಶಾಂತವಾಯಿತು. ಪ್ರತಿ ಬಾರಿಯೂ ಇಂತಹ ಸೀರಿಯಸ್ ಕೇಸ್‌ಗಳನ್ನು ಮಾಡುವಾಗ ಕಾರ್ಡಿಯಾಲಜಿಸ್ಟ್‌ಗಳ ಹೃದಯ ಬಡಿತ 160–170 ರವರೆಗೂ ಹೋಗುತ್ತದೆ. ಈ Adernaline Surge ನಿಂದಲೇ ನಮಗೇ ಒಮ್ಮೊಮ್ಮೆ ಅಟ್ಯಾಕ್ ಆಗಬಹುದು!

ಎರಡು ದಿನ ರೋಗಿಯನ್ನು ಐಸಿಯುನಲ್ಲಿ ಇಟ್ಟೆವು! ಮರುದಿನ ಮಾಡಿದ ಸ್ಕ್ಯಾನ್‌ನಲ್ಲಿ ಹೃದಯ ಪಂಪಿಂಗ್ 35 ರಿಂದ 45ಕ್ಕೆ ಜಿಗಿದಿತ್ತು. ಗರ್ಭಕೋಶದ ಸ್ಕ್ಯಾನ್ ಮಾಡಿ ಮಗುವಿನ ಆರೋಗ್ಯವು ಚನ್ನಾಗಿರುವುದನ್ನು ನೋಡಿ ಸಂತಸವಾಯಿತು. 3 ದಿನದ ನಂತರ ರೋಗಿಯನ್ನು ಡಿಸ್ಚಾರ್ಜ್ ಮಾಡಿದೆವು.

ತಿಂಗಳುಗಳು ಕಳೆದವು, ರೋಗಿಯನ್ನು ನಮ್ಮ ಪ್ರಸೂತಿ ತಜ್ಞರು ನೋಡಿದರು. ಡಿಲವರಿಯ ಸಂದರ್ಭದಲ್ಲಿ ಈ ರೀತಿಯ ಅಟ್ಯಾಕ್ ಮರುಕಳಿಸುವ ಭಯವೂ ಇತ್ತು. ಆದರೆ ದೇವರ ದಯದಿಂದ ಯಾವುದೇ ತೊಂದರೆಯಿಲ್ಲದೇ ಸಿಜೇರಿಯನ್ ಸೆಕ್ಷನ್ ನಿಂದ ಮಗು ಆರೋಗ್ಯವಾಗಿ ಹುಟ್ಟಿತು. ಮಗುವಿನ ತೂಕ 3.2 ಕೆಜಿಯ ಗುಂಡು ಗುಂಡಾದ ಮುದ್ದಾದ ಮಗುವನ್ನು ನೋಡಿ ನನಗೆ ಕಣ್ಣು ತುಂಬಿ ಬಂದಿತು. ನಾನು ಕಾರ್ಡಿಯಾಲಜಿಸ್ಟ್ ಆಗಿದ್ದು ಸಾರ್ಥಕ ಎಂದೆನಿಸಿತು.

2 ವರ್ಷ ಕಳೆದಿವೆ, ಮೇಜರ್ ಅಟ್ಯಾಕ್‌ನಿಂದ ಉಳಿದ ಆ ಯುವತಿ ಈಗ ಸ್ಕೂಲ್ ಒಂದರಲ್ಲಿ ಟೀಚರ್ ಆಗಿದ್ದಾರೆ. ಹಾರ್ಟ್ ಪಂಪಿಂಗ್ ನಾರ್ಮಲ್ ಆಗಿದ್ದು ಅವಳ ಮಗ ಈಗ ಅಂಗನವಾಡಿಗೆ ಹೋಗುತ್ತಿದ್ದಾನೆ.

ಹಲವಾರು ಬಾರಿ ಅತಿಯಾದ ಕೆಲಸದ ಒತ್ತಡದಿಂದ ಯಾಕಪ್ಪ ಡಾಕ್ಟರ್ ಆದೆ"ಎನ್ನುವ ಭಾವನೆ ಮೂಡುತ್ತದೆ. ಆದರೆ ಇಂತಹ ಜೀವ ಉಳಿಸಿದ ಅನುಭವಗಳು ನಮ್ಮ ಜೀವನಕ್ಕೆ ಅರ್ಥ ನೀಡುವುದಲ್ಲದೆ, ಕೆಲಸ ಮಾಡಲು ಪ್ರೇರೆಪಿಸುತ್ತವೆ.

ಹೆಣ್ಣು ಮಕ್ಕಳಲ್ಲಿ ಹಾರ್ಟ್‌ಅಟ್ಯಾಕ್ ಆಗಬಹುದು! ಚಿಕ್ಕ ವಯಸ್ಸಿನಲ್ಲೂ ಆಗಬಹುದು. ಕೆಲವೊಮ್ಮೆ ಬರ್ತ್ ಪಿಲ್ಸ್‌ಗಳಿಂದ, ಗರ್ಭಿಣಿಯರಲ್ಲಾಗುವ ಹಾರ್ಮೋನ್‌ಗಳ ವ್ಯತ್ಯಾಸದಿಂದ, ರಕ್ತದ ಸ್ನಿಗ್ಧತೆ (Viscocity) ಹೆಚ್ಚುವುದರಿಂದ, ಹೆಣ್ಣು ಮಕ್ಕಳಲ್ಲಿ ಹೆಚ್ಚುತ್ತಿರುವ ಧೂಮಪಾನದಂತಹ ಚಟಗಳಿಂದ, ಕೆಲವೊಮ್ಮೆ ಕೊವಿಡ್ ಸೊಂಕಿನಿಂದ, ಮನೆಯಲ್ಲಿ ಕೌಟುಂಬಿಕವಾಗಿ ಹೃದಯದ ಕಾಯಿಲೆಗಳಿದ್ದು (Strong Family History of Heart Disease) ಇಂತಹ ಸಂದರ್ಭದಲ್ಲಿ ಹಾರ್ಟ್ ಅಟ್ಯಾಕ್ ಆಗಬಹುದು. ಅಲ್ಲದೆ Spontaneous Coronary Artery Dissection (S.C.A.D) ಎಂಬ ತೊಂದರೆಯಿಂದಲೂ ಗರ್ಭಿಣಿಯರಲ್ಲ ಹಾಟ್‌ಅಟ್ಯಾಕ್ ಆಗಬಹುದು.

ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳಲ್ಲಿ ಅದರಲ್ಲೂ ಗರ್ಭಿಣಿಯರಲ್ಲಿ ಈ ಪ್ರಮಾಣ ತೀರಾ ಕಡಿಮೆ, ಆದರೆ ಅಸಾಧ್ಯವಲ್ಲ. ಆದ್ದರಿಂದ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳು ಬಂದೊಡನೆ "Non-Cardiac Chest Pain" ಎಂದು ತಿರಸ್ಕರಿಸದೆ ಇಸಿಜಿ ಸೂಕ್ತ ಪರೀಕ್ಷೆಗಳನ್ನು ಮಾಡುವುದು ಬಹಳ ಅವಶ್ಯಕ.



**ಡಾ. ಕವಿತಾ ಸದಾಶಿವ**
ರೋಗ ಶಾಸ್ತ್ರಜ್ಞೆ/ ಔದ್ಯೋಗಿಕ ಆರೋಗ್ಯ ಶಾಸ್ತ್ರಜ್ಞೆ
ಮಲ್ನಾಡ್ ಡಯಗ್ನೋಸ್ಟಿಕ್ಸ್, ಭದ್ರಾವತಿ, 9480329699

ವೈದ್ಯೇತರ....

# ವೈದ್ಯರೂ ಮನುಷ್ಯರಲ್ಲವೇ?




**ಡಾ ಶಿವಾನಂದ ಕುಬಸದ**
ವಿಭಾಗೀಯ ಸಂಪಾದಕರು

**ಮುಧೋಳ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ**
**ಡಾ. ಶಿವಾನಂದ ಕುಬಸದ**
**ಅವರಿಗೆ ಹಾರ್ದಿಕ ಅಭಿನಂದನೆಗಳು**

ಚಿಕ್ಕವಯಸ್ಸಿನಿಂದಲೂ ನನಗೆ ಗಂಟಲು ನೋವು, ಶೀತ, ಸೈನಸ್ ಸಮಸ್ಯೆಗಳು ಆಗಾಗ್ಗೆ ಕಾಡುತ್ತಿದ್ದವು. ಅಂದಿನ ಕಾಲದಲ್ಲಿ ವೈದ್ಯರುಕೆಮ್ಮು– ಶೀತ ಅಂದರೆಗಾಜಿನ ಬಾಟಲಿಯಲ್ಲಿ ಕೆಂಪು ನೀರಿನಔಷಧಕೊಡುತ್ತಿದ್ದರು. ಜೊತೆಗೆ ಮಡಚಿದಕಾಗದದಲ್ಲಿರುವನಾಲ್ಕು ಬಿಳಿ ಮಾತ್ರೆಗಳು, ಕೆಲವೊಮ್ಮೆಟೆಟ್ರಾಸೈಕ್ಲಿನ್ ಗುಳಿಗೆಗಳು... ಇವುಗಳನ್ನು ನುಂಗುತ್ತ ಬೆಳೆದ ನಾನು ತದನಂತರದಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ವೈದ್ಯಳಾದ ಮೇಲೂ ಈ ಶೀತ – ಸೈನಸ್ ಸಮಸ್ಯೆಗಳು ನನ್ನನ್ನು ಬಿಡಲಿಲ್ಲ. ನನ್ನ ಕೆಲ ಸಂಬಂಧಿಗಳು ಹಾಗು ಹೊರರೋಗಿ ವಿಭಾಗದಲ್ಲಿ ನಾನು ಕರ್ತವ್ಯ ನಿರ್ವಹಿಸುವಾಗ ಬರುವ ಕೆಲ ರೋಗಿಗಳು, "ಡಾಕ್ಟರೇ, ನಿಮಗೂ ಕಾಯಿಲೆಯೇ? "ಎಂದುಆಶ್ಚರ್ಯದಿಂದ ಪ್ರಶ್ನಿಸುತ್ತಿದ್ದರು. ಆಗ ಕಿರಿಯ ವಯಸ್ಸಿನವಳಾದ ನಾನು,ಕೆಲವೊಮ್ಮೆ ಸ್ವಲ್ಪ ಸಿಡಿಮಿಡಿಗೊಂಡು ಹೇಳುತ್ತಿದ್ದುದ್ದುಂಟು, "ನಾವು ವೈದ್ಯರಿರಬಹುದು, ಆದರೆ ಮನುಷ್ಯರಲ್ಲವೆ?" ಎಂದು. ವರ್ಷಕ್ಕೊಂದು ಬಾರಿ ಶೀತ–ಕೆಮ್ಮುಗಳಿಂದ ನರಳುವ ನನಗೆ ಸೋಂಕು ತಗಲುವುದೆಂಬ ಉದ್ದೇಶದಿಂದ ಕೆಮ್ಮುಶೀತವಿರುವ ರೋಗಿಗಳಿಗೆ, "ಮುಖದ ಮುಂದೆ ಕೆಮ್ಮ ಬೇಡಿ, ಕೆಮ್ಮುವಾಗ ಬಾಯಿಗೆ ಕರವಸ್ತ್ರ ಅಡ್ಡಇಡಿ."ಎಂದು ಹೇಳುತ್ತಿದ್ದೆ. ನಾನು ಕೊಡುವ ಸಲಹೆಗಳಿಗೆ ಕೆಲವರು ಸಿಡುಕುತ್ತಿದ್ದರು, ಅನೇಕರು ತಿರಸ್ಕರಿಸುತ್ತಿದ್ದರು. "ನಿಮಗೆ ಕಾಯಿಲೆ ಬಂದರೆ ನೀವೇ ಟ್ರೀಟ್ಮೆಂಟ್ ತೆಗೆದುಕೊಳ್ಳಬಹುದಲ್ಲ.."ಎನ್ನುವವರೂ ಇದ್ದರು.

ಹತಾಶಳಾಗಿ ನಾನು, ನನ್ನ ಶೀತ ಮತ್ತು ಸೈನಸ್



ಸಮಸ್ಯೆಗಳನ್ನು ಪ್ರಾಣಾಯಾಮ/ ಯೋಗಾಭ್ಯಾಸಗಳಿಂದ ನಿಯಂತ್ರಣದಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅಷ್ಟರಲ್ಲಿ ಬಂದ "ಕೋವಿಡ್‌ಯುಗ" ನನ್ನ ಪಾಲಿಗೆ ಒಂದು ರೀತಿಯಲ್ಲಿ ಆರೋಗ್ಯಕರ ಸಮಯವಾಯಿತು. ಏಕೆಂದರೆ ಆಎರಡು ವರ್ಷ ಶೀತ–ಕೆಮ್ಮು ಇರದೆ ನನ್ನ ಮೂಗು ಮತ್ತು ಗಂಟಲು ಒಂದು ದಾಖಲೆ ನಿರ್ಮಿಸಿತ್ತು ! ಮಾಸ್ಕುಗಳ ಬಳಕೆ , ಬಾಯಿ ಮುಚ್ಚಿಕೆಮ್ಮಿ / ಸೀನಿ ಎಂದು ಕಟ್ಟುನಿಟ್ಟಾಗಿ ಹೇಳಲು ಸಿಕ್ಕ ಅನುಮತಿ ಇವುಗಳಿಗೆ ಮನದಲ್ಲೇ ಧನ್ಯವಾದಗಳನ್ನು ಹೇಳುತ್ತಿದ್ದೆ .

ಆದರೆ ಈ ಕೋವಿಡ್ ಯುಗದಲ್ಲಿ ನಮ್ಮ ಅನೇಕ ವೈದ್ಯ



ಮಿತ್ರರು ಸೋಂಕು ತಗಲಿ ಮೃತರಾದದ್ದು ಶೋಚನೀಯ ಸಂಗತಿ. "ವೈದ್ಯರೂ ಮನುಷ್ಯರು " ಎಂಬುದನ್ನುಕರೋನಾ ವೈರಾಣುಗಳು ಸಾಬೀತು ಪಡಿಸಿದವು! ವೈದ್ಯಕೀಯ ಜ್ಞಾನ ಪಡೆದ ಮಾತ್ರಕ್ಕೆ ವೈದ್ಯರ ಶರೀರ ವಿಜ್ಞಾನ ಭಿನ್ನವಾಗಲು ಸಾಧ್ಯವೇ? "ವೈದ್ಯ" ಎಂಬ ಪದಒಂದು ಹಣೆಪಟ್ಟಿಅಷ್ಟೇ.

ಜನಸಾಮಾನ್ಯರ ಸರಾಸರಿಆಯುಷ್ಯ 74.9 ವರ್ಷಗಳಿಗೆ ಹೊಲಿಸಿದರೆ ವೈದ್ಯರ ಸರಾಸರಿ ಆಯುಷ್ಯ 61.7 ವರ್ಷಗಳು ಎಂದು ದಕ್ಷಿಣ ಏಷಿಯಾದ ಒಂದು ಅಧ್ಯಯನ ತಿಳಿಸಿದೆ. ಹಾಗೆಯೇ ಇತ್ತೀಚಿಗೆ ಪುಣೆಯ ಭಾರತೀಯ ವೈದ್ಯಕೀಯ ಸಂಘವು ವೈದ್ಯರ ಸರಾಸರಿ ಆಯುಷ್ಯ ಜನಸಾಮಾನ್ಯರ ಸರಾಸರಿ ಆಯುಷ್ಯಕ್ಕಿಂತ 10 ವರ್ಷ ಕಮ್ಮಿ ಎಂದು ಕಂಡುಹಿಡಿದಿದೆ. "ದೀಪದ ಬುಡದಲ್ಲಿ ಕತ್ತಲು" ಎಂಬಂತೆ ನನ್ನ ವೈದ್ಯ ಮಿತ್ರರಿಗೆ ತಮ್ಮದೇ ಆರೋಗ್ಯದ ಕಡೆ ನಿಗಾ ಇಡಲು ಪುರಸೊತ್ತೆಂಬುದು ಎಲ್ಲಿದೆ? ಒತ್ತಡದ ಬದುಕಲ್ಲವೇ? ತಾನು "ವೈದ್ಯ"ನೆಂಬ ಮನೋಭಾವ, ಮತೊಬ್ಬ ವೈದ್ಯರ ಬಳಿ ತೋರಲು ಮುಜಗರ, ಸಮಯದ ಅಭಾವ ..ಹೀಗೆ ಅಡಚಣೆಗಳು ಅನೇಕ. "ಜನ ಸೇವೆಯೇ ಜನಾರ್ಧನ ಸೇವೆ" ಎನ್ನುತ್ತಾ ವೈದ್ಯರು ವೈದ್ಯಕೀಯ ಜ್ಞಾನವನ್ನು ಜನರಿಗೆ ಮಾತ್ರ ಮೀಸಲಿಡುತ್ತಾರೆ ಎಂದು ಕೆಲವೊಮ್ಮೆ ಅನಿಸುತ್ತದೆ.

"ಜಾತಸ್ಯ ಹೀ ಮರಣಂಧ್ರುವಂ" – ಹುಟ್ಟಿದವರೆಲ್ಲರೂ ಒಂದು ದಿನ ನಿರ್ಗಮಿಸಲೇಬೇಕು. ವೈದ್ಯರು ಈ ನಿಯಮಕ್ಕೆ ಹೊರತಲ್ಲ . ಮಾನವ ಕಲ್ಯಾಣಕ್ಕಾಗಿ ತಮ್ಮ ಆರೋಗ್ಯವನ್ನೇ ಬಲಿ ಕೊಟ್ಟಂತಹ ಮೇರಿಕ್ಯೂರಿ, ಜಾನ್ ಹಂಟರ್‌ರಂತಹ ವಿಜ್ಞಾನಿಗಳ ನೆನಪಾಗುತ್ತದೆ.

ನನ್ನ ಮನಸ್ಸಿಗೆ ನಾಟಿದ ಕೊನೆಯ ಮಾತು,

"ನನಗೆ ಕರ್ಮದಲ್ಲಿ ಬಲವಾದ ನಂಬಿಕೆ. ನಾವು ಎಷ್ಟು ಕೊಡುತ್ತೇವೋ ಅಷ್ಟು ಮಾತ್ರ ಪಡೆಯುತ್ತೇವೆ. ಅದು ಒಳಿತಿರಬಹುದು; ಕೆಡುಕೇ ಆಗಿರಬಹುದು. ಇದನ್ನು ನಾವು ಎಷ್ಟು ಬೇಗ ಅರಿತರೆ, ಮನಸ್ಸು ಅಷ್ಟೇ ನಿರಾಳ"

**– ಸಾಂಡ್ರಾ ಬುಲಕ್**

ವೈದ್ಯೇತರ....

# ಒಂದು ಚಷ್ಮಾ ಕಥೆ..



**ಡಾ. ರಾಘವೇಂದ್ರ ಎಫ್.ಎನ್.**
ಪ್ರಾಧ್ಯಾಪಕರು, ವೈದ್ಯಕೀಯ ವಿಭಾಗ
ವಿಮ್ಸ್, ಬಳ್ಳಾರಿ. 9886295403

ನನಗೇನು ಸ್ಪೆಕ್ಸ್ ಇರಲಿಲ್ಲ..... ಇತ್ತೀಚಿಗೆ ಒಂದು ವರ್ಷ ಆಯ್ತು ರೀಡಿಂಗ್ ಗ್ಲಾಸ್ ಬಂದು.. ಫಸ್ಟ್ ಟೈಮ್ ಓದೋವಾಗ ಯಾಕೋ ಸ್ವಲ್ಪ ಸ್ಟೇನ್ ಆದಾಗ ಹೋದ ವರ್ಷ ನನ್ನ ವೈದ್ಯ ಸ್ನೇಹಿತ, ಕಣ್ಣಿನ ತಜ್ಞರಾದ ಡಾ ವಿಜಯ. ನನ್ನ ಕಣ್ ಪರೀಕ್ಷಿಸಿ ಒಂದು ಐ ಗ್ಲಾಸ್ ಕೊಟ್ಟಿದ್ರು....

ಅದು ಕಂಪ್ಲೀಟ್ ಗ್ಲಾಸ್ ಮೇಲಿಂದ ಕೆಳಗೆ. ಓನ್ಲಿ ಫಾರ್ ರೀಡಿಂಗ್ ಪರ್ಪಸ್ ... ಓದೋವಾಗ, ಮೋಬೈಲ್ ನೋಡೋವಾಗ ಮಾತ್ರ. ಫಾರ್‌ರಿಫ್ರಾಕ್ಟರಿ ವಿಷನ್ ಪ್ರಾಬ್ಲಮ್‌ಅಂತಾರೆ. ಅಂದ್ರೆ ದೂರದ್ದು ಕಾಣುತ್ತೆ ಹತ್ತಿರದ್ದು ತೊಂದರೆ ಆಗುತ್ತೆ... ಆದ್ರೆ ಈಗ ಮಾಡ್ರನ್ ಗ್ಲಾಸ್‌ಡಿವೈಡ್ ಮಾಡ್ತಾರೆ. ಕೆಳಗಡೆ ಪೊರ್ಷನ್‌ಡಿಫೆಕ್ಟ್ ಕರೆಕ್ಷನ್ ಮಾಡಿದ್ದು ಮೇಲಿಂದು ನಾರ್ಮಲ್ ವಿಷನ್‌ಇನ್ನುಇತ್ಯಾದಿ ತಾಂತ್ರಿಕತೆ ಉಪಯೋಗಿಸ್ತಾರೆ .

Opthalmology science branch ತಾಂತ್ರಿಕವಾಗಿ, ವೈದ್ಯಕೀಯ ವಿಜ್ಞಾನದಲ್ಲಿ ಈಗ ತುಂಬಾ ತುಂಬಾ ಮುಂದುವರೆದಿದೆ...

ನಾನು ಮೊದಲ ಬಾರಿ ನನ್ನ ಕಣ್ಣುಗಳ ಮೇಲೆ ಪ್ರಯೋಗ ಮಾಡಿದ್ದು ಈ ಗ್ಲಾಸ್ ಗಳ ಚಷ್ಮಾದಿಂದ ... ಅದಕ್ಕೇ ಇದರ ಮೇಲೆ ಅಟ್ಯಾಚ್ಮೆಂಟ್ ಜಾಸ್ತಿ.

ಲೆನ್ಸ್‌ಕಾರ್ಟ್ ನಿಂದ ಇನ್ನು ಬೇರೆ ಎರಡು ಜೋಡಿ ತಗೊಂಡೆ ಸ್ಪೇರ್ ಆಗಿ ಉಪಯೋಗಿಸೋಕೆ.. ಆದರೂ ಮೊದಲ ಸ್ಪೆಕ್ಸ್ ಮೇಲೆ ಏನೋ ಅಭಿಮಾನದ ಪ್ರೀತಿ! ಒಂದು ವರ್ಷ ಆಯ್ತು ಈಗ ಅಭ್ಯಾಸಆಗಿಬಿಟ್ಟಿದೆ.

ಮೊನ್ನೆ ಹೀಗೆ ಬೆಂಗಳೂರಿಂದ ವಾಪಾಸ್ ಬಳ್ಳಾರಿಗೆ ಬರೋವಾಗ ಆದ ಘಟನೆ...


ಕೋಚ್ ನಲ್ಲಿ ರಾತ್ರಿ ಹಂಪಿ ಎಕ್ಸ್‌ಪ್ರೆಸ್‌ಟ್ರೈನ್ ನಲ್ಲಿ ವಾಪಾಸ್ ಬಳ್ಳಾರಿಗೆ ಬರ್ತಾ ಇದ್ದೆ. ಬರ್ತಾ ಸಹಜವಾಗಿ ಅಲ್ಲೇ ಊಟ ಮಾಡಿ, ಕೈ ತೊಳೆದುಕೊಂಡೆ, ಎಲ್ಲರೂ ಲೈಟ್‌ಆಫ್ ಮಾಡಿ ಚಳಿಯಲ್ಲಿ ಹೊದ್ದುಕೊಂಡು ಮಲಕೊಂಡ್ರು.. ನಾನು ನನ್ನ ಸೀಟ್ ಲೈಟ್‌ಆನ್ ಮಾಡಿ, ನನ್ನ ಚಷ್ಮಾ ಹಾಕ್ಕೊಂಡು ಮೊಬೈಲ್ ತೆಗೆದುಯು ಟ್ಯೂಬ್, ಮೆಸೇಜ್ ಅದು ಇದು ಅಂತ ನೋಡ್ತಾ ನೋಡ್ತಾ.. ನಿದ್ದೆ ಮಂಪರಿಗೆ ಜಾರ್ತಾಇದ್ದೆ.. ಆಗ ನನ್ನ ಚಷ್ಮಾ ತೆಗೆದು ಮಲಗೋಣ ಅಂದುಕೊಂಡು ಎಲ್ಲಿ ಇಡೋದು ಅಂತ ಜಾಗ ನೋಡಿದೆ... ಕನ್ನಡಕದ ಬಾಕ್ಸ್ ಬ್ಯಾಗ್ ಒಳಗೆ ಇತ್ತು. ಇನ್ನ ಜೇಬಲ್ಲಿ ಇಟ್ಕೊಂಡು ಮಲಗಿದ್ರೆ ಲಟಕ್‌ಅನ್ನುತ್ತೆ... ಮತ್ತೇ ಎಲ್ರಿಗೂ ಗೊತ್ತೇ ಇರುತ್ತೆ...ಅಲ್ಲೇ ಎರಡು ಸೀಟ್ಗಳ



ಮಧ್ಯೆ ಫುಡ್ ಮತ್ತು ನೀರು ಇಡಲು ಒಂದು ಫಿಕ್ಸೆಡ್ ಸ್ಟಾಂಡ್‌ಇರುತ್ತೆ… ಅದರ ಮೇಲೆ ಕಿಟಕಿ..ಅದರ ಮೇಲೆ ಒಂದು ಕನ್ನಡಿ..!!

ಈಗ ಪ್ರತೀ ಸೀಟ್‌ಗೂ ಒಂದು ಲೈಟ್ ಮತ್ತು ಅದರ ಪಕ್ಕ ಒಂದು ಸಣ್ಣರಾಡ್ ಇರುತ್ತೆ… ಆ ರಾಡ್ ಏನಕ್ಕೆ ಉಪಯೋಗ ನಂಗೆ ಗೊತ್ತಾಗ್ಲಿಲ್ಲ. ಮಾತ್ರ ಚಷ್ಮಾ ಹ್ಯಾಂಗ ಮಾಡೋಕೆ ಒಳ್ಳೇ ಜಾಗ ಅನ್ನಿಸ್ತು… ಆದ್ರೆ ಒಂದ್ ಥಟ್‌ಅಂತ ಥಾಟ್ ಬಂತು.. ಇಟ್ರೆ ಓಕೆ ಆದ್ರೆ ಏನಾದ್ರೂ ಮರೆತರೆ ಹೆಂಗೆ…? ಆಮೇಲೆ ನನ್ ಮೇಲೆ ನಾನೇ ಓವರ್ ಕಾನ್ಫಿಡೆನ್ಸ್ ನಿಂದ "ಇಲ್ಲ ಬಿಡು.. ಬೆಳಿಗ್ಗೆ 5.45 ಗೆ ಬಳ್ಳಾರಿ ರೀಚ್‌ಆದಾಗ ಪಟ್‌ಅಂತ ಲಗೇಜ್‌ಎತ್ಕೊಂಡು ಹೋಗೋವಾಗ ತೊಗೊಂಡು ಹೋಗ್ತೀನಿ" ಅಂತ ಅಲ್ಲಿ ನೇತು ಹಾಕಿದೆ.. ಈಗ ನೆನೆಸ್ಕೊಂಡ್ರೆ ವಿಚಿತ್ರ ಅನ್ನಿಸುತ್ತೆ ನನಗೆ ಈಗ ಏನಿದು ಹೊಸ ಎಕ್ಸ್‌ಪರಿಮೆಂಟ್‌ಅಂತ …!

ಸರಿ ನನ್ನ ಬರ್ತ್ ಮೇಲೆ ಒಬ್ಬ ರಿಟೈರ್ಡ್‌ಇನ್ಕಮ್‌ಟ್ಯಾಕ್ಸ್ ಆಫೀಸರ್ ಪರಿಚಯ ಆದ್ರು. ಅವ್ರು ಮಲಗೋವಾಗ ಇನ್ಸುಲಿನ್ ತೊಗೊಂಡು. ಡಯಾಬಿಟಿಸ್ ಬಗ್ಗೆ ಸ್ವಲ್ಪ ನನ್ನಿಂದ ವಿಷಯ ಹಂಚಿಕೊಂಡು, ನನ್ನ ವೆಜ್ ಪುಲಾವ್‌ಜೊತೆ ಅವ್ರು ತೊಗೊಂಡ್ ಬಂದಿದ್ದ ಚಿಕೆನ್ ಕಬಾಬ್ ತಿನ್ನುತ್ತಾ, ಅದಕ್ಕೇ ತುಂಬಾ ಎಣ್ಣೆ ಇದೆ ಅಂತ ಆ ಕಬಾಬ್‌ಕರ್ತುವನ್ನ ಬಯ್ಯುತ್ತ , ಊಟ ಮಾಡಿ ಪ್ರಯಾಣದ ಪರಿಚಯ ಅಂತಾರಲ್ಲ ಹಾಗೆ ಮಾತಾಡ್ಕೊಂಡು ಒಬ್ಬರಿಗೊಬ್ಬರು ಗುಡ್ ನೈಟ್ ಹೇಳಿ ಮಲಗಿದ್ವು.



ಬೆಳಿಗ್ಗೆ 5.40.. ಬಳ್ಳಾರಿ ಬಂದೇ ಬಿಡ್ತು.. ಆ ತಾತ ಎದ್ದೇಳಿ ಬಂತು ಬಳ್ಳಾರಿ ಅಂದ್ರು. ನಾನು ಧಡ್‌ಅಂತಎದ್ದು, ನನ್ನ ಲಗೇಜ್ ಬ್ಯಾಗ್ ಸೀಟ್ ಕೆಳಗಿಂದ ಎಳೆದು, ಶೂಸ್ ಹಾಕ್ಕೊಂಡು, ಮೋಬೈಲ್ ಚಾರ್ಜರ್‌ಇಟ್ಕೊಂಡು, ಓಕೆ ಬೈ ಸರ್ ನೈಸ್‌ಟು ಮೀಟ್‌ಯು ಅಂತ ಪ್ಲಾಟ್ ಫಾರಂನಲ್ಲಿ ಇಳಿದು , ಬ್ಯಾಗ್‌ಅನ್ನು ಡ್ರಾಗ್ ಮಾಡುಕೊಂಡು ಸ್ಟೇಷನ್‌ಗೇಟ್ ನಿಂದ ಹೊರಗೆ ಬಂದೆ.

ಅಲ್ಲಿ ಹೊರಗಡೆ ನನ್ನ ಕರೆದುಕೊಂಡು ಹೋಗೋಕೆ ನನ್ನ ಆಪ್ತ ಕೆಲಸದ ಹುಡುಗ ಸಾಬೀರ್ ನಿತ್ಕೊಂಡಿದ್ದ.. ನಾ ಅವನ ಗಾಡಿ ಏರಿದೆ….ಕಿಕ್ ಹೊಡೆದು ಬೈಕಿಂದ ನನ್ನ ಮನೆಗೆ ಡ್ರಾಪ್ ಮಾಡಿದ. ಆಗ ಬೆಳಿಗ್ಗೆ 6 ಘಂಟೆಆಗಿತ್ತು….. ಸರಿ ಸರ್ ಬರ್ತೀನಿ ಅಂತ ಹೋದ.

ಅವನು ಒಳಗೆ ಬಂದಿದ್ದ ಸಿಟ್ಟಿನಿಂದ, ನಾ ಮನೆಗೆ ವಾಪಾಸ್ ಬಂದ ಖುಷಿಯಿಂದ ನಮ್ಮ ಜೋಡಿ ಡಾಗ್ಸ್ ಬೌ ಬೌ ಅಂತ ಮಿಕ್ಸ್ ಆಗಿ ಎಕ್ಸ್‌ಪ್ರೆಶನ ಕೊಟ್ಟವು. ಅವುಗಳ ತಲೆ ಸವರಿ ಮನೆ ಒಳಗೆ ಹೋದೆ. ಬ್ಯಾಗ್‌ಇಟ್ಟೆ, ಬಟ್ಟೆ ಬದಲಾಯಿಸಿ, ಮುಖ ತೊಳೆದು ಫ್ರೆಶ್ ಆಗಿ ಸ್ವಲ್ಪ ಹಾಗೆ ಬೆಡ್ ಮೇಲೆ ಒರಕೊಂಡೆ.

ಆಗ ನೆನಪಾಗಿದ್ದು…… ಸ್ಪೆಕ್ಸ್…, ಚಷ್ಮಾ. ಕನ್ನಡಕ…!!!! ಅಯ್ಯೋ ಅನ್ಕೊಂಡು ಹುಡುಕಿದೆ… ಜೇಬು, ಬ್ಯಾಗೂ, ಕೆಳಗೆ ಏನಾದ್ರೂ ಬಿಟ್ಟಿದಿನ ಹೇಗೆ ಅಂತ.. ಉಹೂ..ಎಲ್ಲಿ ಬಿಟ್ಟೆ?… ಓಹ್ ಶಿ…………..ಟ್

ಟ್ರೈನ್ ನಲ್ಲೆ ದೊಡ್ಡದಾಗಿ ಏನೋ ನೆನಪು ಮಾಡ್ಕೊಂಡು ತೊಗೊಂಡು ಬರ್ತೀನಿ ಅಂತ ನೇತು ಬಿಟ್ಟುಅಲ್ಲೇ ಮರೆತು ಬಿಟ್ಟೆ…! ಅಂತ ಅನ್ಕೊಂಡೆ..

ಸಕತ್ ಬೇಜಾರಾಯ್ತು… ಎನ್ ಮಾಡ್ಲಿ…? ಅಷ್ಟೇ ಬಿಡು ಹೋದಮೇಲೆ ಇನ್ನೇನು..ಇನ್ನುಎರಡು ಲೆನ್ಸ್‌ಕಾರ್ಟ್ ಸ್ಪೆಕ್ಸ್ ಇವೆ.. ನೋ ಪ್ರಾಬ್ಲಮ್‌ಅನ್ಕೊಂಡೆ.

ಆದರೂ ಒಳ ಮನಸ್ಸು ಬೇಜಾರು..

ಸ್ವಲ್ಪ ತಡಕಾಡಿದೆ… ಸುಮ್ಮನಾಗಿಬಿಟ್ಟೆ.

ಆಗ ನೆನಪಾಗಿದ್ದು ಮತ್ತದೇ ಸಾಬೀರ್ ಮತ್ತು ಒಂದು ಪ್ರಳಯಾಂತಕ ಐಡಿಯಾ…!!" .. ಫೋನ್ ಮಾಡಿದೆ..ಆತ ಮಲಗಿದ್ದ… ಆದ್ರೂ ಫೋನ್‌ಎತ್ತಿದ..

ಬೋಲೋ ಸರ್‌ಅಂದ.. ಸಮಯ 6.30 ಬೆಳಿಗ್ಗೆ..

ನಾನು : ಏನಿಲ್ಲ… ನಾ ಟ್ರೈನ್ ನಿಂದ ಇಳಿಯೋವಾಗ ನನ್ನ ಸ್ಪೆಕ್ಸ್‌ಅಲ್ಲೇಟ್ರೈನ್ ನಲ್ಲೆ ಬಿಟ್ ಬಿಟ್ಟೆ..

ಸಾಬೀರ್ : ಹೋ ಕ್ಯಾ ಸರ್… ಅಬ್‌ಕ್ಯಾಕರ್ನಾ ಸರ್..?

ನಾನು (ಗೂಗಲ್ ನಲ್ಲಿಟ್ರೈನ್ ಲೈವ್ ಸ್ಟೇಟಸ್ ಚೆಕ್ ಮಾಡಿ ): ಟ್ರೈನ್ ಹೊಸಪೇಟೆಗೆ 7 ಘಂಟೆಗೆ ಹೋಗುತ್ತೆ.. ನಿಂಗೆ ಯಾರಾದ್ರೂ ಹೊಸಪೇಟೆಲಿ ಗೊತ್ತಾ..?

ಸಾಬೀರ್ : ಟ್ರೈಕರ್ತು ಸರ್, ಕ್ಯಾಕರ್ನಾ ಸರ್.. ಏನು ಮಾಡಬೇಕು ಸರ್‌ಅಂದ..

ನಾನು : ಏನಿಲ್ಲ ಟ್ರೈನ್ ಹೊಸಪೇಟೆಗೆ ಬರೋದ್ರಲ್ಲಿ ಅವ್ರು ಅಲ್ಲಿ ಹೋಗಿ, ನನ್ನ ಬೋಗಿ ಮತ್ತು ಸೀಟ್ ನಂಬರ್, ಸ್ಪೆಕ್ಸ್ ನೇತಾಡ್ತಿರೋ ಜಾಗ ಎಲ್ಲ ಡೀಟೇಲ್ಸ್ ಇಂಚಿಂಚು ಹೇಳಿದೆ ಮತ್ತು ಸ್ಪೆಕ್ಸ್ ಇದ್ರೆ ನೋಡಿ ಅದನ್ನ ತರೋಕ್ಕೆ ಆಗುತ್ತಾ ಅಂತ ಕೇಳಿದೆ ?

ಆತ ಸ್ವಲ್ಪ ಶಾಕ್‌ಅದ...

ಯಾರಿಗೊ ಕಾಲ್ ಮಾಡಿ ಟ್ರೈ ಮಾಡಿದ ಯಾರು ಸಿಗ್ಲಿಲ್ಲ..ಮತ್ತೇ ನನಗೆ ಕಾಲ್ ಮಾಡಿಯಾರು ಸಿಗ್ಲಿಲ್ಲ ಸರ್‌ಅಂದ.. ಸಮಯ 6.40.. ಬೆಳಿಗ್ಗೆ..

ನಾನು ಛೇ ಹೋಗಲಿ ಬಿಡು ಅಂದ್ಕೊಂಡು.. ನಮ್ಮ ಆಸ್ಪತ್ರೇಲಿ ಮುನೀರ್ ಅಂತ ಇನ್ನೊಬ್ಬ ಕೆಲಸ ಮಾಡೋನು ನೆನಪಾದ..ಅದೆಂಗೂ ಗೊತ್ತಿಲ್ಲ ಸಮಯ ಪ್ರಜ್ಞೆ ಅನ್ಸುತ್ತೆ... ಆತನಿಗೆ ಹೊಸಪೇಟೆಯಲ್ಲಿ ಮೂಲೆ ಮೂಲೆಯಲ್ಲೂ ಸಂಬಂಧಿಕರು..



ಕಾಲ್ ಮಾಡಿದೆ...

ಮುನೀರ್ : ಬೋಲೋ ಸರ್..

ಸಾಬೀರ್ ಗೆ ಹೇಳಿದ ಅದೇ ಡೀಟೇಲ್ಸ್ ಅವನಿಗೂ ಹೇಳಿದೆ..ಆತ ಏಕ್ ಮಿನಿಟ್ ಸರ್‌ಅಂತ ಫೋನ್‌ಕಟ್ ಮಾಡಿದ...

ನಾನು ಆಯ್ತು ಬಿಡು ಏನೋ ಹುಚ್ಚುತನ, ಹುಚ್ಚು ಸಾಹಸ ಮಾಡಿದೆ ಹೋಯ್ತು ಬಿಡು ಸ್ಪೆಕ್ಸ್... ಅದೇನು ರೇಬ್ಯಾನ್‌ಅಲ್ಲ... ರೇ ಬ್ಯಾನ್‌ಇದ್ರು ಸೆಕೆಂಡ್ಸ್‌ಅಲ್ಲಿ ಹೋಯ್ತು ಬಿಡು ಅನ್ಕೋಳೋದು ತಪ್ಪಿರಲಿಲ್ಲ... ಆದ್ರೂ ಏನೋ ಬೇಜಾರು, ಪ್ರಥಮಚಷ್ಮಾ ಸಿಕ್ರೆ ಒಳ್ಳೇದು ಅನ್ಕೊಂಡೆ .ಅವ್ರಿಗೆ ಇವ್ರಿಗೆ ಕಾಲ್ ಮಾಡಿ ಏನೇನೋ ಮಾಡಿದೆ ..ಕೊನೆಗೂ ಐ ಲಾಸ್ಟ್‌ಇಟ್‌ಅನ್ಕೊಂಡೆ...

ಸಮಯ... 7.05 ಬೆಳಿಗ್ಗೆ..

ಕಾಲ್ ಬಂತು...

ಬೋಲೋ ಮುನೀರ್‌ಅಂದೇ

“ಆಪಕಾ ಚಷ್ಮಾ ಮಿಲಾ ಸರ್ ಮೇರೇ ಭಾಯಿಜಾಕೆ ಲೇಕೆ ಆಯಾ.... ಸಾಯಂಕಾಲ ಬಳ್ಳಾರಿಗೆ ಬರ್ತಿದಾನೆ ತರ್ತಾ ಇದಾನೆ ಅಂದ” ...

ಒಹ್ ಹೌದಅನ್ಕೊಂಡುಎಲ್ರಿಗೂ ಹೃದಯದಿಂದ ಧನ್ಯವಾದಗಳನ್ನ ಹೇಳಿದೆ

ನನಗೆ ಒಂಥರಾ ಶಾಕ್‌ಆಯ್ತು, ಮಿರಾಕಲ್‌ಅನ್ನಿಸ್ತು, ವಿಚಿತ್ರ ಅನ್ನಿಸ್ತು, ಖುಷಿ ಆಯ್ತು, ಸರ್ಪ್ರೈಸ ಅನ್ನಿಸ್ತು... ಟ್ರೈ ಮಾಡಿದ್ದು ಹೀಗೂ ವರ್ಕ್‌ಔಟ್‌ಆಗುತ್ತಾ ಅನ್ಕೊಂಡು ಖುಷಿ ಆಯ್ತು...

ಕೊನೆಗೆ ಅನ್ನಿಸಿದ್ದು ...

“ನಮ್ಮದು ಅನ್ನೋ ವಸ್ತು ನಮ್ಮ ಋಣ ಇರೋವರೆಗೂ ನಾವು ಪ್ರೀತಿಸೋ ವಸ್ತು ಕಳಕೊಂಡ್ರು... ನಾವು ವಿಶ್ವಾಸ, ಛಲ, ಸಮಯಪ್ರಜ್ಞೆಇಟ್ಟು ಹುಡುಕಿದ್ರೆ , ಬೆನ್ನು ಹತ್ತಿದ್ರೆ ನಮ್ಮ ವಸ್ತು ನಮ್ಮ ಹತ್ರ ಮತ್ತೇ ವಾಪಾಸ್ ಬಂದೇ ಬರುತ್ತೆ ನಮಗೆ ಸಿಕ್ಕೇ ಸಿಗುತ್ತೆ” ಅಂತ.

ನಾವು ಋಣಾತ್ಮಕವಾಗಿ, ನೆಗೆಟಿವ್ ಮೈಂಡ್‌ಇಟ್ಕೊಂಡುಎಲ್ಲ ಹೋಯ್ತು ಬಿಡು ಏನೂ ಆಗಲ್ಲ ಅಂತ ಕೈ ಚೆಲ್ಲಿ ಕುಳಿತುಕೊಂಡ್ರೆ, ನಾವು ಏನೇ ತಿಪ್ಪರಾಲಾಗ ಹಾಕಿದ್ರು , ನಮ್ಮ ಋಣ ಇಲ್ಲ ಅಂದ್ರೆ ಏನೂ ಸಿಗದೇ ನಮ್ಮ ಕೈ ತಪ್ಪಿ ಹೋಗೋದು ಗ್ಯಾರಂಟಿ..ಅಂತ .

ಆಗ ...ಆರ್‌ಎನ್‌ಜಯಗೋಪಾಲ್ ಬರೆದ , #ಅಣ್ಣಾವ್ರ #ಬಂಗಾರದಮನುಷ್ಯಚಿತ್ರದ ಹಾಡು ನೆನಪಾಯ್ತು... “ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದು, ಮನಸೊಂದ ಇದ್ದರೆ ಮಾರ್ಗವು ಉಂಟು ಕೆಚ್ಚೆದೆ ಇರಬೇಕು ಎಂದು”

ಸಾಯಂಕಾಲ ಪ್ಲಾಸ್ಟಿಕ್ ಕವರ್ ನಲ್ಲಿ ಸುತ್ತಿದ ಚಷ್ಮಾ ಮುನೀರ್ ಮಗ ತಂದುಕೊಟ್ಟ... ಥ್ಯಾಂಕ್ಸ್ ಹೇಳಿದೆ..

ಅದೇ ಸ್ಪೆಕ್ಸ್ ಹಾಕ್ಕೊಂಡು ಈ ಪುಟ್ಟ ಅನುಭವದ ಕಥೆ ಬರೆದೆ... ಒಂದು ಚಷ್ಮಾ ಕಥೆ!



ವ್ಯಕ್ತಿ ವಿಷಯ

# ಡಾ ಸಿ ಆರ್ ಚಂದ್ರಶೇಖರ್

**ಡಾ ದಿವ್ಯಾ ಕೆ ಎನ್**
ಸಹ ಪ್ರಾಧ್ಯಾಪಕರು, ರೋಗ ಲಕ್ಷಣ ಶಾಸ್ತ್ರ ವಿಭಾಗ, ವಿಮ್ಸ್,
ಬಳ್ಳಾರಿ ವಿಭಾಗೀಯ ಸಂಪಾದಕರು ಮತ್ತು ಲೇಖಕರು, ಬಳ್ಳಾರಿ

ಡಾ ಸಿ ಆರ್ ಚಂದ್ರಶೇಖರ್ ಅವರದು ಮನೋವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಹೆಸರು. ಮಾನಸಿಕ ಆರೋಗ್ಯದ ಬಗೆಗೆ ಅಪಾರವಾದ ಜ್ಞಾನವನ್ನು ಸಂಪಾದಿಸಿರುವ ಇವರು, ಸಮಾಜಮುಖಿ ದೋರಣೆಯನ್ನು ಹೊಂದಿದ್ದಾರೆ. ಮಾನಸಿಕ ಆರೋಗ್ಯದ ಬಗೆಗೆ ಸಮಾಜದಲ್ಲಿರುವ ಅಜ್ಞಾನವನ್ನು ಅಳಿಸಲು ಸತತವಾಗಿ ಆರೋಗ್ಯದ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಜಟಿಲ ವಿಷಯವನ್ನು ಸರಳವಾಗಿ, ಸ್ಪಷ್ಟವಾಗಿ, ಆತ್ಮೀಯತೆಯಿಂದ ಜನರಿಗೆ ತಿಳಿಸುವುದರಲ್ಲಿ ಇವರು ಸಿದ್ಧ ಹಸ್ತರು. ಮಾನಸಿಕ ಸಮಸ್ಯೆಗಳ ಕುರಿತು ಅನೇಕ ಪುಸ್ತಕಗಳನ್ನೂ, ಪತ್ರಿಕೆಯಲ್ಲಿ ಲೇಖನಗಳನ್ನೂ ಬರೆದಿದ್ದಾರೆ.

1948ರಲ್ಲಿ ಚನ್ನಪಟ್ಟಣದಲ್ಲಿ ಜನಿಸಿದ ಇವರ ತಂದೆ ರಾಜಣ್ಣಾಚಾರ್, ತಾಯಿ ಸರೋಜಮ್ಮ. ಕಲಿಕೆಯಲ್ಲಿ ಮುಂದಿದ್ದ ಇವರು ಬೆಂಗಳೂರು ವೈದ್ಯಕೀಯ ಕಾಲೇಜಿನಿಂದ ಎಂ ಬಿ ಬಿ ಎಸ್ ಪದವಿಯನ್ನೂ, ನಿಮ್ಹಾನ್ಸ್‌ನಿಂದ ಮನೋವೈದ್ಯ ಶಾಸ್ತ್ರದ ಎಂ ಡಿ ಪದವಿಯನ್ನೂ ಪಡೆದರು. 45 ವರ್ಷಕ್ಕೂ ಹೆಚ್ಚು ಕಾಲ ವೈದ್ಯರಾಗಿ ಸೇವೆ ಸಲ್ಲಿಸಿದ್ದೇ ಅಲ್ಲದೇ, ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನೂ ನೀಡಿದ್ದಾರೆ. ಕಾಲೇಜಿನಲ್ಲಿದ್ದಾಗಲೇ ಕವನ, ಲೇಖನಗಳನ್ನು ಬರೆಯುತ್ತಿದ್ದ ಇವರ ಸಾಹಿತ್ಯ ಸೇವೆ ನಿರಂತರವಾಗಿ ಮುಂದುವರೆದಿದೆ.



ಡಾ ಚಂದ್ರಶೇಖರ್ ಅವರು ಮನೋರೋಗದ ಬಗೆಗಿನ ತಪ್ಪು ಕಲ್ಪನೆಗಳನ್ನು ನಿವಾರಿಸಲು, ಮೂಢನಂಬಿಕೆಗಳನ್ನು

ಹೋಗಲಾಡಿಸಲು ಮತ್ತು ಸಮಾಜದ ಮಾನಸಿಕ ಆರೋಗ್ಯದ ಕಾಳಜಿ ಮಾಡಲು ಅನೇಕ ಕೃತಿಗಳನ್ನೂ, ಉಪನ್ಯಾಸಗಳನ್ನೂ, ಮಾರ್ಗದರ್ಶನ ಶಿಬಿರಗಳನ್ನೂ ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ಉಚಿತ ಮಾನಸಿಕ ಆರೋಗ್ಯ ತಪಾಸಣೆ, ಉಚಿತ ವೈದ್ಯಕೀಯ ತಪಾಸಣೆ ನೀಡುವ ಬೆಂಗಳೂರಿನ ಇವರ ಕೇಂದ್ರದ ಹೆಸರು ಸಮಾಧಾನ. ಇಲ್ಲಿ ಯಾವುದೇ ಶುಲ್ಕವೂ ಇಲ್ಲದೇ ತಪಾಸಣೆ ನಡೆಯುತ್ತವೆ. ಇವರ ಸ್ವಯಂಸೇವಕರ ಪಡೆ ಇಲ್ಲಿ ಒಂದು ಆಪ್ತ ವಾತಾವರಣವನ್ನು ನಿರ್ಮಿಸಿದೆ. ಪ್ರಸನ್ನ ಆಪ್ತ ಸಲಹಾಕೇಂದ್ರದ ಮೂಲಕವೂ ಆರೋಗ್ಯ ಸೇವೆಯಲ್ಲಿ ನಿರತರಾಗಿದ್ದಾರೆ.



ಇವರು ಬರೆದ ಕೃತಿಗಳನ್ನು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯದ ಪ್ರಸಾರಾಂಗಗಳೂ, ಪುಸ್ತಕ ಪ್ರಾಧಿಕಾರಗಳೂ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಎಲ್ಲಾ ಪ್ರಮುಖ ಪ್ರಕಟಣಾ ಸಂಸ್ಥೆಗಳೂ ಪ್ರಕಟಿಸುತ್ತಾ ಬಂದಿವೆ. ಇವರ ಲೇಖನಿಯಿಂದ 200ಕ್ಕೂ ಹೆಚ್ಚು ಕೃತಿಗಳು ಮೂಡಿಬಂದಿವೆ. ಮರು ಮುದ್ರಣಗಳನ್ನೂ ಕಂಡಿವೆ. ಮಗು ಮನಸ್ಸು ಮತ್ತು ಆರೋಗ್ಯ, ಹದಿ ವಯಸ್ಸು, ಅಸ್ವಸ್ಥ ಮನಸ್ಸು, ನಿಮ್ಮ ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ, ಮೊದಲಾದ ಮಾನಸಿಕ ಆರೋಗ್ಯದ ಪುಸ್ತಕಗಳನ್ನೂ, ಪ್ರಥಮ ಚಿಕಿತ್ಸೆ, ಜನಾರೋಗ್ಯ ಮೊದಲಾದ ಆರೋಗ್ಯದ ಪುಸ್ತಕಗಳನ್ನೂ, ಮನೆ ಮನಸ್ಸು, ನೀಲಿತಾರೆ, ಎರಡನೇ ಹೆಂಡತಿ ಮೊದಲಾದ ಕಾದಂಬರಿಗಳನ್ನೂ, ಅನುವಾದ ಕೃತಿಗಳನ್ನೂ, ನಾಟಕಗಳನ್ನೂ ರಚಿಸಿದ್ದಾರೆ. ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ, ಸುಧಾ, ತರಂಗ, ಕರ್ಮವೀರ ಮೊದಲಾದ ಪತ್ರಿಕೆಗಳೇ ಅಲ್ಲದೆ, ಇಂಗ್ಲಿಷ್ ಪತ್ರಿಕೆಗಳಲ್ಲೂ ಸಹಸ್ರಾರು ಲೇಖನಗಳು ಪ್ರಕಟವಾಗಿವೆ. ವೈದ್ಯಕೀಯ ಅಂಕಣ ಬರಹಗಳೂ, ಪ್ರಶ್ನೆ ಉತ್ತರಗಳೂ ಮುದ್ರಿತವಾಗಿವೆ.

ಇವರು ಸಮುದಾಯದ ಆರೋಗ್ಯ ಹಾಗು ಮಾನಸಿಕ ಆರೋಗ್ಯ ನಿರ್ವಹಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಭಯ, ಮೌಢ್ಯ, ಭಾನಾಮತಿಗಳನ್ನು ಬೀದರ್, ಗುಲಬರ್ಗಾ ಜಿಲ್ಲೆಯಲ್ಲಿ ಅಧ್ಯಯನ ಮಾಡಿ ಪರಿಹಾರ ಸೂಚಿಸಿದ್ದಾರೆ. ಭಾರತದ ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದ ರೂಪರೇಷೆ ತಯಾರಿಕೆ, ಮನೋವೈದ್ಯರಿಗೆ, ವೈದ್ಯೇತರ ಸಿಬ್ಬಂದಿಗಳಿಗೆ, ರೋಗಿಗಳ ಆರೈಕೆಯ ಬಗ್ಗೆ ತರಬೇತಿ, ಮಾನಸಿಕ ಒತ್ತಡ ನಿರ್ವಹಣೆ, ಮಾನಸಿಕ ಆರೋಗ್ಯ ವರ್ಧನೆಯ ಬಗ್ಗೆ ತರಬೇತಿ. ಇವರು ನಡೆಸುತ್ತಿರುವ ಕಾರ್ಯಕ್ರಮಗಳು ಅಪಾರ.

ಇವರು ಭಾರತೀಯ ಮನೋವೈದ್ಯ ಸಂಘದ ಫೆಲೋಆಗಿ, ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿಗಳಾಗಿ, ಕನ್ನಡ ವೈದ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಲವಾರು ವೈದ್ಯಕೀಯ ಪತ್ರಿಕೆ, ವ್ಯಕ್ತಿ ವಿಕಸನ ಪತ್ರಿಕೆ, ವಿಜ್ಞಾನ ಪತ್ರಿಕೆಗಳ ಗೌರವ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ.

ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ಗೌರವ ಪ್ರಶಸ್ತಿ, ಡಾ ಬಿ. ಸಿ. ರಾಯ್ ಪ್ರಶಸ್ತಿ, ಕರ್ನಾಟಕ ಚೇತನ ಪ್ರಶಸ್ತಿ, ಡಾ ಪಿ. ಎಸ್. ಶಂಕರ್ ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಕುವೆಂಪು ವೈದ್ಯ ಸಾಹಿತ್ಯ ಪ್ರಶಸ್ತಿ, ಸರ್ ಎಂ ವಿಶ್ವೇಶ್ವರಯ್ಯ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಮಾನವ ರತ್ನ ಪ್ರಶಸ್ತಿ ಮುಂತಾದ ಅನೇಕ ಪುರಸ್ಕಾರಗಳು ದೊರೆತಿವೆ. ಇತ್ತೀಚೆಗೆ ಕರ್ನಾಟಕ ಸರಕಾರದಿಂದ ಕೊಡಮಾಡಿದ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಿಂದ ಈ ಸಾಲಿನ 'ಅರಿವೇ ಗುರು' ಪ್ರಶಸ್ತಿಗೂ ಇವರು ಭಾಜನರಾಗಿದ್ದಾರೆ. ಇವರು ಸಾಮಾಜಿಕ ಸೇವಾತ್ಪರತೆ, ಸಹೃದಯತೆ, ನಯ, ವಿನಯ, ಅಪಾರ ಪಾಂಡಿತ್ಯಗಳಿಂದ ಕೂಡಿದ ಮೇರು ವ್ಯಕ್ತಿತ್ವದ ಮಾನವತಾವಾದಿ.



**2022ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ**
**ಡಾ ಎಚ್ ಎಸ್ ಮೋಹನ್**
**ಅವರಿಗೆ ಹಾರ್ದಿಕ ಅಭಿನಂದನೆಗಳು.**



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

## ವೈದ್ಯ ಲೋಕದ ವಿಸ್ಮಯಗಳು...

# ಅಂಗರಚನ ವಿಜ್ಞಾನದ ಒಂದು ವಿಹಂಗಮ ನೋಟ

ಆಧುನಿಕ ವೈದ್ಯಕೀಯದ ಅಡಿಗಲ್ಲು ಅಂಗರಚನ ವಿಜ್ಞಾನ ಹಾಗೂ ಅಂಗಕ್ರಿಯಾ ವಿಜ್ಞಾನ. ಇವೆರಡು ಬೆಳೆದುಬಂದ ಪರಿ, ನಿಜಕ್ಕೂ ರೋಚಕವಾಗಿದೆ. ಅಂಗರಚನ ವಿಜ್ಞಾನವು ಬೆಳೆದುಬಂದ ಹಾದಿಯ ಬಗ್ಗೆ ಒಂದು ಪಕ್ಷಿನೋಟವನ್ನು ಹರಿಸೋಣ.

ಕ್ರಿ.ಪೂ.15,000ವರ್ಷಗಳಷ್ಟು ಹಿಂದೆ ರಚನೆಯಾದ ಒಂದು ಗುಹಾ ಚಿತ್ರವು ಸ್ಪೇನ್ ದೇಶದ ಎಲ್ ಪಿಂಡಾಲ್ ಗುಹೆಯಲ್ಲಿದೆ. ಇದು ಉಣ್ಣೆಯ ಬೃಹದ್ಗಜಕ್ಕೆ (ವೂಲಿ ಮ್ಯಾಮತ್) ಸಂಬಂಧಿಸಿದ ಚಿತ್ರ. ಆ ಚಿತ್ರದಲ್ಲಿರುವ ಗಜದಲ್ಲಿ, ಹೃದಯವಿರಬೇಕಾದ ಸ್ಥಳದಲ್ಲಿ ಒಂದು ಎಲೆಯ ಆಕಾರದ ದಟ್ಟವರ್ಣದ ರಚನೆಯಿದೆ. ಇದನ್ನು ನೋಡುತ್ತಿದ್ದರೆ, ಬಹುಶಃ ಇದು ನಮ್ಮ ಪೂರ್ವಜರು ಚಿತ್ರಿಸಿದ 'ಮೊದಲ ಹೃದಯದ ಚಿತ್ರವಿರಬಹುದು' ಎನ್ನುವ ಅನುಮಾನವು ನಮ್ಮನ್ನು ಕಾಡುತ್ತದೆ.






ನಮ್ಮ ಪೂರ್ವಜರು ಪ್ರಾಣಿಗಳ ಜೊತೆಯಲ್ಲಿ ಬೇಟೆಯನ್ನಾಡುವಾಗ ಇಲ್ಲವೇ ಶತ್ರುಗಳ ದೊಣ್ಣೆಯ ಹೊಡೆತಕ್ಕೆ ಇಲ್ಲವೇ ಭರ್ಜಿಯ ತಿವಿತಕ್ಕೆ, ಅವರ ತಲೆಗೆ ಪೆಟ್ಟಾಗಿ ಕಪಾಲದ ಒಳಗೆ ರಕ್ತಸ್ರಾವವಾಗಿ, ಹೆಪ್ಪುಗಟ್ಟಿ, ಮಿದುಳಿನ ಮೇಲೆ ತೀವ್ರ ಸ್ವರೂಪದ ಒತ್ತಡವನ್ನು ಹಾಕಿರಬಹುದು. ಇಂತಹ ಒತ್ತಡವನ್ನು ಕಪಾಲ ರಂಧ್ರನದ (ಟ್ರೆಪ್ಯಾನಿಂಗ್) ಮೂಲಕ ನಿವಾರಿಸುತ್ತಿದ್ದರೆನ್ನುವ ವಿಚಾರ ನಿಜಕ್ಕೂ ಬೆರಗುಗೊಳಿಸುವಂತಿದೆ. ಕಪಾಲರಂಧ್ರನಗಳು ಯೂರೋಪ್, ಏಷ್ಯಾ, ಆಫ್ರಿಕ, ಆಸ್ಟ್ರೇಲಿಯ ಮುಂತಾದ ಕಡೆ ವಾಸಮಾಡುತ್ತಿದ್ದ ನಮ್ಮ ಪೂರ್ವಜರ ತಲೆಬುರುಡೆಗಳಲ್ಲಿ ಕಂಡುಬರುತ್ತಿರುವುದು ನಿಜಕ್ಕೂ ಚೋದ್ಯವೇ ಸರಿ. ನಮ್ಮ ಕಾಶ್ಮೀರದ ಬುರ್ಜಹೋಮ್ ಸಂಸ್ಕೃತಿಗೆ ಸೇರಿದ ಕೆಲವು ಗುಹೆಗಳಲ್ಲೂ ಕಪಾಲರಂಧ್ರನವಿರುವ ತಲೆಬುರುಡೆಗಳು ದೊರೆತಿವೆ.

ಪ್ರಾಚೀನ ಈಜಿಪ್ಷಿಯನ್ನರು (ಕ್ರಿ.ಪೂ.3150–ಕ್ರಿ.ಪೂ.332) ಬಹುಶಃ ಮಾನವ ಅಂಗರಚನೆಯನ್ನು ವಿಷದವಾಗಿ ಅಧ್ಯಯನ ಮಾಡಲೆತ್ನಿಸಿದ ಮೊದಲಿಗರೆನ್ನಬಹುದು. ಪುನರ್ಜನ್ಮದಲ್ಲಿ ನಂಬಿಕೆಯಿದ್ದ ಈಜಿಪ್ಷಿಯನ್ನು ಶವಸಂರಕ್ಷಣೆಯನ್ನು ಆಸಕ್ತಿ ವಹಿಸಿದರು. ಮೂಗಿನ ಹೊರಳೆಗಳ ಒಳಗೆ ಒಂದು ಲೋಹದ ಕೊಕ್ಕೆಯನ್ನು ಹಾಕಿ, ಮಿದುಳನ್ನು ಹೆರೆದು ಹೊರತೆಗೆಯುತ್ತಿದ್ದರು.



ಹಾಗಾಗಿ ಗ್ಯಾಲನ್ನನಿಗೆ ಮನುಷ್ಯನ ಶರೀರವನ್ನು ಸ್ವಯಂ ಛೇದಿಸುವ ಅವಕಾಶವೇ ದೊರೆಯಲಿಲ್ಲ. ಅವನು ಬಾರ್ಬರಿ ಮಂಗಗಳ ಶರೀರವನ್ನು ಛೇದಿಸಿ, ಅಧ್ಯಯನ ಮಾಡಿ, ಅದೇ ಫಲಿತಾಂಶವನ್ನು ಅವನು ಮನುಷ್ಯರ ಶರೀರಕ್ಕೆ ಆರೋಪಿಸಿದ. ಇದೇ ಅವನ ಅಧ್ಯಯನದಲ್ಲಿದ್ದ ಪ್ರಧಾನ ದೋಷ. ಆದರೂ ಕೆಲವು ದಿಟ್ಟ ಪ್ರಯೋಗಗಳನ್ನು ಸಾರ್ವಜನಿಕವಾಗಿ ನಡೆಸಿದ. ಹಂದಿಯನ್ನು ಜೀವಂತವಾಗಿ ಛೇದಿಸಿ, ಅದರ ಮರುಕಳಿಸುವ ಗಂಟಲುಪೆಟ್ಟಿಗೆ ನರವನ್ನು (ರಿಕರೆಂಟ್ ಲೆರಂಜಿಯಲ್ ನರ್ವ್) ಬಿಗಿಯಾಗಿ ಕಟ್ಟಿದ. ಜೋರಾಗಿ ಅರಚುತ್ತಿದ್ದ ಹಂದಿಯ ಧ್ವನಿಯು ಇದ್ದಕ್ಕಿದ್ದ ಹಾಗೆ ಕೇಳದಾಯಿತು. ಹಂದಿ ಕಿರುಚುತ್ತಿದ್ದರೂ ಅದರ ಧ್ವನಿಯು ಮಾತ್ರ ಕೇಳುತ್ತಿರಲಿಲ್ಲ. ಈತನು ಬೆನ್ನುಮೂಳೆ, ಮಿದುಳುಬಳ್ಳಿ, ಕಾಯನರ (ಮೋಟಾರ್ ನರ್ವ್) ಸಂವೇದನಾ ನರ (ಸೆನ್ಸರಿ ನರ್ವ್) ಇತ್ಯಾದಿಗಳ ಬಗ್ಗೆ ವಿವರಣೆಯನ್ನು ನೀಡಿದ. ಗ್ಯಾಲನ್ ಮಹಾಬುದ್ಧಿವಂತನಾಗಿದ್ದರೂ ಸಹ, ಅವನು

ಉದರದ ಬಲ ಮೂಲೆಯನ್ನು ಛೇದಿಸಿ, ಅದರ ಮೂಲಕ ಉದರಾಂಗಗಳನ್ನೆಲ್ಲ ಪ್ರತ್ಯೇಕಿಸಿ, ಅವನ್ನು ಬೇರೆ ಬೇರೆ ಪಿಂಗಾಣಿ ಜಾಡಿಗಳಲ್ಲಿಡುತ್ತಿದ್ದರು. ಅವರ ಅಂಗರರಚನೆಯ ಜ್ಞಾನವು ಅವರ ವೈದ್ಯಕೀಯ ಪ್ಯಾಪಿರಸ್ ಬರಹಗಳಲ್ಲಿ, ಪಿರಮಿಡ್ ಚಿತ್ರಗಳಲ್ಲಿ ಹಾಗೂ ಶಿಲ್ಪಗಳಲ್ಲಿ ಕಂಡುಬರುತ್ತದೆ.



ಪ್ರಾಚೀನ ಗ್ರೀಕರಲ್ಲಿ (ಕ್ರಿ.ಪೂ.500–ಕ್ರಿ.ಪೂ.336) ಕ್ರೋಟಾನ್ ನಗರದಲ್ಲಿ ವಾಸವಾಗಿದ್ದ ಅಲ್ಕಮಿಯಾನ್ (ಕ್ರಿ.ಪೂ.535–?) ಮಾನವ ಶರೀರ ಛೇದನವನ್ನು ಮಾಡಿದ ಮೊದಲ ವ್ಯಕ್ತಿ ಎನ್ನಲಾಗಿದೆ. ಮನುಷ್ಯನ ಎಲ್ಲ ಬೌದ್ಧಿಕ ಚಟುವಟಿಕೆಗಳಿಗೆ ಕೇಂದ್ರ ಮಿದುಳು ಎಂದ. ಧಮನಿ (ಆರ್ಟರೀಸ್) ಮತ್ತು ಸಿರೆಗಳನ್ನು (ವೇಯ್ನ್) ಗುರುತಿಸಿ, ದಾಖಲಿಸಿದ. ಅಕ್ಷಿನರ (ಆಪ್ಟಿಕ್ ನರ್ವ್) ಮತ್ತು ಯುಸ್ಟೇಷಿಯನ್ ನಾಳವನ್ನು ದಾಖಲಿಸಿದ. ಗ್ರೀಕರ ನಂತರ ರೋಮನ್ನರ ಪೆರ್ಗಮಾನ್ ನಗರದ ಗ್ಯಾಲನ್ (ಕ್ರಿ.ಶ.129–ಕ್ರಿ.ಶ.216) ಅಂಗರಚನ ವಿಜ್ಞಾನದಲ್ಲಿ ಅಪಾರ ಸಾಧನೆಗಳನ್ನು ಮಾಡಿದ. ಗ್ರೀಕರ ಕಾಲದಲ್ಲಿ ಶವಛೇದಕ್ಕೆ ಅವಕಾಶವಿತ್ತು. ಗ್ಯಾಲನ್ನನ ಕಾಲಕ್ಕೆ ಅನುಮತಿಯಿರಲಿಲ್ಲ.

ಪ್ರಾಣಿಗಳ ಅಂಗರಚನೆಯನ್ನು ಮನುಷ್ಯರಿಗೆ ಅನ್ವಯಿಸಿದ ಕಾರಣ ಅನೇಕ ತಪ್ಪುಗಳಾದವು. ಈ ತಪ್ಪುಗಳು ಯೂರೋಪಿನ ಇಡೀ ಅಂಧಕಾರ ಯುಗದಾದ್ಯಂತ (ಕ್ರಿ.ಶ.5–ಕ್ರಿ.ಶ.14) ಮುಂದುವರೆಯಿತು.

ಇಟಲಿಯ ವೈದ್ಯ ಮೊಂಡಿನೊ ಡಿ ಲುಜ್ಜಿ (1270–

1326) ಮಾನವ ಶರೀರವನ್ನೇ ಛೇದಿಸಿ, ಅಧ್ಯಯನವನ್ನು ಮಾಡುವ ಮೊದಲಿಗನಾದ. ಇವನು 1316ರಲ್ಲಿ 'ಅನತೋಮಿಯ ಕಾರ್ಪೊರಿಸ್ ಹ್ಯೂಮನಿ' ಎಂಬ ಹೊಸ ಅಂಗರಚನ ವಿಜ್ಞಾನದ ಕೈಪಿಡಿಯನ್ನು ಬರೆದ. ಇದು ಸುಮಾರು 250 ವರ್ಷಗಳ ಕಾಲ ಪ್ರಧಾನ ಪಠ್ಯಪುಸ್ತಕವಾಗಿ ಮುಂದುವರೆಯಿತು. ಈ ಪುಸ್ತಕವು ಮಾನವ ಶರೀರವನ್ನು ಹೇಗೆ ಕ್ರಮಬದ್ಧವಾಗಿ ನಡೆಸಬೇಕು ಎನ್ನುವುದನ್ನು ವಿವರಿಸುವತ್ತ ಗಮನವನ್ನು ಹರಿಸಿತೇ ಹೊರತು, ಅಂಗರಚನ ಜ್ಞಾನದಲ್ಲಿ ಹೆಚ್ಚಿನ ಬೆಳಕನ್ನು ಚೆಲ್ಲಲಿಲ್ಲ.

ಅಂಗರಚನ ವಿಜ್ಞಾನದ ತ್ರಿಮೂರ್ತಿಗಳು ಎಂದರೆ ಬಾರ್ಥಲೊಮಿಯೊ ಯುಸ್ಟಾಷಿ (1510–1574) ಆಂಡ್ರಿಯಸ್ ವೆಸಾಲಿಯಸ್ (1514–1564) ಮತ್ತು ಗೇಬ್ರಿಯಲ್ ಫ್ಯಾಲೋಪಿಯೊ (1523–1562). ನಿಜವಾದ ಅಧ್ಯಯನವನ್ನು ಆಂಡ್ರಿಯಸ್ ವೆಸಾಲಿಯಸ್ (1514–1564) ಆರಂಭಿಸಿದ. ಇವರಲ್ಲಿ ಅದೃಷ್ಟವಂತ ವೆಸಾಲಿಯಸ್. ಈತನು 1543ರಲ್ಲಿ ಪ್ರಕಟಿಸಿದ 'ಡಿ ಹ್ಯೂಮಿನಿ ಕಾರ್ಪೊರಸ್ ಫ್ಯಾಬ್ರಿಕ' ಎಂಬ ಮಾನವ ದೇಹದ ರಚನೆಯ ಬಗ್ಗೆ ಅರ್ಥವನ್ನು ಕೊಡುವ 7 ಸಂಪುಟಗಳ ಪುಸ್ತಕವು ಜ್ಞಾನ–ವಿಜ್ಞಾನ ಲೋಕದಲ್ಲಿ ಬಹಳ ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿತು. ಈ ಸಂಪುಟಗಳಲ್ಲಿ ಗ್ಯಾಲನ್ ಮಾಡಿದ ಕೆಲವು ತಪ್ಪುಗಳು ಹೀಗಿದ್ದವು.

- ಮನುಷ್ಯನ ಹೃದಯವು ಯಾವುದೇ ಮೂಳೆಯ ಮೇಲೆ ನಿಂತಿಲ್ಲ. ಗ್ಯಾಲನ್ ಜಿಂಕೆಗಳ ಹೃದಯವನ್ನು ಅಧ್ಯಯನ ಮಾಡಿ, ಅಲ್ಲಿರುವಂತಹ ರಚನೆಯು ಮನುಷ್ಯರಲ್ಲಿ ಇದೆಯೆಂದಿದ್ದ.

- ಎದೆಮೂಳೆ ಅಥವ ಸ್ಟೆರ್ನಮ್ ಮೂರು ಭಾಗಗಳಿಂದಾದ ರಚನೆ. ವಾನರಗಳ ಎದೆಮೂಳೆಯಲ್ಲಿ ಏಳು ಭಾಗಗಳಿವೆ. ಹಾಗಾಗಿ ಮನುಷ್ಯರಲ್ಲೂ ಏಳುಮೂಳೆಗಳಿವೆ ಎನ್ನುವ ತೀರ್ಮಾನಕ್ಕೆ ಬಂದಿದ್ದ.

- ಹೃದಯದ ನಡುತಡಿಕೆಯಲ್ಲಿ ಅದೃಶ್ಯ ರಂಧ್ರಗಳಿವೆ ಎಂದಿದ್ದ. ವೆಸಾಲಿಯಸ್ ನಡುತಡಿಕೆಯಲ್ಲಿ ಯಾವುದೇ ರಂಧ್ರಗಳಿಲ್ಲದಿರುವುದನ್ನು ತೋರಿದ.

- ಹೃದಯದ ಮಹಾಸಿರೆಗಳು (ವೆನಾಕೇವ) ಯಕೃತ್ತಿನಿಂದ ಹುಟ್ಟುತ್ತವೆ ಎಂದಿದ್ದ ಗ್ಯಾಲನ್. ವಾಸ್ತವದಲ್ಲಿ ಮೇಲಿನ ಮಹಾಸಿರೆ (ಸುಪೀರಿಯರ್ ವೆನಾಕೇವ) ಹಾಗೂ ಕೆಳಗಿನ ಮಹಾಸಿರೆಯು (ಇನ್‌ಫೀರಿಯರ್ ವೆನಾಕೇವ) ಹೃದಯದ ಭಾಗಗಳು.

- ಮಹಿಳೆಯರಿಗಿಂತ ಪುರುಷರಲ್ಲಿ ಕಡಿಮೆ ಪಕ್ಕೆಲುಬುಗಳಿರುತ್ತವೆ ಎನ್ನುವುದನ್ನು ಸುಳ್ಳೆಂದು ತೋರಿದ



(ಬೈಬಲ್ಲಿನಲ್ಲಿ ಪುರುಷನ ಪಕ್ಕೆಲುಬಿನಿಂದ ಸ್ತ್ರೀಯರನ್ನು ರಚಿಸಿದ ಕಥೆಯಿದೆ)

- ಮಹಿಳೆಯರಿಗಿಂತ ಪುರುಷರಲ್ಲಿ ಹೆಚ್ಚು ಹಲ್ಲುಗಳಿರುತ್ತವೆ ಎಂದಿರುವುದನ್ನು ಸುಳ್ಳೆಂದು ನಿರೂಪಿಸಿದ. ಸ್ತ್ರೀ–ಪುರುಷರಿಬ್ಬರಲೂ ಹಲ್ಲುಗಳ ಪ್ರಮಾಣವು ಏಕರೂಪವಾಗಿರುತ್ತದೆ.

ವಿಜ್ಞಾನದಲ್ಲಿ ಕಲ್ಪನೆಗೆ ಅವಕಾಶವಿಲ್ಲ. ಒಂದು ಪ್ರಾಣಿಯ ಅಧ್ಯಯನವನ್ನು ಮತ್ತೊಂದು ಪ್ರಾಣಿಗೆ ಅನ್ವಯಿಸಲಾಗುವುದಿಲ್ಲ. ಪ್ರತಿಯೊಂದನ್ನು ಕಣ್ಣಾರೆ ಕಂಡು, ಪ್ರಮಾಣಿಸಿ ನಂಬಬೇಕು ಎನ್ನುವ ಸತ್ಯವನ್ನು ಜಗತ್ತಿಗೆ ಸಾರಿದ ಆಂಡ್ರಿಯಸ್ ವೆಸಾಲಿಯಸ್ ನಿಜಕ್ಕೂ ಅಮರನಾಗಿದ್ದಾನೆ. ಮುಂದಿನ ದಿನಗಳಲ್ಲಿ ಅನೇಕ ಅಂಗರಚನ ವಿಜ್ಞಾನಿಗಳು ಮನುಷ್ಯನ ದೇಹದ ಒಂದೊಂದು ಅಂಗವನ್ನು ವಿವರಿಸುತ್ತಾ ಹೋದರು. ಆದರೆ ಅವರಲ್ಲಿ ಯಾರೂ ಈ ವೆಸಾಲಿಯಸ್ ಮಟ್ಟವನ್ನು ಮುಟ್ಟಲಿಲ್ಲ ಎನ್ನುವುದು ಗಮನೀಯ.

## ಪದಕೋಶ:

**ಸ್ಪ್ಲಿನೋಸಿಸ್:** ತೊರಳೀಕರಣ
**ಮೆಟೋಕ್ಸೆನಿ:** ಇಜ್ಜೀವಿಬಾಳು
**ಹಿಸ್ಟೆರೊಸ್ಟೊಮ್ಯಾಟೊಕ್ಲೆಸಿಸ್:** ಗರ್ಭಗೊರಳು ಮುಚ್ಚುವಿಕೆ
**ಝೈಮೋಸಿಸ್:** ಸೋಂಕು ರೋಗ
**ದಿವಿಜ:** ದೇವತೆ



**ಡಾ ಶರಣ್ಯ ಶಶಿಧರ**
ಗೃಹ ವೈದ್ಯರು
ಶಿವಮೊಗ್ಗ ವೈದ್ಯಕೀಯ ಮಹಾ ವಿದ್ಯಾಲಯ, ಶಿವಮೊಗ್ಗ

ವಿಧ್ಯಾರ್ಥಿ ಲೋಕ

# ಸುಮನದ ಶೋಧ



**ಡಾ ಉಮಾಮಹೇಶ್ವರಿ**
ವಿಭಾಗೀಯ ಸಂಪಾದಕರು

ಎಲ್ಲೆಲ್ಲೂ ಮನಕದಡುವಂತಹ ಆರ್ತನಾದ. ಕಾಣದ ದೇವನಲ್ಲಿ ಪರಿಪರಿಯಾದ ಮೊರೆ...

ಆ ದೃಶ್ಯದಿಂದ ದೂರ ಸರಿಯಲು ಹವಣಿಸುತ್ತಿರುವಳಾಕೆ. ತನ್ನ ಕಣ್ಣು ಮತ್ತು ಕಿವಿಗಳನ್ನು ಮುಚ್ಚಲೆತ್ನಿಸಿದಾಗ ಕಂಡದ್ದು ರಕ್ತಸಿಕ್ತವಾದ ಕೈಗಳು.. ತನ್ನ ಪ್ರಿಯಮಿತ್ರನನ್ನು ಅಪಘಾತದ ಸ್ಥಳದಿಂದ ಕರೆತರುವ ಭರದಲ್ಲಾದ ಗುರುತುಗಳು. ಆದಷ್ಟು ಬೇಗ ಕರೆತರಲು ಯತ್ನಿಸಿದರೂ ಆತ ನಡುದಾರಿಯಲ್ಲಿ ಮರಣ ಹೊಂದಿದ್ದ-ಡಿಫ್ಯೂಸ್ ಆಕ್ಸಾನಲ್ ಇಂಜುರಿ.

ಈ ಒಂದು ಘಟನೆ ಸ್ವರೂಪಳ ಜೀವನದಲ್ಲಿ ನೋವನ್ನಷ್ಟೇ ಅಲ್ಲದೇ ಭಯ,ಅಪನಂಬಿಕೆ ಮೂಡಿಸಿ ಅವಳನ್ನು ಖಿನ್ನತೆಗೆ ತಳ್ಳಿತು. ಹೌದು. ತಾವೆಂದೂ ಊಹಿಸದ ಘೋರ ದುರಂತವು ತೋರಿದಾಗ ಮನಸ್ಸು ದುಃಖಕ್ಕೆ ಜಾರುತ್ತದೆ. ಕುಬ್ಲರ್ ರಾಸ್ ವಿವರಿಸುವ ಪ್ರಕಾರ ದುಃಖದ ಮಾದರಿಯ ಐದು ಹಂತಗಳಿವೆ. ಆತ್ಮೀಯರನ್ನು ಕಳೆದುಕೊಂಡವರಲ್ಲಿ,ಗಂಭೀರ ಖಾಯಿಲೆಗಳಾದ ಕ್ಯಾನ್ಸರ್, ಏಡ್ಸ್ ಗೆ ತುತ್ತಾದವರಲ್ಲಿಇದನ್ನು ಕಾಣಬಹುದು. ನೋವು, ದಿಗ್ಭ್ರಮೆಗೊಳಗಾದ ಜನರು ಅನುಭವಿಸುವ ಭಾವನೆಗಳ ಸರಣಿ ಎಂದರೆ

1. ನಿರಾಕರಣೆ – ನೈಜತೆಯನ್ನು ಅಲ್ಲಗಳೆದು ಶಾಂತತೆಯಿಂದ ನೆಲೆಸುವ ಹಪಹಪಿಕೆ.

2. ಕೋಪ – ಸತ್ಯದ ವಾಸ್ತವತೆ ಮನಗಂಡಂತೆ ಬಂದೊದಗಿದ ದುರಾದೃಷ್ಟವನ್ನು ಶಪಿಸುತ್ತಾ ದೇವರು, ವೈದ್ಯರು ಮತ್ತು ಮನೆಮಂದಿಯವರ ಮೇಲೆ ಅತಿಯಾದ ಕೋಪ ತೋರುವುದು.

3. ಚೌಕಾಶಿ – ಮುಂದೆಂದೂ ತಪ್ಪಿ ನಡೆಯುವುದಿಲ್ಲವೆಂದು ದೇವರಲ್ಲಿ ಚೌಕಾಶಿ! ವೈದ್ಯರ ಮಾತು ಕೇಳುವೆನೆಂದು, ಈ ದುರ್ಘಟನೆಯು ಸುಳ್ಳೆಂದು ತಿಳಿಸಲು ಕೇಳುವ ಪರಿ. If I could trade their life for mine... ಎಂಬುವ ನಿರ್ದಾಕ್ಷಿಣ್ಯ ಚೌಕಾಶಿ!

4. ಖಿನ್ನತೆ – ದಿನಕಳೆದಂತೆ ವಾಸ್ತವತೆ ಮನಗಂಡಂತೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಸಾಧ್ಯವಾಗಿ , ಜೀವನದ ಸಣ್ಣಸುಖಗಳನ್ನು ಅನುಭವಿಸಲಸಾಧ್ಯವಾಗಿ ಖಿನ್ನತೆಗೆ ಜಾರುವುದು.

5. ಸ್ವೀಕಾರ – ಕೊನೆಯ ಹಂತವಾದ ಇಲ್ಲಿ ತಾವು ಸಾವನ್ನು ಅಥವಾ ತಮ್ಮ ಕೈಗೆ ನಿಲುಕದ ಭವಿಷ್ಯವನ್ನು ಶಾಂತಚಿತ್ತರಾಗಿ ಸ್ವೀಕರಿಸಿ ಅದನ್ನು ತಡೆಯುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗುವುದು.

ಈ ಮಾದರಿಯನ್ನು ರಾಸ್ ರವರು ತಮ್ಮ ಪುಸ್ತಕ ಆನ್ ಡೆತ್ ಅಂಡ್ ಡೈಯಿಂಗ್‌ನಲ್ಲಿ ಪರಿಚಯಿಸಿದ್ದಾರೆ. ನಾವೆಲ್ಲರೂ ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ಈ ತರಹದ ಮನದ ಮಜಲುಗಳನ್ನು ನೋಡಿದ್ದೇವೆ.

ಹೀಗೆ ಪ್ರಿಯ ಮಿತ್ರನ ಅಗಲಿಕೆಯಿಂದ ನೊಂದು ಖಿನ್ನತೆಗೆ ಜಾರಿದ್ದ ಸ್ವರೂಪ ಕೆಲವು ದಿನಗಳ ನಂತರ ತನ್ನ ಸ್ವ ರೂಪವನ್ನು ವ್ಯಾಕುಲತೆಯ ಮೇಲೆಳೆದು ವರ್ತಮಾನವನ್ನು ಸ್ವೀಕರಿಸಿದಳು. ಈ ಕಹಿ ಘಟನೆಗಳನ್ನು ಮರೆಯಲೆತ್ನಿಸಿ ಸಾಮಾನ್ಯ ಜೀವನವನ್ನು ನಡೆಸಲಾರಂಭಿಸಿದಾಗ ಅವಳನ್ನು ಮತ್ತೊಂದು ಸಮಸ್ಯೆ ಕಾಡಲಾರಂಭಿಸಿತು. ಅದುವೇ ಆಘಾತದ ನಂತರದ ಒತ್ತಡದಿಂದಾಗುವ ಅಸ್ವಸ್ಥತೆ(ಪಿ.ಟಿ.ಎಸ್.ಡಿ).

ವ್ಯಕ್ತಿಗಳು ಯಾವುದಾದರೂ ಅಹಿತಕರ ಘಟನೆಗಳನ್ನುಅನುಭವಿಸಿದ್ದರೆ ಅಥವಾ ಅದಕ್ಕೆ ಸಾಕ್ಷಿಯಾಗಿದ್ದರೆ ಆ ನೆನಪುಗಳು ಅವರಲ್ಲಿ ನಿರಂತರ ಭಯವನ್ನು ಪ್ರಚೋದಿಸುತ್ತವೆ. ಗಂಭೀರ ಅಪಘಾತಗಳು, ನೈಸರ್ಗಿಕ ವಿಕೋಪಗಳು, ದೈಹಿಕ /ಲೈಂಗಿಕ ಹಲ್ಲೆ ಅನುಭವಿಸಿದ /ವೀಕ್ಷಿಸಿದವರಲ್ಲಿ ಆ ಕೆಟ್ಟ ನೆನಪುಗಳು ಹೆಚ್ಚಾಗಿ ಕಾಡತೊಡಗಿ ಇದೇ ತರಹದ ಘಟನೆಗಳು ಮತ್ತೆ ಮರುಕಳಿಸುವ ಭಯದಿಂದಾಗಿ ಅವರಲ್ಲಿ ಅತಿಯಾದ ಆತಂಕ ಉಂಟಾಗುತ್ತದೆ ಮತ್ತು

ದೈನಂದಿನ ಚಟುವಟಿಕೆಗಳನ್ನು ಸಹಜವಾಗಿ ನಡೆಸಲು ಅಸಾಧ್ಯವಾಗುತ್ತದೆ. ಉದಾಹರಣೆಗೆ ಅಪಘಾತದಲ್ಲಿ ಗಾಯಗೊಂಡ / ಸ್ವರೂಪಳ ಹಾಗೆ ಮಾರಕ ಅಪಘಾತವನ್ನು ಕಂಡ ವ್ಯಕ್ತಿಗಳಿಗೆ ಮೇಲಿಂದ ಮೇಲೆ ಅದರ ಚಿತ್ರಣಗಳು ಮನಸ್ಸಿನಲ್ಲಿ ಮೂಡತೊಡಗುತ್ತವೆ. ಇವು ನೈಜವಾದವು ಎಂದೆನಿಸಿ ಮತ್ತು ಈ ಕ್ಷಣದಲ್ಲಿ ಇಲ್ಲಿ ಮತ್ತೆ ಅಪಘಾತವಾಗಬಹುದೆಂದು ಭಾಸವಾಗಿ ವಾಹನವನ್ನು ಓಡಿಸಲು ಹಿಂಜರಿಕೆ, ಭಯ ಅಥವಾ ಮನೆಯಿಂದ ಹೊರಬರಲೂ ಅಂಜಿಕೆ ಉಂಟಾಗಬಹುದು.

ಈ ಮೆಲುಕುಗಳ ಸಂದರ್ಭದಲ್ಲಿ ಅತಿಯಾದ ಬೆವರುವಿಕೆ, ಹೃದಯ ಬಡಿತ ಹೆಚ್ಚಳ, ಎದೆ ನೋವು, ಉಸಿರಾಟದಲ್ಲಿ ಏರುಪೇರು, ನಿದ್ರಾಹೀನತೆ, ಅತಿಜಾಗರೂಕತೆ ಕಾಣುತ್ತದೆ. ಈ ಆಘಾತಗಳ ಕುರಿತಾಗಿ ಮಾತನಾಡಲು, ಆ ಸ್ಥಳಕ್ಕೆ ಭೇಟಿ ನೀಡಲು ಹಿಂಜರಿಯುತ್ತಾರೆ. ಮತ್ತೆ ಕೆಲವರು ಖಿನ್ನತೆಗೆ ಜಾರುತ್ತಾರೆ. ಈ ಲಕ್ಷಣಗಳು ಕನಿಷ್ಟ ನಾಲ್ಕು ವಾರಗಳ ಕಾಲ ಕಂಡುಬಂದಲ್ಲಿ ಪಿ.ಟಿ.ಎಸ್.ಡಿ ಎನ್ನಬಹುದು. ಆಘಾತವಾದ ಆರು ತಿಂಗಳುಗಳ ನಂತರ ಲಕ್ಷಣಗಳು ಕಂಡುಬಂದಲ್ಲಿ ಲೇಟ್ ಪಿ.ಟಿ.ಎಸ್.ಡಿ ಎನ್ನಬಹುದು. ಈ ಅನುಭವದ ಕೆಲವು ದಿನಗಳವರೆಗೆ ಲಕ್ಷಣಗಳು ಗೋಚರಿಸುವುದು ಸಹಜ. ದೀರ್ಘಕಾಲದವರೆಗೆ ಇವುಗಳು ಕಂಡುಬಂದಲ್ಲಿ ಮಾನಸಿಕ ತಜ್ಞರನ್ನು ಭೇಟಿಮಾಡುವುದು ಅಗತ್ಯ. ಈ ಸಮಸ್ಯೆಗೆ ಪ್ರಾಥಮಿಕವಾಗಿ ಔಷಧಿಗಳನ್ನು ನೀಡಬಹುದು ಮತ್ತು Cognitive behavioural therapy , Exposure therapy , EMDR ಚಿಕಿತ್ಸೆಗಳು ಬಹಳ ಉಪಯುಕ್ತವಾಗುತ್ತವೆ. ಮುಖ್ಯವಾಗಿ ವೈದ್ಯರೊಡನೆ, ಆತ್ಮೀಯರೊಡನೆ ಮುಕ್ತವಾಗಿ ಚರ್ಚೆ, ಸಾಕಷ್ಟು ವಿಶ್ರಾಂತಿ, ವ್ಯಾಯಾಮ ಮತ್ತು ಆರೋಗ್ಯಕರ ಆಹಾರ ಕ್ರಮಗಳನ್ನು ರೂಢಿಸಿಕೊಳ್ಳುವುದರ ಮೂಲಕ ಆತಂಕವನ್ನು ಕಡಿಮೆಗೊಳಿಸಿ  ಖಿನ್ನತೆಯಿಂದ ಹೊರಬರಬಹುದು. ಹೀಗೆ ಮನೋವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆದ ನಂತರ ಸ್ವರೂಪ, ಖಿನ್ನತೆಯು ತೊತ್ತುತನದ ಚಿಹ್ನೆಯೆಂದು ಅರ್ಥೈಸಿ ತನ್ನ ಶಾಂತ ಸ್ವರೂಪಕ್ಕೆ ಮರಳಿದರಷ್ಟೇ ಅಲ್ಲದೇ ಸಂತಸದಿಂದ ಮತ್ತು ನಿರ್ಭೀತಿಯಿಂದ ಬದುಕಲಾರಂಭಿಸಿದಳು.

ಈ ಜೀವನವೇ ಕರ್ಮಪಾಶ – ಈ ಕಷ್ಟ ಕಾರ್ಪಣ್ಯಗಳ ಉತ್ತುಂಗದಲ್ಲಿಯೂ, ದುಃಖದುಮ್ಮಾನಗಳ ನಡುವೆಯಲ್ಲಿಯೂ ನಗುನಗುತ ಬಾಳ್ ತೆರಳುವುದು ಮುಖ್ಯ. ಚಿಂತಾಕ್ರಾಂತರಾಗಿ ಚಿತೆಗೆ ಧಾವಿಸುವ ಬದಲು ಪ್ರತಿನಿತ್ಯದ ಪ್ರಕ್ಷುಬ್ಧ ಮನಸ್ಸಿಗೆ ಕಾರಣವಾದ ತೊಂದರೆಯನ್ನು ಗುರುತಿಸಿ ಪರಿಹಾರ ಕಂಡುಕೊಳ್ಳಬೇಕು. ದೈಹಿಕವಾಗ್ಯಷ್ಟೇ ಅಲ್ಲದೇ ಮಾನಸಿಕ ಪ್ರಬುದ್ಧತೆಯನ್ನು ಹೊಂದಬೇಕು. ಕದಡಿದ ಸಲಿಲವು ತಿಳಿಯಾಗುವ ಹಾಗೆ , ನಮ್ಮ ಈ ಜೀವನ ತೊಂದರೆಗಳಿಂದ ಮುಕ್ತವಾಗಿ ತಿಳಿಯಾಗುವುದೆಂಬ ನಂಬಿಕೆ ಸದಾ ಇರಲಿ .

ಮನಸ್ಸು ಮಗುವಿನ ಹಾಗೆ.ಅತೀ ಸೂಕ್ಷ್ಮ, ವಿಭಿನ್ನ, ವೈವಿಧ್ಯಮಯ ಹಾಗೆಯೇ ಚಂಚಲವೂ ಹೌದು. ಹಾಗಿದ್ದಲ್ಲಿ ಮಗುವಿನ ಮನಸ್ಸು ಇನ್ನೆಷ್ಟು ಸೂಕ್ಷ್ಮ! ನೀವೇ ಯೋಚಿಸಿ. ಸತತವಾದ ಒತ್ತಡ, ಆಘಾತ, ದೈಹಿಕ ಹಾಗೂ ಮಾನಸಿಕ ಹಲ್ಲೆಯಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಇಲ್ಲಿವೆ ಕೆಲ ಉದಾಹರಣೆಗಳು.

ಸಾಮಾನ್ಯವಾಗಿ ಒಂಬತ್ತು ತಿಂಗಳಿಂದ ಐದು ವರ್ಷದ ಮಕ್ಕಳಲ್ಲಿ ಈ ತೊಂದರೆಗಳನ್ನು ನಾವು ಗಮನಿಸಬಹುದು.

ರಿಯಾಕ್ಟೀವ್ ಅಟಾಚ್ಮೆಂಟ್ ಡಿಸಾರ್ಡರ್ (ಭಾವನಾತ್ಮಕ ಸಂಬಂಧಗಳ ಕೊರತೆ)

ಡಿಸ್ ಇನ್ ಹಿಬಿಟೆಡ್ ಸೋಷಿಯಲ್ ಎಂಗೇಜ್ಮೆಂಟ್ (ಅಪರಿಚಿತರ ಬಗ್ಗೆ ಆತಂಕವಿಲ್ಲದಿರುವುದು)

ಸೆಲೆಕ್ಟೀವ್ ಮ್ಯೂಟಿಸಂ


ಪ್ಯಾನಿಕ್/ಫೋಬಿಕ್ ಡಿಸಾರ್ಡರ್

ಸಾಮಾನ್ಯ ಹಾಗೂ ಪ್ರತ್ಯೇಕತೆಯ ಆತಂಕದ  ಸಮಸ್ಯೆ ಇತ್ಯಾದಿ.

ಮಕ್ಕಳ ವರ್ತನೆಯಲ್ಲಿ ಬದಲಾವಣೆ, ಖಿನ್ನತೆ ಕಂಡುಬಂದಲ್ಲಿ ಮನೋವೈದ್ಯರೊಂದಿಗೆ ಸಮಾಲೋಚಿಸಲು ಹಿಂಜರಿಯದೇ ಸರಿಯಾದ ಮೌಲ್ಯಮಾಪನ ಹಾಗೂ ಮಾರ್ಗದರ್ಶನ ಪಡೆಯಬೇಕು. ಟಾಕ್ ಥೆರಪಿ, ಪ್ಲೇಥೆರಪಿ, ಅರಿವಿನ ವರ್ತನೆಯ ಚಿಕಿತ್ಸೆ, ಔಷಧಿಗಳು ಹೀಗೆ ಹಲವು ಚಿಕಿತ್ಸಾ ವಿಧಾನಗಳಿವೆ.ಸರಿಯಾದ ಸಮಯದಲ್ಲಿ ಸೂಕ್ತಚಿಕಿತ್ಸೆ ಪಡೆದಲ್ಲಿ ಮಕ್ಕಳು ಸಂಪೂರ್ಣ ಗುಣಮುಖರಾಗುತ್ತಾರೆ. ಮಕ್ಕಳ ಮೃದುಮನಸ್ಸಿನಲ್ಲಿ ಹುದುಗಿರುವ ನಿರಾಶಾವಾದದ ಬೂದಿಯನ್ನು ಶೂನ್ಯಗೊಳಿಸಿ ಪ್ರೇರಣಾಪ್ರವಾದಿಯ ಹೊಳೆಯನ್ನು ಹರಿಸಬೇಕು. ಅವರ ಮನದ ಕತ್ತಲೆಯನ್ನು ದೂರ ಮಾಡಿ ಬಾಣಬಿರುಸುಗಳ ಬಣ್ಣದ ಚಿತ್ತಾರವನ್ನು ಅವರ ಮನದ ಆಗಸದಲ್ಲಿ ಬರಮಾಡುವುದು, ಅವರ ಬೌದ್ಧಿಕ ಮಾನಸಿಕ ವಿಕಸನದ ರೂವಾರಿಯಾಗುವುದು ಪೋಷಕರ ಮತ್ತು ವೈದ್ಯರ ಆದ್ಯಕರ್ತವ್ಯವೇ ಸರಿ.

ಹೀಗೆ ಮಲಯದಂತೆ ಮುಂದೆ ನಿಂತು, ಮರುಗುವಂತೆ ಮಾಡುವ ಮೂಲ ಸಮಸ್ಯೆಯನ್ನು ಹುಡುಕಿ, ಮಾವುತ ಆನೆಯನ್ನು ಪಳಗಿಸುವ ರೀತಿಯಲ್ಲಿ ಪಳಗಿಸಿ, ಮನೋಸ್ಥೈರ್ಯದಿಂದ ಮುನ್ನುಗ್ಗಿ ಮನೋಹರವಾದ ಜೀವನವನ್ನು ನಡೆಸೋಣ.

ನಂಬಿಕೆಯಿರಲಿ ಸದಾ.



**ಶ್ರೀವತ್ಸ ದೇಸಾಯಿ**
ಡೋಂಕಾಸ್ಟರ್, ಯು ಕೆ.

ಅನಿವಾಸಿ ಲೋಕ

# ಕಣ್ಣುಗಳು ಹೇಳಿದ ಕಥೆಗಳು



**ಡಾ ಕೇಶವ ಕುಲಕರ್ಣಿ**
ವಿಭಾಗೀಯ ಸಂಪಾದಕರು

ವೈದ್ಯರಿಗೆ ಕಣ್ಣುಗಳು ಅನೀಮಿಯಾ, ಕಾಮಾಲೆ ಮುಂತಾಗಿ ಅನೇಕ ರೋಗಗಳ ಲಕ್ಷಣಗಳನ್ನು ತಿಳಿಸುತ್ತವೆ. ಹೀಗೆಯೇ ಹೆಸರಿಸುತ್ತ ಹೋದರೆ ಉದ್ದನ್ನ ಪಟ್ಟಿ ಬೆಳೆಯುತ್ತದೆ. ಆದರೆ ನನ್ನಂಥ ಕಣ್ಣಿನ ತಜ್ಞರಿಗೆ ಹೆಚ್ಚಿಗೆ ಇನ್ವೆಸ್ಟಿಗೇಷನ್ ಮಾಡದೆ ಕನ್ಸಲ್ಟಿಂಗ್ ರೂಮ್ ನಲ್ಲೇ ದೇಹದ ಒಳಗೆ ಹುದುಗಿದ ಅನೇಕ ರೋಗಗಳ ರಹಸ್ಯವನ್ನು ಬಿಟ್ಟುಕೊಡುವ ಪ್ರಸಂಗಗಳು ಅನೇಕ.ಬರೀ ಕಣ್ಣುಗಳ ಹಿಂಭಾಗವನ್ನು ನೋಡಿ ಹಿಂದಿನ ಕಥೆಗಳನ್ನು ತಿಳಿಯುವ ಅವಕಾಶ ನನ್ನ ಹೆಚ್ಚು ಕಡಿಮೆ ಅರ್ಧ ಶತಮಾನದ ವೈದ್ಯಕೀಯ ಜೀವನದ ಅನುಭವದಲ್ಲಿ ಬಂದುದನ್ನು ಈಗ ನಿವೃತ್ತಿಯ ದಿನಗಳಲ್ಲಿ ಮೆಲಕು ಹಾಕುತ್ತಿರುತ್ತೇನೆ. ಅದರಲ್ಲಿ ನಾಲ್ಕು ದಶಕಗಳನ್ನು ಇಂಗ್ಲೆಂಡಿನ ನ್ಯಾಶನಲ್ಹೆಲ್ತ್ ಸರ್ವಿಸ್ನಲ್ಲೇ (NHS) ಒಂದೇ ಆಸ್ಪತ್ರೆಯಲ್ಲಿ ನಾನು ಕೆಲಸಮಾಡುತ್ತ ಕಳೆದಿದ್ದೇನೆ. ಈ ಕಿರು ಲೇಖನದಲ್ಲಿ ಕೆಲವು ವಿಶಿಷ್ಟ ಅನುಭವಗಳನ್ನು ಹಂಚಿಕೊಳ್ಳುತ್ತೇನೆ.

(ಹೆಸರುಗಳನ್ನು ಬದಲಾಯಿಸಿದೆ.)

ಫಂಡೋಸ್ಕೋಪಿಯೋ ರೆಟಿನೋಸ್ಕೋಪಿಯೋ?


ಕೆಲವೊಮ್ಮೆ ಉಳಿದ ವೈದ್ಯರಿಗೆ ಗೊಂದಲ ಹುಟ್ಟಿಸುವ ಎರಡು ಪದಗಳು, ಇವು. Retinoscopy ಅಂದರೆ ಕನ್ನಡಕವನ್ನು ತಪಾಸು ಮಾಡಲು ಆಪ್ಟೀಶಿಯನ್ ಅಥವಾ ನೇತ್ರವೈದ್ಯರು ಚಿಕ್ಕ ಕನ್ನಡಿಯಿಂದ ಮಾಡುವ ವಿಧಾನ. ಅದರಲ್ಲಿ ರೆಟಿನಾ (ಅಕ್ಷಿಪಟಲ) ಸರಿಯಾಗಿ ಕಾಣುವದಿಲ್ಲ. ಅದನ್ನು ನೋಡಲು ಕಣ್ಣಗೊಂಬೆಯನ್ನು ಔಷಧಿಗಳ ಡ್ರಾಪ್ಸ್ ನಿಂದ ಹಿಗ್ಗಿಸಿ ಆಫ್ಥಾಲ್ಮೋಸ್ಕೋಪಿನಿಂದ ನೋಡುವುದೇ ಫಂಡೋಸ್ಕೋಪಿ. ಒಂದೇ ಚದುರಂಗುಲದ ಹಿಂಗಣ್ಣಿನಲ್ಲಿ (Fundus) ಅತ್ಯಂತ ವೈವಿಧ್ಯಮಯ ಚಿತ್ರಗಳು –ಪ್ರಕೃತಿ ಆಕಾಶದ ಕ್ಯಾನ್ ವಾಸಿನಲ್ಲಿ ತನ್ನ ಕುಂಚದಿಂದ



ಬರೆಯಬಹುದಾದ ವಿನ್ಯಾಸಗಳಿಗೂ ಹೆಚ್ಚು– ಕಾಣಿಸುತ್ತವೆ. ಅದನ್ನು ನೋಡಿಯೇ ಡಯಾಗ್ನೋಸ್ ಮಾಡಬಹುದಾದ ರೋಗಗಳು ಅನೇಕ.

ಮುಂಬಯಿ, 1970.

ಅಂದು ಬೆಳಿಗ್ಗೆ ಆಗ ತಾನೇ ಅವಸರದ ಅಡ್ಮಿಷನ್ ಆಗಿದ್ದ 14 ವರ್ಷದ ಹುಡುಗ ತನ್ನಮನೆಯಲ್ಲೆ ಕುಸಿದು ಹೋಗಿ ಬಿಟ್ಟಿದ್ದನಂತೆ.ಆ ಹದಿನಾಲ್ಕು ವರ್ಷದ ಸುರೇಶನ ಫಂಡೋಸ್ಕೋಪಿಗೆ ಡ್ಯೂಟಿ ಆಫಿಸರ್ ಅಂತ ನನಗೆ ಕರೆಬಂದಿತ್ತು. ತುರ್ತು ಮೆಡಿಕಲ್ ವಾರ್ಡಿಗೆ ಧಾವಿಸಿದೆ. ಆತನನ್ನು ನೋಡಿದರೆ ಎರಡುದಿನದಿಂದ ವಿಪರೀತ ಸುಸ್ತು, ಗುಳಿಬಿದ್ದ ಕಣ್ಣುಗಳು, ಬಿಳಿ ಕಾಗದದಂಥ ಒಳ ರೆಪ್ಪೆಗಳು. ರೆಟಿನಾ ನೋಡಿಯೇ ಅಕ್ಯೂಟ್(acute) ಲುಕೀಮಿಯಾ ಮತ್ತು ಅನೀಮಿಯಾ ಅಂತ ತಿಳಿದು 'ರಕ್ತದ ಪರೀಕ್ಷೆ ಮಾಡಿಸಿ' ಅಂತ ಮೆಡಿಕಲ್ ರೆಜಿಸ್ಟ್ರಾರ್ ಗೆ ಮೆಸೇಜ್



ಬರೆದೆ. ಆಗಆ ಅಸ್ಪತ್ರೆಯಲ್ಲೂ ರಕ್ತ ಪರೀಕ್ಷೆಗೆಲ್ಯಾಬ್ನಲ್ಲಿ ಆಟೊಮೇಟೆಡ್ ಯಂತ್ರಗಳು ಲಭ್ಯವಿರಲಿಲ್ಲ. ಪಾಪ, ಒಂದು ರಾತ್ರಿಯಲ್ಲಿ ನಲವತ್ತು ರೋಗಿಗಳ ಇನ್ ಟೇಕ್ ಇರುತ್ತಿದ್ದವು ಮೆಡಿಕಲ್ ರೆಜಿಸ್ಟ್ರಾರ್ಗೆ. ಸೂರ್ಯೋದಯ ಆಗುವ ಮೊದಲೇ ಬಾಸ್ ಬರುವಷ್ಟರಲ್ಲಿ ಎಲ್ಲರ ಟೆಸ್ಟ್, ರಿಸಲ್ಟ್ ತಯಾರಿರಬೇಕು. ಆನರರಿ(Hon) ವಿಸಿಟಿಂಗ್ ಕನ್ಸಲ್ಟಂಟ್ 'ಬಾಸ್' ರಿಕ್ವೆಸ್ಟ್ ಮಾಡಿದರಿಸಲ್ಟ್ ಬರಲು ಎರಡು ದಿನಗಳೇ ಬೇಕಾಗಿದ್ದವು! ಆದರೆ ಕಣ್ಣುಗಳ ಫಂಡಸ್ ನೋಡಿದ ಕ್ಷಣದಲ್ಲೆ ನನಗೇನೋ ಡಯಾಗ್ನೋಸಿಸ್ ಸ್ಪಷ್ಟವಾಗಿತ್ತು!


ದ್ವಿಪ್ರಹಾರ(double whammy)

ನಾನು ಮೊದಲ ಸಲ ಅಮೀಲಿಯಾನ ಕಣ್ಣು ತಪಾಸು ಮಾಡಿದಾಗ ಹದಿನೈದು ವರ್ಷದವಳಾಗಿದ್ದಳು. ಆಗಲೇ ಎರಡೂ ಕಣ್ಣುಗಳಿಗೆ ಜನ್ಮಜಾತ ಪೊರೆಯ (congenital cataract) ಆಪರೇಷನ್ ಆಗಿತ್ತು, ಆದರೂ ದೃಷ್ಟಿ ಮಂದವಾಗಿಯೇ ಇತ್ತಾದರೂ ಅವಳ 'ಫುಲ್ ಲೈಫ್' ಬದುಕು ನನ್ನಲ್ಲಿ ಆಶ್ಚರ್ಯ ಹುಟ್ಟಿಸಿತ್ತು. ಅದು ಅಪರೂಪವೇನಲ್ಲ.ಚುರುಕಾದ ಹುಡಿಗಿ. ತನ್ನ ನ್ಯೂನತೆಗೆ ಸರಿಯಾಗಿಯೇ ಹೊಂದಿಕೊಂಡು ಲವಲವಿಕೆಯಿಂದಲೇ ಇರುತ್ತಿದ್ದಳು. ಆಕೆಯ ತಂದೆ ನಮ್ಮ ಊರಲ್ಲಿ Partial sighted Society ಯನ್ನು ಸ್ಥಾಪಿಸಿ ದೇಶದಾಂತ್ಯ ಮಂದ ದೃಷ್ಟಿಯವರಿಗೆದೃಷ್ಟಿವರ್ಧಕ ಮಸೂರುಗಳು, ಕನ್ನಡಕಗಳನ್ನು ಮಾರುವ ಅಂಗಡಿಯಿಟ್ಟಿದ್ದರು. ನನಗೆ ಇಡೀ ಕುಟುಂಬದ ಪರಿಚಯವಾಗಿತ್ತು. ಕೆಲವೇ ವರ್ಷಗಳ ನಂತರ ತನ್ನ ಪ್ರಿಯಕರ ವಿಲ್ಲಿಯಂನನ್ನು ಕರೆದು ಕೊಂಡು ಬಂದು ಭೇಟಿ ಮಾಡಿಸಿದಳು. ಹುಟ್ಟು ಕುರುಡನಲ್ಲದಿದ್ದರೂ ಹುಟ್ಟಿದ ಸ್ವಲ್ಪ ಸಮಯದಲ್ಲೇ ಎರಡೂ ಕಣ್ಣುಗಳನ್ನು ಕಳೆದುಕೊಂಡಿದ್ದ ಆತನೊಡನೆ ಮದುವೆಯೂಆಯಿತು. ನನಗೋ ಆತಂಕ. ಹೀಗೆ ಕುರುಡರಿಬ್ಬರು ಅಥವಾ ಆಂಶಿಕ ದೃಷ್ಟಿಯುಳ್ಳವರು ಜೊತೆಯಾಗುವದು ಸಹಜವೇ. ಆನಂತರವೇ ನನಗೆ ಗೊತ್ತಾದದ್ದು ಕಣ್ಣಿನ ಭೀಕರ ಕ್ಯಾನ್ಸರ್ ಎಂದು ಕುಖ್ಯಾತಿಗೊಂಡ ರೆಟಿನೋಬ್ಲಾಸ್ಟೋಮಾ (Retinoblastoma-RB)ದಿಂದಾಗಿಯೇ ಆತನ ಎರಡೂ ಕಣ್ಣುಗಳ ಆಪರೇಶನ್ ಬೇರೆಡೆಗೆ ಆಗಿತ್ತು ಅಂತ. ರೆಟಿನೋಬ್ಲಾಸ್ಟೋಮಾ ಆನುವಂಶಿಕವಾಗಿ ಮುಂದಿನ ಪೀಳಿಗೆಗೆ ತಾಗುವ ಸಾಧ್ಯತೆಯಿದೆ. ಅದರಲ್ಲೂ ಎರಡೂ ಕಣ್ಣುಗಳಿಗೆ ಬಂದಿದ್ದರೆ (bilateral) 40% ಸಾಧ್ಯತೆಯಿದೆ.ರೆಟಿನೋಬ್ಲಾಸ್ಟೋಮಾ 1500 ರಲ್ಲಿ ಒಂದು ಹುಟ್ಟಿನಲ್ಲಿ ಕಾಣಿಸಿಕೊಳ್ಳುತ್ತದೆ, ಅದೂ ನಾಲ್ಕೂವರೆ ವರ್ಷದೊಳಗೆ. ಅದಕ್ಕೇ ಮುಂದುವರೆದ ದೇಶಗಳಲ್ಲಿ ಈ ಸೋಂಕಿನ ಸಂಶಯವಿರುವ ಕುಟುಂಬಗಳನ್ನು ಸ್ಕ್ರೀನಿಂಗ್ ಪ್ರೋಗ್ರಾಮ್ ನಲ್ಲಿ ನೊಂದಾಯಿಸಿ ಬೇಗನೆ ಕಂಡುಹಿಡಿಯುತ್ತಾರೆ. ಜಗತ್ತಿನ 100 ರಲ್ಲಿ 20 ಕೇಸುಗಳು ಭಾರತದಲ್ಲಿ ಕಾಣಿಸಿಕೊಳ್ಳುತ್ತವೆಯಂತೆ. ಬೇಗನೆ ಪತ್ತೆಯಾಗಿ ಶುಶ್ರೂಷೆಯಾಗದಿದ್ದರೆ ಸಾವು ನಿಶ್ಚಿತ.

ಮುಂದೊಂದು ದಿನ ನನ್ನ ಓಪನ್ ಕ್ಲಿಕ್ ಗೆ ಅಮೀಲಿಯಾ ತನ್ನ ಮೂರು ವರ್ಷದ ಈನಿಡ್ ಳ ಕೈ ಹಿಡಿದು ಕರೆದುಕೊಂಡು ಬಂದಳು. ಇನ್ನೂ ರೂಮಿನ ಹೂರಗೆ ಇದ್ದಾಗಲೇ ಮಗುವನ್ನು ನೋಡಿ ನನ್ನ ಎದೆ ಧಸ್ಸೆಂದಿತು. ಹೊರಗಿನಿಂದ ಏನೂ ವ್ಯತ್ಯಾಸವಿಲ್ಲ ಎರಡೂ ಕಣ್ಣುಗಳಲ್ಲಿ. 'ನನಗ್ಯಾಕೋ ಸ್ವಲ್ಪೇ ಸಂಶಯ. ಈಕೆಯ ಒಂದು ಕಣ್ಣಲ್ಲಿ ನನ್ನ ತರ ಕ್ಯಾಟರಾಕ್ಟ್ ಇರಬಹುದೋ, ಯಾಕೋ ಸ್ವಲ್ಪ ಮಿಂಚುತ್ತದೆ ಈ ಕಣ್ಣು!' ಅಂತ ಅಮೀಲಿಯಾ ಹೇಳುವ ಮೊದಲೇ ಎಂಟು ಫೂಟುಗಳ ದೂರದಲ್ಲೇ ನಾನು ಅವಳ ಅಗಲವಾದ ಕಣ್ಣುಗೊಂಬೆಯ ಹಿಂದೆ ಇಣುಕಲು ಪ್ರಯತ್ನಿಸುತ್ತಿದ್ದ 'ಗಂಟನ್ನು' (Leukocoria)ನೋಡಿಬಿಟ್ಟಿದ್ದೆ. ತಾಯಿಗೆ ದೃಷ್ಟಿ ಸರಿಯಾಗಿರದ್ದರಿಂದ ತನ್ನ ಮಗಳ ಕಣ್ಣನ್ನು ಸೂಕ್ಷ್ಮವಾಗಿ ನೋಡಲಾಗಿರಲಿಲ್ಲ. ಸಮಾಧಾನದಿಂದೆ ಪರೀಕ್ಷೆ ಮಾಡಿ ಖಾತ್ರಿಮಾಡಿಕೊಂಡು ಡಯಾಗ್ನೋಸಿಸ್ ಮೆಲ್ಲಗೆ ತಿಳಿಸಿದೆ. ಆಕೆಗಾದ ಆಘಾತ ಅಷ್ಟಿಷ್ಟಲ್ಲ! ಆಕಾಶವೇ ಆಕೆಯ ತಲೆಯ ಮೇಲೆ ಕುಸಿದಿತ್ತು.ತನ್ನ ಪತಿಯ ಕ್ಯಾನ್ಸರ್ ಸಹ ಆನುವಂಶಿಕವಾಗಿ ಕಾಣಿಸಿಕೊಳ್ಳಬಹುದೆಂದು ಅವಳ ಕಲ್ಪನೆಯಲ್ಲೂ ಇರಲಿಲ್ಲ. ತಕ್ಷಣ ಲಂಡನ್ನಿನ ಮಕ್ಕಳ ಕಣ್ಣಿನ ಕ್ಯಾನ್ಸರ್ ಸ್ಪೆಷಲಿಸ್ಟ್ ಆಸ್ಪತ್ರೆಗೆ ರವಾನಿಸಿದ್ದಾಯಿತು. ಮಗು ಒಂದು ಕಣ್ಣನ್ನು ಕಳೆದುಕೊಂಡರೂ ಇನ್ನೊಂದರಲ್ಲಿ ರೇಡಿಯೋ ಥೆರಪಿ ಆಗಿ ಪೂರ್ತಿ ದೃಷ್ಟಿ ಉಳಿಸಲಾಯಿತು. ಈನಿಡ್ ದೊಡ್ಡವಳಾದಳು. ಮುಂದೆ ಆಕೆಯಇನ್ನೊಂದು ಬದಿಯ ಕಣ್ಣಿನ ಸುತ್ತಲಿನ ಎಲುಬಿನ ಸಾರ್ಕೋಮಾ ಎನ್ನುವ ಅಪರೂಪದ ಕ್ಯಾನ್ಸರ್ ಬಂದರೂ ಸರಿಯಾದ ಸಮಯದ ಆರೈಕೆಯಿಂದ ಚೇತರಿಕೊಂಡಳು ಅಂತ ಮೂರು ವರ್ಷಗಳ ಹಿಂದೆನಾನು ರಿಟೈರ್ ಆಗುವ ಸಮಯದಲ್ಲಿ ಸುದ್ದಿ ಬಂದಿತ್ತು. ಈಗ RB ಜೀನ್ಸ್ ಸ್ಕ್ರೀನಿಂಗ್ ನಿಂದಾಗಿ ರೋಗವನ್ನು ಬೇಗನೆಕಂಡುಹಿಡಿಯಲು ಆಗುತ್ತಿದೆ. ಆಗಾಗ ಕಂಡಗಲೆಲ್ಲಾ ಈ ಘಟನೆಯ ನೆನಪು ಕಾಡುತ್ತಿರುತ್ತದೆ.

ಕಣ್ಣಿನ ಡಾಕ್ಟರ್ 'ಜೀವರಕ್ಷಕ'ನಾಗಬಹುದೋ?


ಆ ಬಿರುದನ್ನು ನನಗೆ ಕೊಟ್ಟವ ಆಕೆಯ ಪತಿ. ಸಾಮಾನ್ಯವಾಗಿ ತಮ್ಮ ವಯಸ್ಸಿಗಿಂತ ಚಿಕ್ಕದಾಗಿ ಕಾಣುವ ಮಹಿಳೆಯರನ್ನೇ ನಾವು ಹೆಚ್ಚಾಗಿ ಕಾಣುತ್ತೇನೆ ನನ್ನ ಆಸ್ಪತ್ರೆಯಲ್ಲಿ –ಆಕೆಯನ್ನು ಹೊರತಾಗಿ. "ನನಗೆ ಕಣ್ಣೂ ಬಿಡುವದಾಗಲೊಲ್ಲದು, ಅನ್ನವನ್ನು ಅಗಿಯಲೂ ಸಾಧ್ಯವಾಗುತ್ತಿಲ್ಲ, ಬರೀ ಸೂಪ್ ಕುಡಿದೇ ಬದುಕಿದ್ದೇನೆ!"



ಅಂತ ಕುತ್ತಿಗೆಯನ್ನು ಹಿಂದೆ ಬಗ್ಗಿಸಿ ರೆಪ್ಪೆಗಳ ಕೆಳಸಂದಿನಿಂದ ನನ್ನನ್ನು ದೀನತೆಯಿಂದ ನೋಡುತ್ತ ಗಂಡನಿಗೆ ತೆಕ್ಕೆಬೀಳುತ್ತ ನನ್ನ ಕನ್ಸಲ್ಟಿಂಗ ರೂಂ ಒಳಗೆ ಕಾಲಿಡುತ್ತ ಬಂದು ಹೇಳಿದಳು ಕ್ಯಾಥರಿನ್. ವಯಸ್ಸು ಸುಮಾರು ಐವತ್ತೈದು ಇರಬಹುದು ಅಂತ ಅನಿಸಿತು. ಆದರೆ ಜೋಲುಬಿದ್ದ ಮುಖ. ಅದರ ತುಂಬ ಮುತ್ತಿದ ದುಃಖ. ತಪಾಸಣೆ ಬೇಗನೆ ಮುಗಿಸಿ ಪಕ್ಕದ ಕೋಣೆಯ ಕೌಚ್ ಮೇಲೆ ಮಲಗಿಸಿ ಆಗ ಪ್ರಚಿಲಿತವಿದ್ದ 'ಟೆನ್ಸಿಲಾನ್ ಟೆಸ್ಟ್' ಇಂಜಕ್ಷನ್ ಕೊಟ್ಟ ಕ್ಷಣದಲ್ಲೇ ಎರಡೂ ಕಣ್ಣುಗಳು ತೆರೆದು ಆಕೆ ಮುಗುಳ್ನಕ್ಕಳು. ನನ್ನ ಅಂದಾಜಿನಂತೆಯೇ ಆಕೆಗೆ ಮಯಾಸ್ಥೀನಿಯಾ ಗ್ರಾವಿಸ್ (ಸ್ನಾಯುಗಳ ಅತೀವ ದೌರ್ಬಲ್ಯ) ಆಗಿತ್ತು. ಪಕ್ಕದ ಕೋಣೆಯಲ್ಲೇ ಸುದೈವದಿಂದ ವಾರಕ್ಕೊಮ್ಮೆ ಬರುವ ಅತಿಥಿ ನ್ಯೂರಾಲಜಿಸ್ಟ್ ಸ್ಪೆಷಲಿಸ್ಟ್ ಇದ್ದರು ಆ ದಿನ. ಆತನಿಗೆ ಆಕೆಯನ್ನು ಒಪ್ಪಿಸಿ ಬಂದಿದ್ದಾಯಿತು. ಕೆಲಸದ ಭರಾಟೆಯಲ್ಲಿ ಆ ಘಟನೆ ಪೂರ್ತಿ ಮರೆತೇ ಹೋಗಿತ್ತು – ಆಕೆಯ ಪತಿ ನನ್ನನ್ನು ಹುಡುಕಿಕೊಂಡು ನಂತರದ ಎರಡನೆಯ ಮಂಗಳವಾರ ಬರುವ ವರೆಗೆ. ನನ್ನ ಎರಡೂ ಕೈಗಳನ್ನು ಹಿಡಿದು ಒತ್ತಿ: "ನನ್ನ ಹೆಂಡತಿಯ ಪ್ರಾಣವನ್ನು ಉಳಿಸಿದಿರಿ!" ಅಂದಾಗ ನನಗೇ ಆಶ್ಚರ್ಯ. ಸರ್ಜನ್, ಫಿಸೀಷಿಯನ್ ಬಿಟ್ಟರೆ ಕಣ್ಣಿನ ವೈದ್ಯರಿಗೆ ಆ ಅವಕಾಶವೇ ಇರುವದಿಲ್ಲವಲ್ಲ. "ನನ್ನಾಕೆಗೆ ನುಂಗಲಿಕ್ಕೇ ಆಗಿರದ್ದರಿಂದ ಸೂಪನ್ನು ಬಿಟ್ಟು ಬೇರೆ ಆಹಾರವೇ ಗಂಟಲಿನಲ್ಲಿ ಇಳಿಯುತ್ತಿರಲಿಲ್ಲ. ನನ್ನ ಕಣ್ಣ ಮುಂದೆಯೇ ಪೂರ್ತಿ ಕರಗಿಯೇ ಹೋಗುತ್ತಿದ್ದಳು. ಈಗ ಗುಣಮುಖವಾಗುತ್ತಿದ್ದಾಳೆ; ಬದುಕಿ ಉಳಿದಿದ್ದಾಳೆ!" ಅಂತ ಕೃತಜ್ಞತೆಯಿಂದ ಹೇಳಿದ. ನಾನು 'ಬದುಕಿಸಿದ' ಏಕೈಕ ರೋಗಿ ಆಕೆಯಾಗಿದ್ದಳು! ಆ ರೋಗದವರು ಪ್ರಪ್ರಥಮವಾಗಿ ನಮ್ಮ ಹತ್ತಿರ ಬರುವದು ಅಪರೂಪವೆಂದೇ ಹೇಳ ಬೇಕು.

ತಳಿವಿಜ್ಞಾನ ಮತ್ತು ದೀರ್ಘಸೇವೆ!

ಒಂದೇ ಊರಲ್ಲಿ ಈ ಒಂದೇ ಆಸ್ಪತ್ರೆಯಲ್ಲಿ ಬಹಳ ಕಾಲ ಕೆಲಸಮಾಡುವುದರಿಂದ ಅನೇಕ ಲಾಭಗಳು ಇವೆ. ತುಂಬು ಬಸಿರಿ ಶ್ರೀಮತಿ ಜಬ್ (ನಿಜವಾದ ಹೆಸರಲ್ಲ) ಪ್ರಿಎಕ್ಲಾಂಪ್ಸಿಯಾ(preeclampsia), ತಲೆನೋವು ಅಂತ ಮೆಟರ್ನಿಟಿಯಲ್ಲಿ ಅಡ್ಮಿಟ್ ಆದವಳನ್ನು ಲಂಬಾರ್ ಪಂಕ್ಚರ್ ಸಹ ಆದ ಮೇಲೆ, ಬ್ರೇನ್ ಟ್ಯೂಮರ್ ಸಂಶಯದಿಂದ ನಮ್ಮ ವಿಭಾಗಕ್ಕೆ ಫಂಡೋಸ್ಕೋಪಿಗೆ ಕಳಿಸಿದಾಗ ಆಪ್ಟಿಕ್ ನರ ಸಾಮಾನ್ಯಕ್ಕಿಂತ ಬೇರೆಯೇ ಕಂಡರೂ ಅದು ಡ್ರೂಸೆನ್ (Optic disc druscen) ಮಾತ್ರ, ಚಾಕ್ಷುಷ ನರದ ಊತ (optic nerve head papilloedema) ಅಲ್ಲ ಅಂತ ಖಾತ್ರಿ ಪಡಿಸಿ ನಿಖಿತ ಡಾಯಗ್ನೋಸಿಸ್ ಹೇಳಿದ್ದಾಯಿತು. ಹತ್ತೊಂಬತ್ತು ವರ್ಷದ ನಂತರ ಕನ್ನಡಕದ ಮರುಪರೀಕ್ಷೆಗೆಂದುಹೋದ ಯುವಕ ಫಿಲಿಪ್ನನ್ನು ಆತನ ಆಪ್ಟೀಶಿಯನ್ ಚೀಟಿ ಕೊಟ್ಟು'? brain tumour'ಅಂತ ಅರ್ಜಂಟಾಗಿ ಕಳಿಸಿದ್ದ.ನಾನು ವಾಡಿಕೆಯಂತೆ ಹೆಸರು ವಯಸ್ಸು ಚೆಕ್ ಮಾಡಿ ಚೀಟಿ ಬಿಚ್ಚಿ ಓದುತ್ತಿದ್ದಂತೆಯೇ ಆತನ ಡಯಾಗ್ನೋಸಿಸ್ ದ ಸುಳುವು ಹತ್ತಿತ್ತು. ಈ ದೇಶದಲ್ಲಿ ಸಂಬಂಧಿಗಳು ದೂರ ದೂರವೇ ಬದುಕುವ ಪದ್ಧತಿ.ಪ್ರೈವಸಿಯೇ ಜಾಸ್ತಿ. ಕುಟುಂಬದ ರಹಸ್ಯಗಳು ಅಲ್ಲಲ್ಲೇ ಮಡುಗಟ್ಟಿ ಉಳಿದು  ಬಿಡುತ್ತವೆ.'ನಿನ್ನ ತಾಯಿಯನ್ನು ನಾನು ನೋಡಿದ್ದೆನೆಂದು ಆಕೆ ಹೇಳಿದ ನೆನಪಿದೆಯೇ' ಅಂತ ಕೇಳಿದಾಗ, ಕನಸಿನಲ್ಲೆಲ್ಲೋ ಅನ್ನುವಂತೆ ಇರಬಹುದು ಅಂದ. ಡ್ರಾಪ್ಸ್ ಹಾಕಿ ಚೆಕ್ ಮಾಡಿದ ಕೂಡಲೆ ಆತನಿಗೂ



ಅದೇ ಡ್ರೂಸೆನ್ ಎರಡೂ ಕಣ್ಣುಗಳಲ್ಲಿ ಇದ್ದುದು ಖಚಿತವಾಗಿತ್ತು. ಅದರ ಪ್ರಚಲಿತೆಯ ಅಂಕಿ ಸಂಖ್ಯೆಗಳ ಬಗ್ಗೆ ವಾದವಿದ್ದರೂ ಸುಮಾರು ಎರಡರಿಂದ ಮೂರು ಶತಾಂಶ ಜನರಲ್ಲಿ ಇದು ಆನುವಂಶಿಕವಾಗಿ ಕಾಣಿಸಿಕೊಳ್ಳಬಹುದೆಂದು ತಳಿವಿಜ್ಞಾನ(ophthalmic genetics) ಹೇಳುತ್ತದೆ.ಈ ಯುವಕನಿಗೆ ತೀವ್ರವಾಗಿ ಇನ್ವೆಸ್ಟಿಗೇಷನ್ ಮಾಡುವದು ತಪ್ಪಿತ್ತು, ಫ್ಯಾಮಿಲಿ ಹಿಸ್ಟ್ರಿ ಗೊತ್ತಿದ್ದರಿಂದ.

ಕಣ್ಣುಗಳು ಏನೆಲ್ಲ ಕಥೆಗಳನ್ನು ಹೇಳಿವೆ ನನಗೆ!



ಡಾ ವೀಣಾ ಎನ್ ಸುಳ್ಯ
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ಕಶ್ಯಪ ಸಂಕೀರ್ಣ, ಶ್ರೀರಾಮಪೇಟೆ, ಸುಳ್ಯ

ಸಾಂಸ್ಕೃತಿಕ

# ಕನ್ನಡ ವೈದ್ಯ ಬರಹಗಾರರ ಸಮಿತಿಯ ವರದಿ

ದಿನಾಂಕ 11-09-2022 ರಂದು ಕನ್ನಡ ವೈದ್ಯ ಬರಹಗಾರರ ಸಮಿತಿ , ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಹಾಗೂ ವಾಸವಿ ಸಾಹಿತ್ಯ ಕಲಾವೇದಿಕೆ ಸುಳ್ಯ ವತಿಯಿಂದ ಆಯೋಜಿಸಿದ್ದ ಸಾಹಿತಿಗಳಿಗೊಂದು ಸಂಜೆ ಎಂಬ 66 ನೇ ಆನ್ ಲೈನ್ ಸರಣಿ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಮನೋರಮಾ ಬಿ.ಎನ್ ರವರು ಯಕ್ಷಮಾರ್ಗಮುಕುರ ಉದ್ಗ್ರಂಥದ ಪ್ರವೇಶಿಕೆ ಮತ್ತು ಸಂವಾದದ ಬಗ್ಗೆ ಮಾತನಾಡಿದರು. ಡಾ.ಮನೋರಮಾ ರವರು ಕಲಾಸಂಶೋಧಕರಾಗಿ, ಭರತನಾಟ್ಯ, ಯಕ್ಷಗಾನ-ಭಾಣಿಕಾ ಮತ್ತು ರೂಪಕಗಳ ಕಲಾವಿದರಾಗಿ ಸಂಸ್ಕೃತಿಯ ಬೇರೆ ಬೇರೆ ಆಯಾಮಗಳಲ್ಲಿ ವಿಶ್ಲೇಷಕರು ಹಾಗೂ ವಿಮರ್ಶಕರು ಕೂಡಾ ಆಗಿದ್ದಾರೆ. ಯಕ್ಷಗಾನ ಇಡೀ ಭಾರತದ ನಾಟ್ಯ ಪದ್ದತಿಯನ್ನು ಒಂದು ಹೆಸರಿನಿಂದ ಕರೆಯಲಾಗುತ್ತದೆ ಅದನ್ನು ಯಕ್ಷ ಎಂದು ಹೇಳಲಾಗುತ್ತದೆ. ನಾಟ್ಯ ಪದ್ದತಿಯ ಒಟ್ಟು ಸ್ವರೂಪ ಅಂದರೆ ಅದು ಯಕ್ಷ ಮಾರ್ಗ ಎಂದುಹೇಳುವ ಮೂಲಕ ಯಕ್ಷಮಾರ್ಗದ ಅರ್ಥವನ್ನು ಕೇಳುಗರಿಗೆ ಅರ್ಥೈಸಿದರು. ಇನ್ನು ಯಕ್ಷಮಾರ್ಗಮುಕುರ ಕಾವ್ಯಕ್ಕೆ ವಿಶಾಲವಾದ ಅರ್ಥವಿದ್ದು, ಇದು ಕೇವಲ ಯಕ್ಷಗಾನವನ್ನು ಮಾತ್ರ ಪ್ರತಿಬಿಂಬಿಸುವುದಿಲ್ಲ ಎಂಬುದರ ಸ್ಪಷ್ಟನೆಯನ್ನು ಕೂಡಾ ಕೊಟ್ಟರು.

https://youtu.be/EehRh7WWGjY

ದಿನಾಂಕ 18-09-2022 ರಂದು 67 ನೇ ಕಾರ್ಯಕ್ರಮದಲ್ಲಿ ನ್ಯಾಯವಾದಿ ಕಶ್ಯಪ್ ನಾಯ್ಕ್ ರವರು ಧರ್ಮಶಾಸ್ತ್ರದ ಇತಿಹಾಸದ ಕತೃ ಭಾರತರತ್ನ ಡಾ.ಪಿ.ವಿ ಕಾಣೆ ರವರ ಬಗ್ಗೆ ಉಪನ್ಯಾಸವನ್ನು ನೀಡಿದರು. ಕಶ್ಯಪ್ ನಾಯ್ಕ್ ರವರು ಮೂಲತಃ ಬೆಂಗಳೂರಿನವರು. ಸಿವಿಲ್, ಕಾನ್ಸ್ಟಿಟ್ಯೂಷನ್ ವಿಷಯಗಳಲ್ಲಿ ವಿಶೇಷ ಪರಿಣತರು. ಅರ್ಥಶಾಸ್ತ್ರ, ಧರ್ಮ ಶಾಸ್ತ್ರ, ಇತಿಹಾಸವನ್ನು ಅಭ್ಯಾಸಿಸಿ ಅಗಾಧ ಜ್ಞಾನ ಭಂಡಾರವನ್ನು ಮೈಗೂಡಿಸಿಕೊಂಡವರು.



ಡಾ.ಪಿ.ವಿ ಕಾಣೆಯವರು ಬರೆದ ಐದು ಸಂಪುಟಗಳು ಮತ್ತು ಎಂಟು ಭಾಗಗಳಲ್ಲಿ 6,000ಕ್ಕೂ ಹೆಚ್ಚು ಪುಟಗಳನ್ನು ಹೊಂದಿರುವ ಭಾರತದ ಸಮಗ್ರ ಪರಿಚಯವನ್ನು ಮಾಡಿಕೊಡುವ ಗ್ರಂಥವಾದ ಧರ್ಮಶಾಸ್ತ್ರದ ಇತಿಹಾಸ ದ ಬಗ್ಗೆ ಮಹತ್ವದ ವಿಚಾರಗಳನ್ನು ತಿಳಿಸಿದರು. ಮನು, ಹಿರಣ್ಯಕೇಶಿ, ಬೋಧಾಯನ, ಗೌತಮ, ಯಾಜ್ಞವಲ್ಕ್ಯ, ಪರಾಶರ, ಆಪಸ್ತಂಭ ಮೊದಲಾದ ಮಹಾಮುನಿಗಳ ಸಿದ್ಧಾಂತಗಳ ಪರಿಚಯ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಸಂಸ್ಕೃತ ಭಾಷೆಯ ಮಹಾಕಾವ್ಯಗಳ ಪರಿಚಯವನ್ನು ಮಾಡಿಕೊಟ್ಟರು. ವರ್ಣ, ಆಶ್ರಮ, ಸಂಸ್ಕಾರ, ಆಚಾರ, ದಾನ, ವ್ರತ ಪೂಜಾದಿಗಳು, ಮೊದಲಾದ ವಿಷಯಗಳ ಬಗೆಗೆ ಮಾಹಿತಿ ನೀಡಿದರು.

https://www.youtube.com/watch?v=FpVwi8Tsr2M

ದಿನಾಂಕ 25-09-2022 ರಂದು 68 ನೇ ಕಾರ್ಯಕ್ರಮದಲ್ಲಿ ಶ್ರೀ ಎಸ್.ಎನ್ ಸೇತುರಾಮ್ ರವರು ವೃತ್ತಿ ಮತ್ತು ಪ್ರವೃತ್ತಿ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಎಸ್.ಎನ್ ಸೇತುರಾಮ್ ರವರು ಮೂಲತಃ ಹಾಸನದವರು. ಬಾಲ್ಯದಿಂದಲೂ ರಂಗಭೂಮಿಯ ಕಡೆಗಿನ ಸೆಳೆತ ಇವರನ್ನು ಹವ್ಯಾಸಿ ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗುವಂತೆ ಮಾಡಿತು. ಹಲವಾರು ಧಾರಾವಾಹಿಗಳಲ್ಲಿ

ನಟನೆ ಕೂಡಾ ಮಾಡಿದ್ದಾರೆ. ಭಾರತೀಯ ಅಂಚೆ ಇಲಾಖೆ ಮತ್ತು ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡಿ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದಾರೆ. ಮೊಟ್ಟಮೊದಲಿಗೆ ವೈದ್ಯ ವೃತ್ತಿಯ ಶ್ರೇಷ್ಠತೆಯನ್ನು ತಿಳಿಸುತ್ತಾ ಪ್ರವೃತ್ತಿ ಹೇಗಿರುತ್ತದೆ ಎನ್ನುವುದನ್ನು ತಿಳಿಸಿದರು. ತಮ್ಮ ವೃತ್ತಿ ಮತ್ತು ಪ್ರವೃತ್ತಿಯನ್ನು ಉದಾಹರಣೆ ಕೊಡುವ ಮೂಲಕ ವಿಷಯದ ಚರ್ಚೆಯನ್ನು ಪ್ರಾರಂಭಿಸಿ ತಮ್ಮ ಸಾಕಷ್ಟು ವೃತ್ತಿ ಮತ್ತು ಪ್ರವೃತ್ತಿಯ ಅನುಭವಗಳನ್ನು ಹಂಚಿಕೊಂಡರು.

https://youtu.be/buHCXJSiV3g




ದಿನಾಂಕ 02–10–2022 ರಂದು 69ನೇ ಕಾರ್ಯಕ್ರಮದಲ್ಲಿ ಸಂಸ್ಕೃತ ಉಪನ್ಯಾಸಕರಾದ ಶ್ರೀ ಪರೀಕ್ಷಿತ್ ತೋಳ್ಪಾಡಿ ರವರು ಮತ್ತೆ ಗಾಂಧಿಯ ಕತೆ ಎಂಬ ವಿಚಾರದ ಬಗ್ಗೆ ಮಾತನಾಡಿದರು. ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿಯವರ ಸುಪುತ್ರರಾಗಿರುವ ಇವರು ಸಂಸ್ಕೃತ ಪಾಂಡಿತ್ಯ ಪಡೆದುಕೊಂಡು ಸಾವಿರಾರು ಮಕ್ಕಳಿಗೆ ಸಂಸ್ಕೃತದ ಹಲವು ಆಯಾಮಗಳನ್ನು ತಿಳಿಸುತ್ತಾ ಬಂದಿದ್ದಾರೆ. ಹಾಗೆಯೇ ವ್ಯಕ್ತಿ ಚಿತ್ರ ಬರೆಯುವುದಲ್ಲೂ ಕೂಡಾ ಬಹಳ ಆಸಕ್ತಿ ಹೊಂದಿದವರಾಗಿದ್ದಾರೆ. ಇನ್ನು ಕಾರ್ಯಕ್ರಮದಲ್ಲಿ ಗಾಂಧಿಯವರ ಅಹಿಂಸಾ ತತ್ವ ಕೊಲ್ಕತ್ತಾದಲ್ಲಿ ಯಾವ ರೀತಿ ಪ್ರೇರಣೆಗೆ ಮುಂದಾಯಿತು ಎನ್ನುವದನ್ನು ಉದಾಹರಣೆಯ ಮೂಲಕ ವಿವರಿಸಿದರು. ವಿವೇಕಾನಂದರ ದರಿದ್ರ ದೇವೋ ಭವ ಎಂಬುದನ್ನು ಅಕ್ಷರಶಃ ಆಚರಣೆಗೆ ತಂದವರು ಮಹಾತ್ಮ ಗಾಂಧೀಜಿ. ವಿವೇಕಾನಂದರ ನಂತರ ಗಾಂಧೀಜಿಯವರು ಇದು ವಂದೇ ಮಾತರಂ ನ ಸುಪಲಾಂ ನ ಅರ್ಥ ಎಂದು ತಿಳಿಸಿದರು. ಗಾಂಧೀಜಿಯ ಬದುಕು ಯಾವೆಲ್ಲಾ ತತ್ವಗಳಿಂದ ಕೂಡಿತ್ತು ಹಾಗೂ ಅವರು ಅಳವಡಿಸಿಕೊಂಡಿದ್ದ ಉತ್ತಮ ಮೌಲ್ಯಗಳನ್ನು ಕೂಡಾ ತಿಳಿಸಿಕೊಟ್ಟರು.

https://youtu.be/tAuNdpGOZsI

ದಿನಾಂಕ 09–10–2022 ರಂದು 70ನೇ ಕಾರ್ಯಕ್ರಮದಲ್ಲಿ ಡಾ. ರಾಮ್ ಪ್ರಸಾದ್ ರವರು ಹೊರ ದೇಶಗಳಲ್ಲಿ ವೈದ್ಯ ವೃತ್ತಿ ಸುಖವೋ ಕಷ್ಟವೋ ಎಂಬ ವಿಷಯದ ಬಗ್ಗೆ ಚರ್ಚಿಸಿದರು. ಡಾ. ರಾಮ್ ಪ್ರಸಾದ್ ರವರು ಮೂಲತಃ ಹಾಸನ ಜಿಲ್ಲೆಯವರು. ಹುಟ್ಟೂರಾದ ಚನ್ನಪುರ ಗ್ರಾಮದಲ್ಲಿ ವೈದ್ಯಕೀಯ ವೃತ್ತಿಯನ್ನು ಆರಂಭಿಸುವ ಮೂಲಕ ತಮ್ಮ ವೈದ್ಯಕೀಯ ಜೀವನಕ್ಕೆ ಸಾರ್ಥಕತೆಯ ಅಡಿಪಾಯವನ್ನು ಹಾಕಿದವರು. ಇನ್ನು ಕಾರ್ಯಕ್ರಮದಲ್ಲಿ ಹೊರ ದೇಶಗಳಲ್ಲಿ ವೈದ್ಯ ವೃತ್ತಿ ಸುಖವೋ ಕಷ್ಟವೋ ಎಂಬ ವಿಷಯದ ಬಗ್ಗೆ ಚರ್ಚಿಸುತ್ತಾ ನಮ್ಮ ದೇಶವಾಗಿರಲಿ ಅಥವಾ ವಿದೇಶಗಳಲ್ಲಾಗಿರಲಿ ಸಂಕಷ್ಟದ ಪರಿಸ್ಥಿತಿ ಎದುರಾದಾಗ ವೈದ್ಯರು ಯಾವ ರೀತಿ ಅದನ್ನು ಎದುರಿಸಬಹುದು ಎಂಬುದನ್ನು ತಿಳಿಸಿದರು. ಅಲ್ಲಿಯ ಕುಟುಂಬದ ವ್ಯವಸ್ಥೆ, ಅದರಿಂದ ಹಿರಿಯ ನಾಗರಿಕರು ಪಡುವ ತೊಂದರೆಗಳ ಬಗ್ಗೆ ಒಳನೋಟ ಬೀರಿದರು ಹಾಗೆಯೇ ತಮಗಾದ ಅನುಭವಗಳನ್ನು ಕೂಡಾ ಹಂಚಿಕೊಂಡರು.

https://youtu.be/O5z7q5bTWSg

ದಿನಾಂಕ 09–10–2022 ರಂದು 71ನೇ ಕಾರ್ಯಕ್ರಮದಲ್ಲಿ ಅರ್ಜುನ್ ಭಾರದ್ವಜ್ ರವರು ಮಹಾಭಾರತ ಪಾಠಪರಿಷ್ಕರಣದ ವಿಜ್ಞಾನಿ ಡಾ. ವಿಷ್ಣು ಸೀತಾರಾಮ ಸುಕ್ಥಂಕರ್ ಕುರಿತಂತೆ ಹಲವಾರು ವಿಚಾರಗಳನ್ನು ಹಂಚಿಕೊಂಡರು. ಯುವ ವಿದ್ವಾಂಸರು, ಭಾಷಾ ಅನುವಾದಕರು, ಕವಿಗಳು ಆಗಿರುವ ಅರ್ಜುನ್ ಭಾರದ್ವಜ್ ರವರು ಶಾಸ್ತ್ರೀಯ ಸಾಹಿತ್ಯ, ಕಲೆ ಮತ್ತು ತತ್ವಶಾಸ್ತ್ರಗಳ ಬಗ್ಗೆ ಸಾಕಷ್ಟು ಜ್ಞಾನ ಉಳ್ಳವರಾಗಿದ್ದಾರೆ. ಸ್ವತಃ ತಾವೇ ಸಂಸ್ಕೃತದಲ್ಲಿ ಕವಿತೆಗಳನ್ನು ರಚಿಸುತ್ತಾರೆ. ಕೊಳಲು ನುಡಿಸುವುದು, ನೃತ್ಯ ಹಾಗೂ ನಾಟಕಗಳಲ್ಲೂ ಇವರಿಗೆ ಹೆಚ್ಚು ಆಸಕ್ತಿ ಇದೆ.

ವಿಷ್ಣು ಸೀತಾರಾಮ ಸುಕ್ಥಂಕರ್ ರವರ ಮುಖ್ಯವಾದ ಎರಡು ಗ್ರಂಥಗಳಿಂದ ತಮ್ಮ ಮಾತುಗಳನ್ನು ಪ್ರಾರಂಭಿಸಿದರು. ಬಾಂಬೆ ವಿಶ್ವವಿದ್ಯಾನಿಲಯಕ್ಕೆ ಮಹಾಭಾರತದ 4 ಉಪನ್ಯಾಸಗಳನ್ನು ಕೊಡುವ ಮೂಲಕ ಮಹಾಭಾರತದ ಸಂಪೂರ್ಣ ಚಿತ್ರಣ ಹೇಗಿತ್ತು ಎನ್ನುವುದನ್ನು ಸಾಕ್ಷಿಕರಿಸಿದರು. ಮಹಾಭಾರತ ವಿವಿಧ ಲಿಪಿಗಳಲ್ಲಿ, ವಿವಿಧ ಭಾಷೆಗಳಲ್ಲಿ ಬರುತ್ತಿದ್ದ ಹಾಗೆ ಯಾವ ರೀತಿಯ ಬದಲಾವಣೆಗಳಾದವು ಎನ್ನುವುದರ ಸ್ಪಷ್ಟೀಕರಣ ನೀಡಿದರು. ಮಹಾಭಾರತದ ಕಥೆಗಳಲ್ಲಿ ಏಕೆ ವೈವಿಧ್ಯತೆ ಕಂಡು ಬರುತ್ತದೆ ಎನ್ನುವುದರ ಮೂಲ ಅಂಶಗಳನ್ನು ಈ ಕಾರ್ಯಕ್ರಮದಲ್ಲಿ ತಿಳಿಸಲಾಯಿತು.

https://youtu.be/SiVeHbVtcQ0

ಭಾರತೀಯ ವೈದ್ಯಕೀಯ ಸಂಘದ 88 ನೇ ರಾಜ್ಯಸಮ್ಮೇಳನದ 2ನೇ ದಿನ ಕನ್ನಡ ವೈದ್ಯ ಬರಹಗಾರ ಸಮಿತಿ ವಿನೂತನ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಆಳ್ವಾಸ್ ಶಿಕ್ಷಣ ಸಂಸ್ಥೆಯ ಹಾಗೂ ಎಸ್.ಡಿ.ಎಂ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ವೈದ್ಯಸಾಹಿತ್ಯ ರಚನೆಯ ಬಗ್ಗೆ ಕಾರ್ಯಾಗಾರವನ್ನು ನಡೆಸಲಾಯಿತು. ಏಳು ವಿದ್ಯಾರ್ಥಿಗಳು ವೈದ್ಯಕೀಯ ವಿಷಯದ ಕುರಿತು ವಿಚಾರಗಳನ್ನು ಮಂಡಿಸಿದರು.

ಉತ್ತಮ ಲೇಖನ ಬರೆಯುವ ಬಗ್ಗೆ ಸಲಹೆ ಸೂಚನೆಗಳನ್ನು ಮನೋವೈದ್ಯರೂ, ಸಾಹಿತಿಗಳೂ ಆದ ಡಾ. ಸಿ.ಆರ್. ಚಂದ್ರಶೇಖರ್ ನೀಡಿದರು. ಕಾರ್ಯಕ್ರಮವು ಸಂವಾದದ ರೂಪದಲ್ಲಿ ನಡೆಯಿತು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ವಿಚಾರಮಂಡನೆ ಮಾಡಿದ ಹಾಗೂ ಸಂವಾದದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು. ಸಮಿತಿಯ ಅಧ್ಯಕ್ಷರಾದ ಡಾ. ಅರವಿಂದ ಪಟೇಲ್ ಅವರಿಗೆ ಸಮಿತಿಯ ಸದಸ್ಯರು ಅಭಿನಂದನಾ ಕಾರ್ಯಕ್ರಮವನ್ನು ನಡೆಸಿದರು.

ಡಾ. ಕಟೀಲ್ ಸುರೇಶ್ ಕುಡ್ವ ಹಾಗೂ ಡಾ. ಬಿ. ಎಸ್.ಲಕ್ಕೋಳ್ ಉಪಸ್ಥಿತರಿದ್ದರು. ಎಲ್ಲ ಸದಸ್ಯರ ಸಹಕಾರವನ್ನು ನೆನೆಯುತ್ತ ಇನ್ನು ಮುಂದೆಯೂ ಸಮಿತಿಯ ಕೆಲಸಗಳನ್ನು ವಿಸ್ತರಿಸುವ ಬಗ್ಗೆ ಚಿಂತನೆಯ ಮಾತುಗಳನ್ನು ಆಡಿದರು.

ವೈದ್ಯ ಸಾಹಿತಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಡಾ. ಸಿ.ಆರ್.ಸಿ, ಡಾ. ಯೋಗಣ್ಣ, ಡಾ. ಶ್ರೀಧರ್ ಭಾಗವಹಿಸಿದ್ದರು.ಡಾ. ಶುಭ್ರತ ಕೆ ಎಸ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಡಾ. ಕೆ.ಯೆಸ್ ಶ್ಯಾಮಪ್ರಸಾದ್ ಸ್ಮರಣಾರ್ಥ ಹಾಗೂ ಡಾ. ಸುನಂದಾ ಆರ್ ಕುಲಕರ್ಣಿ ಶ್ರೇಷ್ಠ ವೈದ್ಯ ಸಾಹಿತ್ಯಕೃತಿ ಹಾಗೂ ಸಾಹಿತ್ಯ ಕೃತಿ ಮತ್ತು ಹಸ್ತಪ್ರತಿ ಗಳಿಗೆ ಬಹುಮಾನ ಪಡೆದ ಕೃತಿಗಳನ್ನು ಮತ್ತು ಲೇಖಕರನ್ನು ಸಭೆಗೆ ಪರಿಚಯಿಸಲಾಯಿತು.

ಈ ಕಾರ್ಯಕ್ರಮವನ್ನು ಡಾ. ಶಿವಾನಂದ ಕುಬಸದ ಮತ್ತು ಡಾ. ಸುರೇಶ್ ವಿ ಸಗರದ ನಿರ್ವಹಿಸಿದರು. ಡಾ. ಸುನಂದ ಕುಲಕರ್ಣಿ ತನ್ನ ಹೆಸರಿನಲ್ಲಿ ವಿದ್ಯಾರ್ಥಿಗಳು ಮಾಡಿದ ಕೆಲಸಕ್ಕೆ ಪ್ರೀತಿಯ ಹರ್ಷವ್ಯಕ್ತಪಡಿಸಿದರು.

ಡಾ. ಶ್ರೀಶೈಲ ಮಾದಣ್ಣರವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಡಾ. ಅಣ್ಣಯ್ಯ ಕುಲಾಲ್ ಅವರ ಉಸ್ತಾವಾರಿಯಲ್ಲಿ ಈ ಗೋಷ್ಠಿ ಮೂಡಿ ಬಂತು.

ಸಿರಿಂಜ್ ಹಿಡಿಯುವ ಕೈ ಪೆನ್ನು ಹಿಡಿದಾಗ ಕೃತಿಯನ್ನು ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

3ನೇ ಪುಟದಿಂದ

**ಭಾಷೆಯಾಗಿ ಪರಿಚಯಿಸಿ ಕನ್ನಡ ಕಲಿಕೆಗೆ ಪ್ರೋತ್ಸಾಹಿಸುವುದು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಉನ್ನತ, ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣದಲ್ಲಿ ಮೀಸಲು ಸೌಲಭ್ಯ. ರಾಜ್ಯ ಸರಕಾರ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ಸಂಸ್ಥೆಗಳು, ಸಹಕಾರ ಸಂಘಗಳ ನೇಮಕ ಪ್ರಕ್ರಿಯೆಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಲಾಗುವುದು. ಇದೇ ನಿಟ್ಟಿನಲ್ಲಿ ಕೇಂದ್ರದಲ್ಲಿಯೂ ಭಾಷಾ ನೀತಿಯ ಕುರಿತು ಪ್ರತಿಕ್ರಿಯೆ ವ್ಯಕ್ತವಾಗಿದೆ. ಉತ್ತರ ಭಾರತದಲ್ಲಿ ಹಿಂದಿ ಭಾಷಾ ಬಳಕೆ ಮತ್ತು ಉಳಿದ ರಾಜ್ಯಗಳಲ್ಲಿ ಅಲ್ಲಿಯ ಮಾತೃ ಭಾಷೆಯಲ್ಲಿ ಉನ್ನತ ಶಿಕ್ಷಣ ಕಲಿಸುವ ಯೋಜನೆಯ ಅನುಷ್ಠಾನದ ಕುರಿತು ಯೋಜನೆ ರೂಪಿಸಲಾಗುತ್ತಿದೆ. ಈಗಾಗಲೇ ಮಧ್ಯ ಪ್ರದೇಶದಲ್ಲಿ ಹಿಂದಿಯಲ್ಲಿ ವೈದ್ಯಕೀಯ ಪಠ್ಯ ಪುಸ್ತಕಗಳನ್ನು ಬಿಡುಗಡೆ ಮಾಡಿರುವುದು ಈ ಯೋಜನೆಗೆ ಸ್ಫೂರ್ತಿಯಾಗಲಿದೆ. ಮಾತೃ ಭಾಷೆಯಲ್ಲಿ ಉನ್ನತ ಶಿಕ್ಷಣದ ಕಲಿಕೆ ಮುಂದಿನ ವರುಷಗಳಲ್ಲಿ ಸಾಧ್ಯವಾಗಬಹುದು.**

**ಅಕ್ಟೋಬರ್ 28, 29 ಮತ್ತು 30 ರಂದು ಮೂಡಬಿದಿರೆಯಲ್ಲಿ ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ 88ನೇ ವಾರ್ಷಿಕ ಸಮ್ಮೇಳನ ಅದ್ದೂರಿಯಾಗಿ ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ಕನ್ನಡ ವೈದ್ಯ ಬರಹಗಾರರ ಸಮಿತಿಗೆ ಸಮಾನಾಂತರ ವೇದಿಕೆಯ ಅವಕಾಶ ನೀಡಿದ್ದಕ್ಕಾಗಿ ಸಮ್ಮೇಳನದ ಆಯೋಜಕರಿಗೆ ಮತ್ತು ರಾಜ್ಯಾಧ್ಯಕ್ಷರಾಗಿದ್ದ ಡಾ ಸುರೇಶ ಕಟೀಲ ಕುಡ್ವಾ ಅವರಿಗೆ ನಮನಗಳು. 22–23 ನೇ ಸಾಲಿಗೆ ರಾಜ್ಯಾಧ್ಯಕ್ಷರಾಗಿ ಡಾ ಎಸ್ ಬಿ ಲಕ್ಕೋಳ್ ಅವರು ಅಧಿಕಾರ ಸ್ವೀಕರಿಸಿದ್ದು ಕನ್ನಡ ವೈದ್ಯ ಬರಹಗಾರರ ಸಮಿತಿಗೆ, ಬಳಗದ ಸದಸ್ಯರಿಗೆ ಮತ್ತು ವೈದ್ಯ ಸಂಪದಕ್ಕೆ ಸಹಕಾರ ಮತ್ತು ಮಾರ್ಗದರ್ಶನ ನೀಡಲಿದ್ದಾರೆ. ಅವರ ನೇತೃತ್ವದಲ್ಲಿ ವೈದ್ಯ ಸಂಪದ ಬೆಳೆಯುವದರಲ್ಲಿ ಸಂದೇಹವಿಲ್ಲ. ನಮ್ಮ ವೈದ್ಯ ಸಂಪದದ ವಿಭಾಗೀಯ ಸಂಪಾದಕರಾದ ಮತ್ತು ಭಾರತೀಯ ವೈದ್ಯಕೀಯ ಸಂಘದ ಹಿರಿಯ ಸದಸ್ಯರು ಮತ್ತು ಹಿರಿಯ ಸಾಹಿತಿಗಳಾದ ಡಾ ಎಚ್ ಎಸ್ ಮೋಹನ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಅತ್ಯಂತ ಸಂತಸದ ವಿಷಯ. ಅವರಿಗೆ ವೈದ್ಯ ಸಂಪದದಿಂದ ಹಾರ್ದಿಕ ಅಭಿನಂದನೆಗಳು.**

**ನಿಮ್ಮ ಅಭಿಪ್ರಾಯಗಳಿಗಾಗಿ ಕಾದಿರುವ**



**ಡಾ. ವೀಣಾ ಭಟ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಸ್ತ್ರೀರೋಗ ತಜ್ಞರು, ನಯನ ಆಸ್ಪತ್ರೆ ಭದ್ರಾವತಿ

ಸಾಂಸ್ಕೃತಿಕ

# ಶಾಖೆಗಳಲ್ಲಿ ಕನ್ನಡ ಕಾರ್ಯಕ್ರಮಗಳು

"ಆರಂಕುಸವಿಟ್ಟೊಡಂ ನೆನವುದೆನ್ನ ಮನಂ, ಬನವಾಸಿ ದೇಶಮಂ" ಎಂಬ ಆದಿಕವಿ ಪಂಪನ ದೇಶಪ್ರೇಮ ಬಿಂಬಿಸುವ ವಾಕ್ಯವನ್ನು ನೆನೆಯುತ್ತಲೇ ಕನ್ನಡ ರಾಜ್ಯೋತ್ಸವದ ಆರಂಭಕ್ಕೂ ಮುನ್ನವೇ ಹಲವಾರು ಕನ್ನಡ ಪರ ಚಟುವಟಿಕೆಗಳು ತಮ್ಮ ಬಿಡುವಿಲ್ಲದ ವೃತ್ತಿ ಜೀವನದಲ್ಲೂ ವೈದ್ಯ ವೃಂದದಲ್ಲಿ ಮುಂದುವರಿದಿರುವುದು ಸಾಬೀತಾಗುತ್ತಲಿದೆ. ವೈದ್ಯವೃಂದದ ಹಲವು ಹಿರಿಯ ಕಿರಿಯ ವೈದ್ಯ ಸಾಹಿತಿಗಳು ನಿರಂತರವಾಗಿ ಹಲವಾರು ನಿಯತ ಕಾಲಿಕಗಳಲ್ಲಿ ವೈದ್ಯಕೀಯ ಲೇಖನಗಳನ್ನು ಬರೆಯುತ್ತಿದ್ದಾರೆ. ಜೊತೆಗೆ ಕಥೆ, ಕವನ, ವಿಮರ್ಶೆಗಳನ್ನು ಪ್ರಕಟಿಸುತ್ತಿದ್ದಾರೆ. ಎಲ್ಲರೂ ಅಭಿನಂದನಾರ್ಹರು.

ಶಿರಾದ ದ್ವಾರನಕುಂಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಕೆ. ಈ ತಿಮ್ಮರಾಜುರವರು "ಪ್ರಜಾಪ್ರಗತಿ ದಿನಪತ್ರಿಕೆ" ದೀಪಾವಳಿ ವಿಶೇಷಾಂಕ 2022ಕ್ಕಾಗಿ ಏರ್ಪಡಿಸಿದ್ದ ಕಥೆಕವನ ಸ್ಪರ್ಧೆಯಲ್ಲಿ ತಮ್ಮ ಭ್ರೂಣ ಹತ್ಯೆ ಕವನಕ್ಕೆ ಪ್ರಥಮ ಸ್ಥರ್ಧೆ ಪಡೆದಿದ್ದು ಅವರ ಸಾಧನೆ ಇನ್ನಷ್ಟು ವಿಸ್ತರಿಸಲಿ ಎಂದು ಆಶಿಸುತ್ತಾ ಅವರನ್ನು ಅಭಿನಂದಿಸುತ್ತೇವೆ.

ವೈದ್ಯ ಸಾಹಿತ್ಯ ಲೇಖನಕ್ಕೆ ಕರ್ನಾಟಕ ಸಂಘದಿಂದ ನೀಡುವ ಡಾ. ಹೆಚ್ .ಡಿ. ಚಂದ್ರಪ್ಪಗೌಡ ಪ್ರಶಸ್ತಿಗೆ ಭಾಜನರಾದ ಭದ್ರಾವತಿಯ ಹಿರಿಯ ಕುಟುಂಬ ವೈದ್ಯರಾದ ಡಾ. ಕೃಷ್ಣ ಎಸ್ ಭಟ್‌ರವರು ಭಾಜನರಾಗಿದ್ದಾರೆ. ಅವರ "ಮಧುಮೇಹದೊಂದಿಗೆ ಮಧುರ ಭಾಳ್ವೆ" ಈ ಕೃತಿಗೆ ಪ್ರಶಸ್ತಿ ದೊರೆಯುತ್ತಿರುವುದು ವೈದ್ಯ ವೃಂಧದವರೆಲ್ಲರಿಗೂ ಹೆಮ್ಮೆಯ ಸಂಗತಿ. ಅವರನ್ನು ಪ್ರೀತಿ ಪೂರ್ವಕವಾಗಿ ಅಭಿನಂದಿಸುತ್ತೇವೆ.

ನಾಗಸುಧೆ ಜಗಲಿಯ "ಕವಿ–ಕಾವ್ಯ–ಮಂಥನ" ಮಾಲಿಕೆಯಲ್ಲಿ ಹುಬ್ಬಳ್ಳಿಯ ತಜ್ಞ ವೈದ್ಯರು ಹಾಗೂ ಸಾಹಿತಿಗಳು ಆದ ಡಾ. ಗೋವಿಂದ ಹೆಗಡೆಯವರು 25/09/2022ರಂದು ಭಾಗವಹಿಸಿ ಕುವೆಂಪುರವರ ಕ್ರಾಂತಿಕಾಳಿ ಮತ್ತು ಚಿತ್ರಭಾನು ಸಾನೆಟ್‌ಗಳನ್ನು ವಾಚಿಸಿ



ಅವುಗಳಲ್ಲಿನ ಭಾಷಾ ಬಳಕೆ, ಅಲಂಕಾರ, ರಸ, ಧ್ವನಿ ಇವುಗಳ ಬಗ್ಗೆ ಚರ್ಚಿಸಿದರು ಮತ್ತು ಸ್ವರಚಿತ ಕವನ ವಾಚಿಸಿದರು.

ಶಿರಸಿಯಲ್ಲಿ ಡಾ. ತನುಶ್ರೀ ಹೆಗಡೆಯವರು ಅಕ್ಟೋಬರ್ 13ರಂದು ವಿಶ್ವದೃಷ್ಟಿ ದಿನಾಚರಣೆಯ ಅಂಗವಾಗಿ ದೃಷ್ಟಿ ಕಾಳಜಿಯ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗಾಗಿ ಕನ್ನಡದಲ್ಲಿ ಹಂಚಿಕೊಂಡರು. ಸ್ತನದ ಕ್ಯಾನ್ಸರ್ ಮಾಸಿಕದ ಅಂಗವಾಗಿ ಡಾ. ಶಾಂತಾಭಟ್, ಡಾ. ಆಶಾಪ್ರಭು, ಡಾ. ಮಮತಾ ಹೆಗಡೆ, ಡಾ. ಸ್ವಾತಿ ವಿನಾಯಕ್‌ರವರು ಅಕ್ಟೋಬರ್ 16 ಮತ್ತು 19 ರಂದು ಜಾಗೃತಿ ಉಪನ್ಯಾಸವನ್ನು ಜನಸಾಮಾನ್ಯರಿಗಾಗಿ ನಡೆಸಿಕೊಟ್ಟರು.

ಸಂಗಂ ವಿಶ್ವಕವಿ ಸಮ್ಮೇಳನವನ್ನು ಬಳ್ಳಾರಿಯಲ್ಲಿ ಅರಿವು ಸಂಸ್ಥೆಯ ನೇತ್ರತ್ವದಲ್ಲಿ ಅಕ್ಟೋಬರ್ 21 ರಿಂದ 23ರವರೆಗೆ ಆಯೋಜಿಸಲಾಗಿತ್ತು. ಇಡೀ ಕಾರ್ಯಕ್ರಮದ ಸಂಘಟನಾ ಅಧ್ಯಕ್ಷರಾಗಿ ಕನ್ನಡ ವೈದ್ಯ ಬರಹಗಾರರ ಸಮಿತಿಯ ಅಧ್ಯಕ್ಷರಾದ ಡಾ.ಅರವಿಂದ್ ಪಟೇಲ್ ಹಾಗೂ

ಕೋಶಾಧ್ಯಕ್ಷರಾಗಿ ಡಾ.ಗಡ್ಡಿ ದಿವಾಕರ್ ವಹಿಸಿದ್ದರು. ಆತಿಥ್ಯ ವಿಭಾಗದ ನೇತೃತ್ವವನ್ನು ಡಾ. ಯೋಗಾನಂದರೆಡ್ಡಿ ಮತ್ತು ಡಾ.ಮಧುಸೂಧನ್ ಕಾರಗಿನೂರ್ ವಹಿಸಿದ್ದರು. ಡಾ. ಜ್ಯೋತಿ ಪಟೇಲ್ ಮತ್ತು ಡಾ. ವೀಣಾ ಎನ್ ಸುಳ್ಯಾ ರವರು ಅನುವಾದಿತ ಕವನ ವಾಚನ ಮಾಡಿದರು. ಡಾ.ಸುಮಾ ಗುಡಿ ಮತ್ತು ಡಾ.ಉಮಾಮಹೇಶ್ವರಿ ಅವರು ಸಭಾ ನಿರ್ವಹಣೆ ಮಾಡಿದರು. ಕನ್ನಡ ವೈದ್ಯರ ಬಳಗದ ಡಾ. ಸುರೇಶ್ ಸಗರದ ರಾಯಚೂರು, ಡಾ.ಅಣ್ಣಯ್ಯ ಕುಳಾಲ್ ಉಳ್ಳೂರು, ನಮ್ಮ ನಿಯೋಜಿತ ರಾಜ್ಯಾಧ್ಯಕ್ಷರಾದ ಡಾ. ಎಸ್. ಬಿ. ಲಕ್ಕೋಳ್ ಮತ್ತು ಅನೇಕ ವೈದ್ಯಸಾಹಿತಿಗಳು ಭಾಗವಹಿಸಿದ್ದು ಗಮನಾರ್ಹ.

ಹೊನ್ನಾವರದಲ್ಲಿ ಐ.ಎಂ.ಎ ಮಹಿಳಾ ಘಟಕದ ಡಾ.ಮಂಜುಳಾ ಪಟುವರ್ಧನ್‌ರವರ ನೇತೃತ್ವದಲ್ಲಿ 11/09/2022 ರಂದು ವಿಶ್ವ ಪ್ರಥಮ ಚಿಕಿತ್ಸಾ ದಿನವನ್ನು ಆಚರಿಸಿ ಸಾರ್ವಜನಿಕರು ಹಾಗೂ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗಾಗಿ ಪ್ರಥಮ ಚಿಕಿತ್ಸೆ ಹಾಗೂ ಜೀವ ಉಳಿಸುವ ಕ್ರಮಗಳ ಬಗ್ಗೆ ವಿವರಣೆ ಹಾಗೂ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. 10/10/2022 ರಂದು ವಿಶ್ವಮಾನಸಿಕ ದಿನದಂದು ಡಾ.ವಿಶಾಲ್ ಹಾಗೂ ಡಾ.ಮಂಜುಳಾ ರವರು ಮಾನಸಿಕ ಸ್ವಾಸ್ಥ್ಯದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಕನ್ನಡದಲ್ಲಿ ನಡೆಸಿಕೊಟ್ಟರು.

ಸಂಪಾದಿಸಲ್ಪಟ್ಟು 14/10/2022ರಂದು ಕರ್ನಾಟಕ ಕಲಾ ಗ್ರಾಮ ಜ್ಞಾನಭಾರತಿ ಆವರಣ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡಿದ್ದು ವೈದ್ಯ ವೃಂದಕ್ಕೆಲ್ಲಾ ಹೆಮ್ಮೆಯ ವಿಷಯ.

ಐ.ಎಂ.ಎ ಕರ್ನಾಟಕ ಶಾಖೆಯ ಮಾಜಿ ಅಧ್ಯಕ್ಷರಾದ ಡಾ.ಮಧುಸೂಧನ ಕಾರಗಿನೂರ್‌ರವರು ಸಿರಗುಪ್ಪದ ಕನ್ನಡ ಸಾಹಿತ್ಯ ಪರಿಷತ್ತಿನ ಸಾರಥ್ಯ ವಹಿಸಿ ತಮ್ಮ ನಿರಂತರ ಕನ್ನಡ ಸಾಹಿತ್ಯಪರ ಚಟುವಟಿಕೆಯನ್ನು ಮುಂದುವರೆಸಿರುತ್ತಾರೆ. 16/09/2022 ರಂದು ಶಿರಗುಪ್ಪದ ಕ.ಸಾ.ಪ ಘಟಕ ಅರಳಿಗನೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಅಲ್ಲಿನ ಮಕ್ಕಳು ಹಾಗೂ ಶಿಕ್ಷಕರ ಪರಿಕಲ್ಪನೆಯ "ಲಸಿಕೆ ನಡೆದು ಬಂದ ಹಾದಿ" ಎಂಬ ವೈಜ್ಞಾನಿಕ ನಾಟಕ ಸಭಿಕರ ಮನ ಸೂರೆಗೊಂಡಿತು. ಮಾನವ ಜನಾಂಗವನ್ನು ಮಾರಕ ರೋಗಗಳಿಂದ ರಕ್ಷಿಸಲು ಲಸಿಕೆಗಳ ಪಾತ್ರವನ್ನು ಮನಮುಟ್ಟುವ ಹಾಗೆ ನಿರೂಪಿಸಲು ಸಫಲವಾಯಿತು. ಡಾ.ಮದುಸೂಧನರವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆಗಳು ಹಾಗೂ ಕನ್ನಡ ಅಭಿಮಾನ ಬೆಳೆಸುವ ನಿಟ್ಟಿನಲ್ಲಿ ತಾಲ್ಲೂಕಿನಾದ್ಯಂತ ರಸಪ್ರಶ್ನೆ ಕಾರ್ಯಕ್ರಮಗಳು, ಮಕ್ಕಳ ಕವಿಗೋಷ್ಠಿ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುವುದನ್ನು ತಿಳಿಸಿದರು.




ರಾಯಚೂರು ಲಯನ್ಸ್ ಕ್ಲಬ್ ನೇತೃತ್ವದಲ್ಲಿ ರಾಯಚೂರು ವೈದ್ಯಕೀಯ ಸಂಘದ ಸದಸ್ಯರು ಸರಣಿ ಆಕಾಶವಾಣಿ ಸಂದರ್ಶನದಲ್ಲಿ ಭಾಗವಹಿಸಿ ಕನ್ನಡದಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ ಮಾಡುತ್ತಿದ್ದಾರೆ. ಇದುವರೆಗೆ ಪ್ರತಿ ಮಂಗಳವಾರದಂದು ಕಾರ್ಯಕ್ರಮ ಬಿತ್ತರವಾಗುತ್ತಿದ್ದು 12 ಆವೃತ್ತಿಗಳು (ಡಾ ಅಮರಜೀತ ಪಾಟೀಲ, ಡಾ ನಾಗಭೂಷಣ ಹೆಸರೂರ, ಡಾ ಜಯಪ್ರಕಶ ಪಾಟೀಲ, ಡಾ ಸಕಲೇಶ ಪಾಟೀಲ, ಡಾ ಮಹಾಲಿಂಗಪ್ಪ, ಡಾ ಶೀಲಾ ಸಗರದ, ಡಾ ಸುರೇಶ ಸಗರದ, ಡಾ ಮಲ್ಲೇಶ ಗೌಡ, ಡಾ ಅಮರ ವರ್ಮಾ, ಡಾ ರಾಘವೇಂದ್ರ ಎಸ್, ಡಾ ಆಶಾ ರಾಘವೇಂದ್ರ, ಡಾ ಮಂಜುನಾಥ ಹಟ್ಟಿ) ಬಿತ್ತರವಾಗಿವೆ.

ಡಾ. ಕೆ. ಸುಶೀಲಾರವರ ವಿರಚಿತ ಕೃತಿ ವೈದ್ಯೆಯೊಬ್ಬರ ನೆನೆಪಿನಂಗಳದಿಂದ ಪುಸ್ತಕವು 29/10/2022 ಕ್ಕೆ ಕ್ರಿಯಾ ಮಾಧ್ಯಮ ಪ್ರಕಾಶನದಿಂದ ಪ್ರಕಟವಾಗಿ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಳ್ಳಲಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ನಮ್ಮ ಬರಹಗಾರರ ಬಳಗದ 10ಕ್ಕೂ ಹೆಚ್ಚು ವೈದ್ಯರ ಲೇಖನಗಳನ್ನೊಳಗೊಂಡ "ಆರೋಗ್ಯ ಸಂಸ್ಕೃತಿ ಮಾಲಿಕೆ" ಎಂಬ ಪುಸ್ತಕವು ಡಾ. ವೀಣಾ ಎಸ್ ಭಟ್ ಹಾಗೂ ದೀಪ್ತಿ ಭದ್ರಾವತಿ ಅವರಿಂದ

ಇನ್ನೂ ಹೆಚ್ಚು ಹೆಚ್ಚುಕನ್ನಡ ಪರ ಕಾರ್ಯಕ್ರಮಗಳು ವೈದ್ಯ ಸಮುದಾಯದಿಂದ ಮೂಡಿಬರಲಿ ಎಂದು ಆಶಿಸುತ್ತಾ.



**ಡಾ ಅಪರ್ಣಾ ಶ್ರೀವತ್ಸ**
ಕ್ಯಾನ್ಸರ್ ತಜ್ಞರು,
ನಂಜಪ್ಪ ಆಸ್ಪತ್ರೆ, ಶಿವಮೊಗ್ಗ

ಆರೋಗ್ಯ ದಿನಾಚರಣೆ

# ಸ್ತನ ಕ್ಯಾನ್ಸರ್ ಅಳುಕು ಬೇಡ ಅರಿವು ಇರಲಿ



**ಡಾ. ರಶ್ಮಿ ಕುಂದಾಪುರ**
ವಿಭಾಗೀಯ ಸಂಪಾದಕರು

ಅಕ್ಟೋಬರ್ ತಿಂಗಳು ಸ್ತನ ಕ್ಯಾನ್ಸರ್ ಜಾಗೃತಿ ಮಾಸ

45 ವರ್ಷದ ಮಹಿಳೆಯೊಬ್ಬಳು ನನ್ನ ಓ.ಪಿ.ಡಿ. ಪ್ರವೇಶಿಸುತ್ತಲೇ ಎಂಥದ್ದೋ ದುರ್ಗಂಧ ನನ್ನ ಮೂಗು ತಟ್ಟಿ, ರೋಗಿಗಳ ಫೈಲ್‌ಗಳಿಂದ ಅವಳತ್ತ ಕಣ್ಣು ಹಾಯಿಸಿದೆ. ನೋಡಲು ದಷ್ಟ ಪುಷ್ಟವಾಗಿದ್ದ ಇವಳಿಗೇನಾಗಿರಬಹುದು, ಈ ಮತ್ಸ್ಯಗಂಧಿಯ ರಹಸ್ಯವೇನು ಎಂಬ ಕುತೂಹಲದಿಂದ, "ಏನಮ್ಮಾ, ಏನು ನಿನ್ನ ತೊಂದರೆ?" ಎಂದೆ. ತನಗೆ ಒಂದು ವರ್ಷದ ಹಿಂದೆ ಬಲ ಭಾಗದ ಸ್ತನದಲ್ಲಿ ಗಂಟು ಕಾಣಿಸಿತೆಂದೂ, ಇತ್ತೀಚಿಗೆ ಒಂದು ತಿಂಗಳಿನಿಂದ ಗಂಟು ದೊಡ್ಡದಾಗಿ ಬೆಳೆದು, ಗಡ್ಡೆಯಿಂದ ರಕ್ತಸ್ರಾವವಾಗುತ್ತಿದೆಯೆಂದೂ ಹೇಳಿದಳು."ಎಲ್ಲಿ, ಏನಾಗಿದೆ ನೋಡೋಣ" ಎಂದು ಪರೀಕ್ಷಿಸಿದೆ.


ದೊಡ್ಡ ಮೂಸಂಬಿ ಗಾತ್ರದ ಗೆಡ್ಡೆ ಸ್ತನದಲ್ಲಿ. ಅದು ರಣವಾಗಿ ಅದರಿಂದ ಸುರಿಯುತ್ತಿರುವ ಕೀವು, ರಕ್ತವನ್ನು ಹೀರಲು ಇಟ್ಟಿರುವ ಅರಿವೆ ಅವಳ ದುರ್ಗಂಧದ ಮೂಲ. ಕಂಕುಳಿನಲ್ಲಿ ಅದಕ್ಕಿಂತ ಸಣ್ಣದಾದ ಮತ್ತೊಂದು ಗಡ್ಡೆಯೂ ಪತ್ತೆಯಾಯಿತು.

"ಅಲ್ಲ ತಾಯಿ, ಐದು ನಿಮಿಷ ಈ ದುರ್ವಾಸನೆ ನನಗೆ ತಡೆಯಲಾಗುತ್ತಿಲ್ಲ. ನೀನು ಹೇಗೆ ಈ ಚಿತ್ರಹಿಂಸೆಯನ್ನು ಸಹಿಸಿದ್ದೀಯೆ?" ಎಂದೆ.

"ಡಾಕ್ಟ್ರೇ, ನನ್ನ ಮಗಳ ಮದುವೆ ಜವಾಬ್ದಾರಿ ಕಳೆದ ವಾರ ನಿಭಾಯಿಸಿ ಬಂದಿದ್ದೀನಿ. ಅವಳ ಮದುವೆ ಸುಸೂತ್ರವಾಗಿ ನಡೆಸಿದ ನೆಮ್ಮದಿ ನನಗಿದೆ. ಇನ್ನು ನನ್ನ ಜೀವ ಹೋದರೂ ನನಗೆ ಚಿಂತೆಯಿಲ್ಲ" ಎಂದಳು.

ಮೂರು ತಿಂಗಳ ಹಿಂದೆಯೇ ಅವಳಿಗೆ ಸ್ತನದ ಕ್ಯಾನ್ಸರ್ ಪತ್ತೆಯಾಗಿತ್ತು. ಅವಳು ಚಿಕಿತ್ಸೆ ಶುರು ಮಾಡಿ, ಕೂದಲು ಉದುರಿ ವಿಕಾರವಾದಾಗ, ಭಾವಿ ಬೀಗರಿಗೆ ಇವಳ ಕ್ಯಾನ್ಸರ್ ವಿಚಾರ ಗೊತ್ತಾಗಿ ಮದುವೆ ಎಲ್ಲಿ ನಿಂತು ಹೋಗುತ್ತೋ ಎಂದು ಭಯದಿಂದ ಚಿಕಿತ್ಸೆ ಪಡೆಯದೆ ಕಾಲ ಹಾಕಿದ್ದಳು.

ಇಂತಹಾ ರೋಗಿಗಳು ನನಗೇನು ಅಪರೂಪವಲ್ಲ. ಕಾಲಾನುಕಾಲದಿಂದ ನಮ್ಮ ಸಮಾಜ ಕ್ಯಾನ್ಸರ್ ಪೀಡಿತರನ್ನು ಕಳಂಕಿತರಂತೆ ನೋಡುವುದು ತಪ್ಪಿಲ್ಲ. ಕ್ಯಾನ್ಸರ್ ರೋಗಿಗಳು ಇಂದಿಗೂ ತಮ್ಮ ನೆರೆ ಹೊರೆಯವರು, ನೆಂಟರಿಷ್ಟರು,




ಸಹೋದ್ಯೋಗಿಗಳ ಗುಸು ಗುಸು, ಪಿಸು ಮಾತುಗಳಿಂದ ನೊಂದು ಚಿಕಿತ್ಸೆಗೆ ಹಿಂದೇಟು ಹಾಕುತ್ತಿದ್ದಾರೆ. ಕ್ಯಾನ್ಸರ್ ಚಿಕಿತ್ಸೆಯಿಂದ ನಮ್ಮ ದೇಶದ ಮಹಿಳೆಯರು ತಮಗೋಸ್ಕರ ಬಾಳುವುದು ಯಾವಾಗ ನನಗೆ ತಿಳಿಯದು.

ಸ್ತನದ ಕ್ಯಾನ್ಸರ್ ಭಾರತೀಯ ಮಹಿಳೆಯರಲ್ಲಿ ಕಂಡುಬರುವ ನಂಬರ್ ಒನ್ ಕ್ಯಾನ್ಸರ್ ಆಗಿದೆ. ಸ್ತನದ ಕ್ಯಾನ್ಸರ್ ಅಂತಿಮ ಹಂತಗಳಲ್ಲಿರುತ್ತದೆ. ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದರೆ. ಭಾರತದಲ್ಲಿ ಸ್ತನ ಕ್ಯಾನ್ಸರ್‌ನಿಂದ ಸಾವನ್ನಪ್ಪುತ್ತಿರುವವರ ಪ್ರಮಾಣವೂ ಹೆಚ್ಚಾಗಿದೆ. ಆರಂಭಿಕ ಹಂತದಲ್ಲಿ ಪತ್ತೆಯಾದಲ್ಲಿ, ಸಂಪೂರ್ಣ ಗುಣ ಪಡಿಸಬಹುದಾದ ಈ ಕ್ಯಾನ್ಸರ್, ಜನ ಜಾಗೃತಿ ಇಲ್ಲದೇ ಭಾರತದಲ್ಲಿ ಅಂತಿಮ ಹಂತದಲ್ಲಿ ಪತ್ತೆಯಾಗುತ್ತಿದೆ.

ಸ್ತನದಲ್ಲಿ ಗಂಟು, ಕಂಕುಳಿನಲ್ಲಿ ಗಂಟು, ಸ್ತನದ ಚರ್ಮ ಗಟ್ಟಿಯಾಗುವುದು, ಕೆಂಪಾಗುವುದು, ಹುಣ್ಣಾಗುವುದು, ನಿಪ್ಪಲ್ ಒಳಮುಖವಾಗುವುದು, ನಿಪಲ್‌ನಿಂದ ರಕ್ತಸ್ರಾವ ಆಗವುದು, ಸ್ತನದ ಕ್ಯಾನ್ಸರ್‌ನ ಲಕ್ಷಣಗಳು.

ಆರಂಭಿಕ ಹಂತಗಳಲ್ಲಿ ಶಸ್ತ್ರಚಿಕಿತ್ಸೆ, ಕೀಮೋಥೆರಪಿ ಮತ್ತು ರೇಡಿಯೋಥೆರಪಿಯ ಸಹಾಯದಿಂದ ಸ್ತನದ ಕ್ಯಾನ್ಸರ್ ಅನ್ನು ಸಂಪೂರ್ಣ





ಗುಣಮಾಡಬಹುದಾಗಿದೆ. ಆದರೆ "ಕ್ಯಾನ್ಸರ್" ಎಂಬ ಹೆಸರು ಕೇಳಿದ ತಕ್ಷಣ ರೋಗಿಗಳು ಜೀವ ಭಯದಿಂದ ನಲುಗಿ, ಚಿಕಿತ್ಸೆಗೆ ಹಿಂದೇಟು ಹಾಕುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳಿಂದ ಟಾರ್ಗೆಟ್ ಥೆರಪಿ, ಇಮ್ಯುನೋಥೆರಪಿಯಂತಹ ಅತ್ಯಾಧುನಿಕ ಚಿಕಿತ್ಸೆಗಳಿಂದ ಅಂತಿಮ ಹಂತದ ಸ್ತನ ಕ್ಯಾನ್ಸರ್‌ಅನ್ನು ಸಹಾ ನಿಯಂತ್ರಣ ಮಾಡಬಹುದಾಗಿದೆ.

"ಮ್ಯಾಮೋಗ್ರಫಿ" ಎಂಬ ಸರಳ ಎಕ್ಸ್‌ರೇ ಪರೀಕ್ಷೆಯ ಮೂಲಕ ಸ್ತನ ಕ್ಯಾನ್ಸರ್‌ನ ರೋಗ ಲಕ್ಷಣಗಳು ಶುರುವಾಗುವ ಮೊದಲೇ, ಕ್ಯಾನ್ಸರ್ ಅನ್ನು ಪತ್ತೆಮಾಡಬಹುದಾಗಿದೆ. ಈ ಸ್ಕ್ರೀನಿಂಗ್ ಮ್ಯಾಮೋಗ್ರಫಿ ಪರೀಕ್ಷೆಯನ್ನು 40 ವರ್ಷ ಮೇಲ್ಪಟ್ಟ ಪ್ರತಿ ಮಹಿಳೆಯೂ ಎರಡು ವರ್ಷಕ್ಕೊಂಮ್ಮೆ ಮಾಡುವುದರಿಂದ ಆರಂಭಿಕ ಹಂತಗಳಲ್ಲೇ ಸ್ತನ ಕ್ಯಾನ್ಸರ್‌ಅನ್ನು ಪತ್ತೆಮಾಡಿ, ಸೂಕ್ತ ಚಿಕಿತ್ಸೆ ಪಡೆದು, ಸಂಪೂರ್ಣ ಗುಣಮುಖರಾಗಬಹುದು. ಪಾಶ್ಚಾತ್ಯ ದೇಶಗಳಲ್ಲಿ ಮ್ಯಾಮೋಗ್ರಾಫಿ ಪರೀಕ್ಷೆಯಿಂದ ಬಹುತೇಕ ರೋಗಿಗಳು ಆರಂಭಿಕ ಹಂತಗಳಲ್ಲಿ ಪತ್ತೆಯಾಗುತ್ತಾರೆ.

ತಪಾಸಣೆಯ ನಂತರ ಈ ರೋಗಿಯ ಸ್ತನ ಕ್ಯಾನ್ಸರ್ ಮೂರನೇ ಹಂತದಲ್ಲಿತ್ತು. ಕೀಮೋಥೆರಪಿಯಿಂದ ಸ್ತನದ ಗೆಡ್ಡೆಯನ್ನು ಕರಗಿಸಿ, ಶಸ್ತ್ರ ಚಿಕಿತ್ಸೆ ಮತ್ತು ರೇಡಿಯೋಥೆರರಪಿ (ವಿಕಿರಣ ಚಿಕಿತ್ಸೆ) ಮಾಡಿ ಎರಡು ವರ್ಷಗಳ ಮೇಲಾಯಿತು. ಮೂರು ತಿಂಗಳಿಗೊಮ್ಮೆ ತಪಾಸಣೆಗೆ ಹಾಜರಾಗುತ್ತಿದ್ದಾಳೆ. ಮೊನ್ನೆ ವೆಂಕಟೇಶ್ವರ ಸ್ವೀಟ್ಸ್‌ನ ಮೈಸೂರ್ ಪಾಕ್ ಡಬ್ಬಿ ನನ್ನ ಕೈಯಲ್ಲಿಟ್ಟು, "ಮಗಳಿಗೆ ಹೆಣ್ಣು ಮಗುವಾಗಿದೆ, ಬಾಣಂತನ ಮುಗಿಸಿಕೊಂಡು, 3 – 4 ತಿಂಗಳ ನಂತರ ಚೆಕಪ್‌ಗೆ ಬರ್ತೀನಿ ಡಾಕ್ಟ್ರೇ" ಎಂದು ನನ್ನ ಅನುಮತಿ ಪಡೆದು ಹೊರಟಳು. ಮತ್ಸ್ಯಗಂಧಿಯಂತೆ ಆಗ ನನ್ನ ಬಳಿ ಬಂದಿದ್ದ ಈ ಹೆಣ್ಣು, ಕ್ಯಾನ್ಸರ್ ಮುಕ್ತಳಾಗಿ, ಈಗ ಮಗಳ ಬಾಣಂತನದ ಸಡಗರಲ್ಲಿರುವುದು ಕಂಡು ನನ್ನ ಕಣ್ಣಂಚಿನಲ್ಲಿ ಆನಂದ ಭಾಷ್ಪ ತಡೆಯಲಾಗಲಿಲ್ಲ.

ಆರೋಗ್ಯ ದಿನಾಚರಣೆ

# ಮಧುಮೇಹ ಮತ್ತು ನಿಮ್ಮ ಕಣ್ಣುಗಳು ಒಂದು ನಿಕಟ ಸಂಬಂಧ

**ಡಾ. ಮಂಜುನಾಥ ಬಿ.ಎ**
ಅಕ್ಷಿಪಟಲ ವಿಶೇಷ ತಜ್ಞರು
ಗಣೇಶ ನೇತ್ರಾಲಯ, ಶಿರಸಿ

**ವಿಶ್ವ ಮಧುಮೇಹ ದಿನಾಚರಣೆ – ನವಂಬರ್ 14**

ಮಧುಮೇಹ (Diabetes mellitus) ಇಂದು ಒಂದು ಸರ್ವವ್ಯಾಪಿ ಕಾಯಿಲೆಯಾಗಿದೆ. ಅತೀ ಶೀಘ್ರವೇ ಇದು ಒಂದು ಜಗತ್ತಿನ ಬೃಹತ್ ಸಮಸ್ಯೆಯಾಗಿ ಪರಿವರ್ತನೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದ್ದರಿಂದ "Prevention is better than cure" (ಮುನ್ನೆಚ್ಚರಿಕೆ ಚಿಕಿತ್ಸೆಗಿಂತ ಉತ್ತಮ) ಎಂಬಂತೆ ಇಂದೇ ನಾವು ಜಾಗ್ರತಗೊಳ್ಳಬೇಕು.

ಮಧುಮೇಹದಲ್ಲಿ ಎರಡು ಪ್ರಮುಖ ವಿಧಗಳು

Type 1 (Insulin dependent)

Type 2 (Insulin independent)

ಈ ಎರಡು ವಿಧಗಳಲ್ಲೂ ನಮ್ಮ ಕಣ್ಣುಗಳಿಗೆ ತೊಂದರೆಯಾಗಬಹುದು. ಆಶ್ಚರ್ಯಕರ ಸಂಗತಿಯೆಂದರೆ ಎಷ್ಟೋ ಬಾರಿ ಕಣ್ಣುಗಳ ತಪಾಸಣೆಯಿಂದ ನಿಮಗೆ ಮಧುಮೇಹದ ತೊಂದರೆಯಿದೆಯೆಂದು ನೇತ್ರತಜ್ಞರು ಪ್ರಥಮ ಬಾರಿಗೆ ಪತ್ತೆಹಚ್ಚಬಹುದು.

**ರೋಗದ ಲಕ್ಷಣಗಳು:**

- ಪದೇ ಪದೇ ಕಣ್ಣಿನ ರೆಪ್ಪೆಗಳಲ್ಲಿ ಗುಳ್ಳೆ, ಕುರ (ನಂಜಾಗುವುದು) (Stye Chalazion Blepharitis).
- ಪದೇ ಪದೇ ನಿಮ್ಮ ಕನ್ನಡಕ ನಂಬರ್ ಬದಲಾಗುವುದು.
- ವಯಸ್ಸಿಗೆ ಮುಂಚಿತವಾಗಿ ಪೊರೆ (Cataract) ಬರಬಹುದು.
- ಕಣ್ಣಿನಲ್ಲಿ ಒತ್ತಡ ಹೆಚ್ಚಾಗುವುದು (Glaucoma).
- ಮೆಳ್ಳೆಗಣ್ಣು (Paralytic squint).
- ಡಯಾಬಿಟಿಕ್ ರೆಟಿನೋಪತಿ– ಅಕ್ಷಿಪಟಲದಲ್ಲಿ ಉಂಟಾಗುವ ತೊಂದರೆ.

Cataract



**ನಿಮಗೆ ರೆಟಿನೋಪತಿ ತೊಂದರೆ ಇದೆಯೆಂದು ಹೇಗೆ ತಿಳಿಯುತ್ತದೆ?**

ನಿಮಗೆ ಮಧುಮೇಹದ ತೊಂದರೆ ಇದೆ ಎಂದು ತಿಳಿದ ತಕ್ಷಣ ನೀವು ನಿಮ್ಮ ಕಣ್ಣುಗಳನ್ನು ತಜ್ಞ ವೈದ್ಯರಲ್ಲಿ ಪರೀಕ್ಷಿಸಿಕೊಳ್ಳಬೇಕು.ಅವರು ನಿಮ್ಮ ಕಣ್ಣಿನ ಬೊಂಬೆಯನ್ನು (Pupil) ಅಗಲ ಮಾಡಿ ವಿಶೇಷ ಉಪಕರಣದಿಂದ (Indirect ophthalmoscopy) ಸೂಕ್ಷ್ಮ ಪರೀಕ್ಷೆ ಮಾಡಿ ನಿಮಗೆ ತಿಳಿಸುತ್ತಾರೆ.

**ಡಯಾಬಿಟಿಕ್ ರೆಟಿನೋಪಥಿಯ ವಿಧಗಳು**

Non proliferative Diabetic retinopathy

Proliferative Diabetic retinopathy

Diabetic maculopathy

ಮೊದಲಿಗೆ ಅತಿ ಸಣ್ಣ ರಕ್ತ ನಾಳಗಳು ಬಲೂನಿನಂತಾಗಿ ಒಡೆದುಹೋಗುತ್ತದೆ. ನಂತರ ರೆಟಿನಾದಲ್ಲಿ ಬಾವು ಉಂಟಾಗುತ್ತದೆ. ಸಕ್ಕರೆ ಕಾಯಿಲೆಯ ಅವಧಿ ಹೆಚ್ಚಾದಂತೆಲ್ಲಾ ಹೆಚ್ಚು ಹೆಚ್ಚು ರಕ್ತ ನಾಳಗಳು ನಾಶವಾಗಿ ಅಕ್ಷಿ ಪಟಲಕ್ಕೆ ರಕ್ತ ಪರಿಚಲನೆಯ ಅಭಾವ ಉಂಟಾಗುತ್ತದೆ. ರೆಟಿನಾದ ಅಂಗಾಂಶಗಳಿಗೆ ಅತೀ ಅಗತ್ಯವಿರುವ ಆಮ್ಲ ಜನಕ

ಹಾಗೂ ಗ್ಲುಕೋಸ್ ದೊರೆಯದಂತಾಗಿ ರೆಟಿನಾ ತೊಂದರೆಗೊಳಗಾಗುತ್ತದೆ. ಈ ತೊಂದರೆಯನ್ನು ನಿವಾರಿಸಲು ಹೊಸ ರಕ್ತ ನಾಳಗಳು ಹುಟ್ಟಿ ಕೊಳ್ಳುತ್ತದೆ. ಈ ಹೊಸರಕ್ತನಾಳಗಳು ಹೆಚ್ಚು ರಕ್ತ ಪೂರೈಸಲೆಂದು ಹುಟ್ಟಿದ್ದರೂ ಅವುಗಳಿಂದ ಅಪಾಯವೇ ಹೆಚ್ಚು. ಏಕೆಂದರೆ ಅವು ಮಾಮೂಲು ರಕ್ತನಾಳಗಳ ರೀತಿ ಗಡಸಾಗಿರುವುದಿಲ್ಲ. ತೆಳುವಾಗಿದ್ದು ಅತ್ಯಂತ ನಾಜೂಕಾಗಿರುವ ಈ ರಕ್ತನಾಳಗಳು ವ್ಯಕ್ತಿ ಜೋರಾಗಿ ಕೆಮ್ಮಿದರೆ ಅಥವಾ ತಿಣುಕಿದರೆ ಒಡೆದು ರಕ್ತಸ್ರಾವವನ್ನುಂಟು ಮಾಡಬಹುದು. ಹೀಗಾಗಿ ನಿಧಾನವಾಗಿ ಪ್ರಾರಂಭವಾಗುವ ಈ ರೆಟಿನಾದ ತೊಂದರೆ, ನಂತರ ತೀವ್ರಗೊಂಡು ಹೊಸ ರಕ್ತನಾಳಗಳು ಒಡೆದು ಕಣ್ಣಿನ ಒಳಗೆ ರಕ್ತಸ್ರಾವವಾಗಿ ಇದ್ದಕ್ಕಿದ್ದಂತೆ ಅಂಧತ್ವ ಉಂಟಾಗುತ್ತದೆ.

ಈ ಎಲ್ಲಾ ಬದಲಾವಣೆಗಳಿಗೆ "ಡಯಾಬಿಟಿಕ್ ರೆಟಿನೋಪಥಿ" ಎನ್ನುತ್ತಾರೆ.

ಇಡೀ ದೇಹದಲ್ಲಿ ಕೇವಲ ಕಣ್ಣಿನ ರೆಟಿನಾದೊಳಗೆ ಮಾತ್ರ ನಾವು ರಕ್ತ ನಾಳಗಳನ್ನು ಹಾಗೂ ರಕ್ತ ಪರಿಚಲನೆಯನ್ನು ಕಣ್ಣಾರೆ ನೋಡಲು ಸಾಧ್ಯ. ಹೀಗಾಗಿ ದೇಹದ ಪ್ರತಿಯೊಂದು ಅಂಗದ ರಕ್ತನಾಳಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕೇವಲ ಕಣ್ಣಿನ ತಪಾಸಣೆಯಿಂದ ಪತ್ತೆ ಹಚ್ಚಬಹುದು. ಉದಾಹರಣೆಗೆ ನಾವು ರೆಟಿನಾದ ರಕ್ತನಾಳಗಳನ್ನು ನೋಡಿ ಸಕ್ಕರೆ ಕಾಯಿಲೆಯಿಂದ ಮೂತ್ರಪಿಂಡ ಅಥವಾಕಿಡ್ನಿಗಳಮೇಲೆ ಆಗುತ್ತಿರುವ ತೊಂದರೆಯನ್ನು ತಿಳಿದುಕೊಳ್ಳಬಹುದು ಹಾಗೂ ಅದಕ್ಕೆ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡಬಹುದು. ಹೀಗೆ ನಿಯಮಿತವಾಗಿ ಕಣ್ಣಿನ ಅಕ್ಷಿಪಟಲದ ತಪಾಸಣೆಯಿಂದ ದೃಷ್ಟಿಯ ಮೇಲಾಗಬಹುದಾದ ತೊಂದರೆಗಳಷ್ಟೇ ಅಲ್ಲ, ದೇಹದ ಇತರ ಅಂಗಗಳ ಮೇಲೆ ಸಕ್ಕರೆ ಕಾಯಿಲೆಯಿಂದ ಆಗಲಿರುವ ದುಷ್ಪರಿಣಾಮಗಳ ಬಗ್ಗೆಯೂ ವೈದ್ಯರು ತಿಳಿದುಕೊಳ್ಳಬಲ್ಲರು.

ದೇಹದ ಪ್ರತಿ ಅಂಗಕ್ಕೂ ರಕ್ತ ಪರಿಚಲನೆಯ ಮೂಲಕ ರಕ್ತ ಒದಗಿಸುವ ಈ ಜೀವನಾಡಿಗಳಾದ ರಕ್ತನಾಳಗಳು ಘಾಸಿಗೊಂಡಾಗ ದೇಹದ ಪ್ರತಿಯೊಂದು ಅಂಗಾಂಗಗಳೂ ಹಾನಿಗೊಳಗಾಗುತ್ತವೆ. ಅದರಲ್ಲಿ ಮುಖ್ಯವಾಗಿ ತೊಂದರೆಗುಂಟಾಗುವ ಅಂಗಗಳು ಕಣ್ಣು,ಮೂತ್ರಪಿಂಡ,ನರಮಂಡಲ ಹಾಗೂ ಕಾಲು(ಪಾದಗಳು).

ಡಯಾಬಿಟಿಕ್ ರೆಟಿನೋಪತಿಯ ವಿಧಗಳ ಒಂದು ಪಕ್ಷಿನೋಟ.

1. Non proliferative ಡಯಾಬಿಟಿಕ್ ರೆಟಿನೋಪತಿ:

ಈ ಹಂತದಲ್ಲಿ ನಿಮ್ಮ ಕಣ್ಣಿನ ಅಕ್ಷಿಪಟಲದ ರಕ್ತನಾಳಗಳಲ್ಲಿ ಚಿಕ್ಕ ಚಿಕ್ಕ ಗುಳ್ಳೆಗಳಾಗಬಹುದು. ಮತ್ತು ಅವು ಕೆಲವೊಮ್ಮೆ ಒಡೆದು ಸೋರಬಹುದು.





Mild NPDR Moderate NPDR

2 .Diabetic maculopathy:

ಈ ಹಂತದಲ್ಲಿ ಅಕ್ಷಿಪಟಲದ ಮಧ್ಯ ಭಾಗವಾದ ಮ್ಯಾಕುಲದಲ್ಲಿ ಬಾವು/ಊತ ಉಂಟಾಗಿ ನಿಮ್ಮ ಸೂಕ್ಷ್ಮ ದೃಷ್ಟಿಗೆ (ಓದುವುದು, ಹತ್ತಿರದ ಕೆಲಸ, ವಾಹನ ಚಲಾಯಿಸುವುದು ಇತ್ಯಾದಿ) ತೊಂದರೆಯಾಗಬಹುದು.

Diabetic Maculopathy

3. Proliferative retinopathy :


ಈ ಹಂತದಲ್ಲಿ ನಿಮ್ಮ ಅಕ್ಷಿಪಟಲದಲ್ಲಿ ಅತಿ ಸೂಕ್ಷ್ಮ ಹೊಸ ರಕ್ತನಾಳಗಳು ಬೆಳೆದು ಅವುಗಳಿಂದ ಊತ(ಬಾವು) ಮತ್ತು ರಕ್ತಸ್ರಾವ ಉಂಟಾಗಬಹುದು. ಇದರಿಂದಾಗಿ ನಿಮ್ಮ ಕಣ್ಣುಗಳ ಮುಂದೆ ಕಪ್ಪು ಚುಕ್ಕೆಗಳು ಓಡಾಡಿದಂತಾಗಬಹುದು, ಮತ್ತು ಅತಿ ವೇಗವಾಗಿ ನಿಮ್ಮ

ದೃಷ್ಟಿ ಕಡಿಮೆಯಾಗಬಹುದು.

Proliferative Diabetic Retinopathy PDR

ಪರಿಹಾರ ಮತ್ತು ಚಿಕಿತ್ಸೆ :- ("ಮಧುಮೇಹಿಗಳಿಗೆ ಮಾಹಿತಿಯೇ ಮದ್ದು")


ಸಕ್ಕರೆ ಕಾಯಿಲೆಯ ರೋಗಿಯಾಗಿದ್ದರೆ, ತಮ್ಮ ದೃಷ್ಟಿಯನ್ನು ಹೇಗೆ ಕಾಪಾಡಿಕೊಳ್ಳಬೇಕು ? ಇದಕ್ಕೆ ಉತ್ತರ ಅತ್ಯಂತ ಸರಳ. ಈ ಡಯಾಬಿಟಿಕ್ ರೆಟಿನೋಪತಿಯಲ್ಲಿ "ರೋಗದ ಚಿಕಿತ್ಸೆಗಿಂತಾ ರೋಗ ಬಾರದಂತೆ ತಪ್ಪಿಸುವುದು




ಮೇಲು" ಎಂಬುದು ಚೆನ್ನಾಗಿ ಅನ್ವಯವಾಗುತ್ತದೆ. ಡಯಾಬಿಟಿಕ್ ರೆಟಿನೋಪತಿ ಒಮ್ಮೆ ಪ್ರಾರಂಭವಾದರೆ ಹಲವಾರು ಹಂತಗಳನ್ನು ದಾಟಿ ಕೊನೆಗೆ ಅಂಧತ್ವಕ್ಕೀಡು ಮಾಡುತ್ತದೆ. ಈ ಯಾವುದೇ ಹಂತದಲ್ಲಿ ದೃಷ್ಟಿಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲವಾದ ಕಾರಣ ರೋಗಿ ಕಣ್ಣಿನ ಬಗ್ಗೆ ಯಾವುದೇ ಗಮನ ಹರಿಸದೆ ಇರುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಸಕ್ಕರೆ ಕಾಯಿಲೆ ರೋಗಿಗಳಿಗೆ ಈ ರೆಟಿನೋಪಥಿಯ ಬಗ್ಗೆ ಮಾಹಿತಿ ನೀಡುವುದು ಅತ್ಯಗತ್ಯವಾಗಿದ್ದು, ಈ ಶಿಕ್ಷಣ ಸಕ್ಕರೆ ಕಾಯಿಲೆ ಚಿಕಿತ್ಸೆಯಲ್ಲೇ ಒಂದು ಅವಿಭಾಜ್ಯ ಅಂಗವಾಗಬೇಕಾಗಿದೆ.

ಸಕ್ಕರೆ ಕಾಯಿಲೆಯ ರೋಗಿ ನೇತ್ರ ತಜ್ಞರ ಬಳಿ ಬಂದಾಗ ಅವರು ರೋಗಿಯ ಅಕ್ಷಿಪಟಲವನ್ನು ತಪಾಸಣೆ ಮಾಡಿ ಡಯಾಬಿಟಿಕ್ ರೆಟಿನೋಪತಿ ಪ್ರಾರಂಭವಾಗಿದೆಯೋ ಇಲ್ಲವೇ ಎಂದು ನೋಡುತ್ತಾರೆ. ಆಕಸ್ಮಾತ್ ಅದು ಪ್ರಾರಂಭವಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ ಎಂದು ಪತ್ತೆ ಹಚ್ಚುತ್ತಾರೆ. ಪ್ರಾರಂಭಿಕ ಹಂತಗಳಲ್ಲಿ ಡಯಾಬಿಟಿಕ್ ರೆಟಿನೋಪಥಿಗೆ ಯಾವ ಕಣ್ಣಿನ ಚಿಕಿತ್ಸೆಯು ಅಗತ್ಯವಿಲ್ಲ. ಪ್ರತಿ ಆರು ತಿಂಗಳಿಗೊಮ್ಮೆ ನಿಯಮಿತವಾಗಿ ರೋಗಿಯ ಅಕ್ಷಿಪಟಲ(ರೆಟಿನಾ)ವನ್ನು ತಪಾಸಣೆ ಮಾಡುತ್ತಿದ್ದರೆ ಸಾಕು.

ಡಯಾಬಿಟಿಕ್ ರೆಟಿನೋಪತಿಯ ಚಿಕಿತ್ಸೆಯನ್ನು ನಿಮ್ಮ





ಕಣ್ಣುಗಳ ಪರೀಕ್ಷೆಯ ನಂತರ ನಿಮ್ಮ ರೇಟಿನಾ ತಜ್ಞರು ನಿರ್ಧರಿಸುತ್ತಾರೆ.

**ವಿವಿಧ ಬಗೆಯ ಚಿಕಿತ್ಸೆಗಳು :**

Intravitreal Anti VEGF ಚುಚ್ಚುಮದ್ದುಗಳು Argon Green Laser Steroid ಚುಚ್ಚುಮದ್ದುಗಳು.

ಶಸ್ತ್ರ ಚಿಕಿತ್ಸೆ (Vitrectomy) ಇತ್ಯಾದಿ.

ಈ ಎಲ್ಲಾ ಮೇಲ್ಕಂಡ ಚಿಕಿತ್ಸೆಯ ಮೂಲ ಉದ್ದೇಶ ನಿಮ್ಮಲ್ಲಿ ಆಗಿರುವ ತೊಂದರೆಯನ್ನು ನಿಯಂತ್ರಿಸುವುದು ಮತ್ತು ಅದು ಮತ್ತೆ ಉಲ್ಬಣಗೊಳದಂತೆ ತಡೆಯುವುದು. ಆದುದರಿಂದ ನಿಮಗೇನಾದರೂ ಡಯಾಬಿಕ್ ತೊಂದರೆ ಇದ್ದರೆ ಇಂದೇ ನಿಮ್ಮ ಕಣ್ಣುಗಳನ್ನು ಕಾಲಕಾಲಕ್ಕೆ ತಜ್ಞ ವೈದ್ಯರ ಬಳಿ ಒಮ್ಮೆ ಪರೀಕ್ಷಿಸಿಕೊಳ್ಳಿ.

"ದೃಷ್ಟಿಯ ಸುರಕ್ಷೆ- ನಮ್ಮ ಧ್ಯೇಯ"



ಕಾವ್ಯ ಸಂಪದ

**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು

**ಡಾ. ಸಂಜೀವ ಕುಲಕರ್ಣಿ**
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞರು, ಧಾರವಾಡ

# ಪುಟ್ಟ ಕವಿತೆಯ ಅಳು

ಆರಿಲ್ಲ ದೇಹದ ದಣಿವು ನಿದ್ದೆ ಇನ್ನೂ ಸಾಕಾಗಿಲ್ಲ
ಆದರೂ ಬಾನೇರಿ ಬಂದಿದ್ದಾನೆ ಭಾನು
ಏನೂ ತಿಳಿಯದ ಭೂಪನಂತೆ
ತೆರೆಯದ ಕಣ್ಣು ತೆರೆಯುತ್ತ
ನಿಧಾನ ಜೀವಂತವಾಗುತ್ತ
ಬಂದರೆ ಅಂಗಳಕ್ಕೆ
ಮಾವಿನ ಮರದ ಮೈತುಂಬ ಕೆಂಪು ಕೆಂಪು ಚಿಗುರು
ಕೂಡಲೇ ಆ ಚಿಗುರಿನ ಕೆಂಪಿನೊಳಗಿನಿಂದಲೇ
ನಸು ನಗುತ ಮೆಲುದನಿಯಲ್ಲಿ
ಕೇಳಿತೊಂದು ಪುಟ್ಟ ಕವಿತೆ
ಬರಲೇ ಈಗ ಬಳಿಗೆ ನಿನ್ನ ಒಳಗೆ
ಬೇಡ ಈಗ ಬೇಡ
ಮುಂಜಾನೆಯ ಗಡಿಬಿಡಿ ಹತ್ತಾರು ಯೋಚನೆಗಳು
ತಲೆ ತುಂಬ ನಿನ್ನೆಯ ಅರ್ಧ ಮುಗಿದ ಕೆಲಸದ ತಂಗಳು

ಮಧ್ಯಾಹ್ನ ಆಸ್ಪತ್ರೆಯಲ್ಲಿ ಕಾಯುತ್ತಿದ್ದಾರೆ
ಮಗಳನ್ನು ಹೆರಿಗೆಗೆ ಸೇರಿಸಿದ ಅವ್ವ ಅಪ್ಪ
ಅಸಹಾಯಕತೆಯ ಮುದ್ದೆಗಳು
ಕಣ್ಣು ಭಯ ಆತಂಕದ ಆಳ ಬಾವಿ
ಮುಖದ ತುಂಬ ಬಡತನದ ಕಾರ್ಮೋಡ
ನಡುವೆಯೇ ಮಿಂಚಿ ಕೇಳಿತು
ಆ ಪುಟ್ಟ ಕವಿತೆ
ನಾ ಬರಲೆ ಸನಿಹ
ಬೇಡ ಈಗ ಬೇಡ
ನೋಡಲ್ಲಿ ಹೊರಗೆ ಇನ್ನೂ ಇಪ್ಪತ್ತು ಗರ್ಭಿಣಿಯರು
ಕಾಯುತ್ತಿದ್ದಾರೆ ಗೊಣಗುತ್ತ ತಮ್ಮ ತಪಾಸಣೆಗಾಗಿ

ಸಂಜೆ ಆರಕ್ಕೆ ಹದಿನಾರು ತಾಸು
ಬೇನೆ ತಿಂದು
ಎಲ್ಲ ದೇವರ ಬೈದು ಚೀರಾಡಿ
ಕೊನೆಗೂ ಹಡೆದು ಪಾರಾದಳು ಸಂಗವ್ವ
ಹುರಿ ಕತ್ತರಿಸುವ ಮೊದಲೇ
ಹಾಕಿದಾಗ ಮಗುವನ್ನು ಅವಳೆದೆಯ ಮೇಲೆ
ದಣಿ ದಣಿದು ಸೋತು ಬತ್ತಿ
ಆರಿದ ಅವಳ ಮುಖದ ಕೆರೆಯಲ್ಲೂ
ಅರೆಗಳಿಗೆಯಲ್ಲಿಯೇ
ಅರಳಿತು ಸ್ವರ್ಗದ ನಗುತಾವರೆ
ಕೂಡಲೆ ಆ ನಗುವಿನ ಹಿಂದಿನಿಂದ ಇಣುಕಿ
ಕೇಳಿತು ಆ ಪುಟ್ಟ ಕವಿತೆ
ಬರಲೆ ನಾ ಈಗ ಸ್ವಲ್ಪ ಒಳಗೆ
ಬೇಡ ಈಗ ಬೇಡ
ಆಗಿಲ್ಲ ಊಟ ಇನ್ನೂ ಕೆಲಸ ಮುಗಿದಿಲ್ಲ
ಬಹಳ ತಡವಾಗಿದೆ ಪರಿಸರದ ಸಭೆಗೆ

ರಾತ್ರಿ ಎಲ್ಲ ಸಾಕು ಇನ್ನೇನೂ ಬೇಡ ಅನಿಸಿ
ದಣಿದ ಮೈ ದಣಿದ ಮನಸ್ಸು
ಎರಡನ್ನೂ ಹಾಸಿಗೆಯ ಮೇಲೆ ಚೆಲ್ಲಿ
ಸುಮ್ಮನೆ ಬಿದ್ದುಕೊಂಡಾಗ
ಮೌನದಲ್ಲೇ ಸಂತೈಸಿ ಬಿಗಿದಪ್ಪಿ
ಮಡದಿ ಮುತ್ತಿಟ್ಟಾಗ
ಆ ಅಮೃತದ ಸಿಹಿಯೊಳಗಿಂದಲೆ
ಹೊರಗಿಣುಕಿ ಕೇಳಿತು
ಆ ಪುಟ್ಟ ಕವಿತೆ ಮತ್ತೆ
ಈಗಲಾದರೂ ಬರಲೆ ನಾನು ನಿನ್ನ ಹತ್ತಿರಕೆ
ಬೇಡ ದಯ ಮಾಡಿ ಈಗ ಬೇಡ
ಉಶ್ ! ಈಗ ಏನೂ ಶಕ್ಯವಿಲ್ಲ

ನಿದ್ದೆ ಬಂದು ರೆಪ್ಪೆಗಳ ಮುಸುಕು ಎಳೆಯುತ್ತಿದೆ
ಮುಚ್ಚಿದ ಕಣ್ಣುಗಳೆದುರು ವಿಶಾಲ ಮಬ್ಬುಗತ್ತಲ ಬಯಲು
ಆ ಬಯಲಿನ ಆಚೆ ತುದಿಯಲ್ಲಿ ಅದೋ
ಅಷ್ಟೊಂದು ದೂರದಲ್ಲಿ ಕುಳಿತಿದೆ
ಆ ಪುಟ್ಟ ಕವಿತೆ
ಮೌನವಾಗಿ ರೋದಿಸುತ್ತ.

## ಕಾವ್ಯ ಸಂಪದ



**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು, ಹುಬ್ಬಳ್ಳಿ

# ಗಜಲ್

ಹೊಂದಿಸಿ ಬರೆಯುವುದು ಕವಿತೆಯಲ್ಲ
ಸಂಧಿ ಬಿಡಿಸಿ ಹೇಳುವುದು ಕವಿತೆಯಲ್ಲ

ಎಷ್ಟೊಂದು ಪ್ರಶ್ನೆಗಳಿವೆ ಪತ್ರಿಕೆಯಲ್ಲಿ
ಉತ್ತರಿಸುತ್ತ ಹೋಗುವುದು ಕವಿತೆಯಲ್ಲ

ವಿಷಯಗಳೆಷ್ಟು, ವಿವರಗಳೆಷ್ಟೊಂದು !
ಎಲ್ಲ ಕಲೆ ಹಾಕುವುದು ಕವಿತೆಯಲ್ಲ

ತನ್ನಷ್ಟಕ್ಕೆ ಕುಪ್ಪಳಿಸಿ 'ಕೀಚ್' ಎಂದ ಹಕ್ಕಿ
ತಾಲೀಮು ಮಾಡುವುದು ಕವಿತೆಯಲ್ಲ

ಅಂತಃಸ್ಫೂರ್ತಿಯೇ ಎಲ್ಲವೂ 'ಜಂಗಮ'
ಕಟ್ಟೊಡೆದು ಚಿಮ್ಮದುದು ಕವಿತೆಯಲ್ಲ



**ಡಾ ತನುಶ್ರೀ ಹೆಗಡೆ**
ಗಣೇಶ ನೇತ್ರಾಲಯ, ಶಿರಸಿ

# ಗಝಲ್

ನಾಲ್ಕು ಹೆಜ್ಜೆ ಜತೆಯಾಗಿ ನಡೆಯೋಣ ಬಾ
ಮೆಲುಕು ನೆನಪಿನ ಬುತ್ತಿ ಪಡೆಯೋಣ ಬಾ

ತೋಳು ಬಂಧನಕೆ ನಾಚಿ ಸರಿಯುವೆ ಏಕೆ
ಪುಳಕ ಬೆರಸಿ ರಸನಿಮಿಷ ಕಡೆಯೋಣ ಬಾ

ತುಟಿಗಳ ಸುರೆ ಸೂರೆಯಾಗದಿರಲಿ ಹಾಗೆ
ರೆಪ್ಪೆ ಮುಚ್ಚಿ ಅಲ್ಲೆ ಕ್ಷಣವ ತಡೆಯೋಣ ಬಾ

ನಮ್ಮೆದೆ ಸಂಮಿಲನ ರೆಕ್ಕೆ ಕಟ್ಟುತಿದೆ ನೋಡು
ಒಲವ ಹರವಿ ಹೊಂಗನಸ ಹಿಡಿಯೋಣ ಬಾ

'ತನು'ಮನದ ಭಾವತರಂಗ ಅನುರಣಿಸುತಿರಲಿ
ಮೌನದಲಿ ನಾವು ಒಂದಾಗಿ ಮಿಡಿಯೋಣ ಬಾ



**ಡಾ.ಕವಿತಾ ಸದಾಶಿವ**
ಭದ್ರಾವತಿ

# ಜಾಗೃತಿ


ಈ – ಜಾತಿ , ಆ – ಜಾತಿ , ಸ್ವ – ಜಾತಿ
ತಲೆಗೊಂದರಂತೆ ಜಾತಿ....
ನಡೆದಿದೆ ಇಂದು ಈ ಜಾತಿಗಣತಿ.
ಕಳೆದುಕೊಂಡು ಮತಿ
ಮಾಡುತಿಹರು ಮನುಜರು ಈ
ವಿಷಮ ಸ್ಥಿತಿ.
ಕಳೆದುಹೋಗಿದೆ ಪ್ರೇಮ – ಪ್ರೀತಿ,
ಬೀದಿ – ಬೀದಿಗಳಲಿ
ಕಂಡಿದೆ ಹಗೆಯ ದಳ್ಳುರಿ.
ಮನುಜರಿಗಾಗಿದೆ ಇಂದು ಈ
ವಿಸ್ಮೃತಿ.
ದೇವನಿಹನು ನಮ್ಮ – ನಿಮ್ಮಲ್ಲಿ
ಎಂದೆನುತಾ ಮಾಡಿರೋ ಸುಸ್ಥಿತಿ
ಆಗದಿರಲಿ ಅಧೋಗತಿ.
ಮೂಡಲಿ ಎಲ್ಲರಲಿ
ಜಾಗೃತಿ



# ಪದಬಂಧ – 6

**ಡಾ. ರಮೇಶ ಬಾಬು ಕೆ**
ಹುಬ್ಬಳ್ಳಿ

**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್



**ಸೂಚನೆ:** ಸುಳಿವುಗಳಲ್ಲಿ ಇಂಗ್ಲೀಷ್ ಪದಗಳನ್ನು ಬಳಸಿದ್ದರೂ, ಎಲ್ಲ ಉತ್ತರಗಳು ಶುದ್ಧ ಕನ್ನಡದಲ್ಲಿವೆ.

**ಸುಳಿವುಗಳು ಎಡದಿಂದ ಬಲಕ್ಕೆ:**

1. ಅಕ್ಟೋಬರ್ 16 ರಂದು.......ದಿನವಾಗಿ ಆಚರಿಸುತ್ತಾರೆ (5)
2. ಅಮೀಬಾ ಇಂತಹುದೊಂದು ಜೀವಿ (5)
5. ಪಾರ್ಶ್ವವಾಯುವನ್ನು ಹೀಗೆ ಕೂಡಾ ಕರೆಯುತ್ತಾರೆ (4)
6. ಇದು ಸಸ್ಯಗಳಲ್ಲಿರುವ ಹೆಮೋಗ್ಲೋಬಿನ್ ನಂತಹ ಸಂಯುಕ್ತ ವಸ್ತು (3)
7. ಇದು ಮೂತ್ರಪಿಂಡಗಳಿಗೆ ಹಾನಿಕಾರಕವಾದರೂ ಇದರ ಲವಣವನ್ನು ಮೂತ್ರವಿಸರ್ಜನೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಹಿಂದೆ ಬಳಸುತಿದ್ದರು (4)
8. ಇದು ಬಹಳಷ್ಟು ವ್ಯಾಧಿಗಳಿಗೆ ಪ್ರತಿಬಂಧಕೋಪಾಯವಾಗಿದೆ (3)
10. .......ಶಾಸ್ತ್ರದ ಆಳವಾದ ಅರಿವು ಶಸ್ತ್ರಚಿಕಿತ್ಸಕರಿಗೆ ಬಹಳ ಮುಖ್ಯವಾದುದು (5)
11. ಏಡಿಗಂತಿ
12. ಅಭಿಧಮನಿಗಳು ಇಂತಹ ರಕ್ತವನ್ನು ಹೃದಯದೆಡೆಗೆ ಕೊಂಡೊಯ್ಯುತ್ತವೆ.
14. ಇದು anxiety depression syndrome ನ ಒಂದು ಭಾಗವಾಗಿದೆ.

15 ಮತ್ತು 16. ಪತಿಯ ಹಾರವಲ್ಲ, ಕುತ್ತಿಗೆಯ ಹಾಲ್ರಸ ಗ್ರಂಥಿಗಳಿಗೆ ಕ್ಷಯರೋಗ ತಗುಲಿರುವುದು (2,2)

17. ಈ ಮಹರ್ಷಿ ವೈದ್ಯ ಸಂಹಿತೆಯೊಂದನ್ನು ರಚಿಸಿದ್ದಾರೆ (3)

ನೀಲಿ ಶಿಶುಗಳ ಸಮಸ್ಯೆ.......ವಾದಂತಹುದು (4)

21. ಈ ಹಸಿರು ತರಕಾರಿ ಕಬ್ಬಿಣದಂಶವನ್ನು ಹೆಚ್ಚಾಗಿ ಹೊಂದಿದೆ (3)
22. ಸೆರೆಬೆಲ್ಲಮ್ ಗೆ ಕನ್ನಡದಲ್ಲಿ ಹೀಗೆ ಕರೆಯುತ್ತಾರೆ (4)
23. ಆಹಾರದಲ್ಲಿ ಇದರಿಂದಾಗಿ ಹಲವಾರು ಸಮಸ್ಯೆಗಳು ತಲೆದೋರಬಹುದು (5)
24. ಇದು ರೇಬೀಸ್ ನ ಎಲ್ಲ ಲಕ್ಷಣಗಳಿಗೆ ಕಾರಣ (5)

**ಮೇಲಿನಿಂದ ಕೆಳಕ್ಕೆ:**

1. ಧೀರ್ಘಕಾಲದ ಕ್ಲೋರೋಕ್ವಿನ್ ಚಿಕಿತ್ಸೆಯಿಂದ ಇದಕ್ಕೆ ಹಾನಿಯಾಗಬಹುದು (5)
3. ಡಾರ್ವಿನ್ ಮಾಡಿದ ವಾದ (5)
4. ಮೀನಾಮಾಟಾ ಕಾಯಿಲೆ ಇಂತಹ ಕಾಯಿಲೆಗಳಿಗೆ ಒಂದು ಉತ್ತಮ ಉದಾಹರಣೆ (7)
9. ಈ ಕಾಯಿಲೆಗೆ ಮೊತ್ತಮೊದಲು ಲಸಿಕೆಯನ್ನು ಕಂಡುಹಿಡಿಯಲಾಯಿತು (3)
13. ಚಿಕ್ಕ ವಯಸ್ಸಿನಲ್ಲಿ ಕಾಣಿಸಿಕೊಳ್ಳುವ ಈ ಕಾಯಿಲೆ ಅಪರೂಪಕ್ಕೆ ಮುಂದೆ SSPE ಎಂಬ ಸಮಸ್ಯೆಗೆ ಕಾರಣವಾಗಬಹುದು (3)
14. ಜೋಸೆಫ್ ಪ್ರೀಸ್ಲಿ ಕಂಡುಹಿಡಿದ ಈ ಅನಿಲ ವೈದ್ಯಕೀಯದಲ್ಲಿ ಬಹಳ ಮಹತ್ವ ಪಡೆದಿದೆ (5)
18. Enteritis ಗೆ ಸಂವಾದಿ ಕನ್ನಡ ಪದ (5)
19. ಪ್ರಿಫ್ರಾಂಟಲ್ ಕಾರ್ಟೆಕ್ಸ್ ದೇಹದ.......ಯನ್ನು ನಿಯಂತ್ರಿಸುತ್ತದೆ (3)

## ಪದಬಂಧ 5 ರ ಸರಿಯುತ್ತರಗಳು

**ಎಡದಿಂದ ಬಲಕ್ಕೆ:** 1. ಅನುವಂಶಿಕ 3. ವಾಮನರೂಪಿ
7. ವಸಡು 8. ಮನುಜ (ಷ್ಯ) 9. ಖನಿಜ 10. ಕೆಸರು
11. ಆಯುಷ್ಯ 12. ಪ್ರೇರಕ 13. ರೋಗಾಣು
14. ತಿಗಣೆ
16. ಮಾರ್ದನಿ
18. ಬಾವುಲಿ 19. ಸುಗಂಧ 20. ದ್ವಿದಳ 23. ತಳಿವಾಹಕ
24. ವೃಷಣ ಗ್ರಂಥಿ

**ಮೇಲಿನಿಂದ ಕೆಳಕ್ಕೆ:** 1. ಅರಿವಳಿಕೆ 2. ಶಿಲೆ 4. ಮಜ್ಜೆ 5. ಪಿತ್ತಜನಕ 6. ಧನುರ್ವಾಯು 13. ರೋಗಬಾಧಿತ 15. ಗಳಗಂಡ 17. ನಿರ್ನಾಳ ಗ್ರಂಥಿ 21. ಪ್ಲೀಹ 22. ವಿಷ


**ಸೂಚನೆ:**
ಸರಿ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದುಸರಿ ಉತ್ತರ ಕಳಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಉತ್ತರವನ್ನು padabhandhavs@gmail.com ಕಳಿಸಿ

## ನಗೆಹನಿ–ಹನಿಗವನ




**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್






**ಡಾ ಅರುಣಾ ಯೆಡಿಯಾಳ್**
ಮಂಗಳೂರು





**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು

# ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ಸಿನೇರಿಯಸ್ ಟಿಟ್



**ಡಾ. ಅರವಿಂದ ಪಟೇಲ್**
ರೂಡಿ ಕೇಕ್



**ಡಾ. ಅರವಿಂದ ಪಟೇಲ್**
ಉದ್ದ ಬಾಲದ ಶ್ರೈಕ್




ಡಾ. ನಾಗರಾಜ್ ಸಿ ಎಸ್

ಮರ ಕುಟುಕ



ಡಾ. ನಾಗರಾಜ್ ಸಿ ಎಸ್

ಭಾರತೀಯ ಪಿಟ್ಟ

**ಅಮೇರಿಕಾದಲ್ಲಿ ಫೋಟೋಗ್ರಾಫಿ**

**ಡಾ. ಮಂಜುನಾಥ್ ಎಸ್.** ದಾವಣಗೆರೆ









